# ದೆಹಲಿ ಕರ್ನಾಟಕ ಸಂಘದ ಅಭಿಮತ

ನವೆಂಬರ್ 2012
ಬೆಲೆ ರೂ. 1



## ಬೆಳಗಲಿ ಭರವಸೆಯ ಆಶಾದೀಪ

# ಅಕಾಡೆಮಿ ರತ್ನತ್ರಯರು ಸಂಘದಲ್ಲಿ



ಸಂಗ್ಯಾ ಬಾಳ್ಯಾ, 'ಜೋಕುಮಾರಸ್ವಾಮಿ'ಯಂತಹ ಅದ್ಭುತ ನಾಟಕಗಳನ್ನು ರಂಗಭೂಮಿಗೆ ನೀಡಿದ ಜಾನಪದ ವಿಶ್ವಕೋಶವೆಂದೇ ಹೆಸರಾದ ಡಾ. ಚಂದ್ರಶೇಖರ್ ಕಂಬಾರರು ದೇಶಭಾಷೆಯ ಕವಿ. ಕವಿಯಾಗಿ, ನಾಟಕಕಾರರಾಗಿ ಕನ್ನಡ ಸಾಹಿತ್ಯವನ್ನು ಇನ್ನಿಲ್ಲದಂತೆ ಸಮೃದ್ಧಗೊಳಿಸಿದ್ದಾರೆ. ಉತ್ತರಕರ್ನಾಟಕದಲ್ಲೇ ಉಳಿಯಬಹುದಾಗಿದ್ದ ಜಾನಪದ ಸಂಪತ್ತನ್ನು ವಿಶ್ವದಾದ್ಯಂತ ಬೆಳೆಸಿದವರು. ಜಾನಪದ ಎಂದೂ ಪ್ರತ್ಯೇಕವಲ್ಲ. ಆಧುನಿಕ ಕಾಲದಲ್ಲಿ ಇತಿಹಾಸ ಪ್ರವೇಶಿಸಿದ್ದರಿಂದ ದಿನನಿತ್ಯದ ವ್ಯವಹಾರದಲ್ಲಿ ನಾವು ಇತಿಹಾಸದಲ್ಲಿ ಭಾಗಿಯಾಗ್ತಾ ಇರ್ತೀವಿ. ಜನಪದರು ವಿಮರ್ಶೆಯ ಕಲ್ಪನೆಯೇ ಇಲ್ಲದವರು. ಪಶ್ಚಿಮದ ವಿಮರ್ಶೆಗಳಿಂದ ನಾವು ಕೆಟ್ಟದಾಗಿ ಪ್ರಭಾವಿತರಾಗುತ್ತಿದ್ದೇವೆ ಎಂದು ಕಳಕಳಿಯಿಂದ ನುಡಿದ ಜ್ಞಾನಪೀಠ ಪುರಸ್ಕೃತ ಡಾ. ಚಂದ್ರಶೇಖರ್ ಕಂಬಾರ ಅವರನ್ನು ಅಕ್ಟೋಬರ್ 9, ಮಂಗಳವಾರ ಸಂಜೆ ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್ ನಲ್ಲಿ ಸಂಗೀತ ನಾಟಕ ಅಕಾಡೆಮಿ (ಫೆಲೋಶಿಪ್)–ಅಕಾಡೆಮಿ ರತ್ನ ಪ್ರಶಸ್ತಿ ಪಡೆದ ಸಂದರ್ಭದಲ್ಲಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ ಪಡೆದ ನಾಡಿನ ಹೆಸರಾಂತ ತೊಗಲುಬೊಂಬೆಯಾಟದ ಕಲಾವಿದ ಬೆಳಗಲ್ ವೀರಣ್ಣ ಹಾಗೂ ಖ್ಯಾತ ಹಿಂದುಸ್ತಾನಿ ಗಾಯಕ ಪಂ. ಎಂ. ವೆಂಕಟೇಶ್ ಕುಮಾರ್ ಅವರೂ ಆಗಮಿಸಿದ್ದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಕರ್ನಾಟಕವೆಂಬ ಮಹಾ ಪ್ರಪಂಚವನ್ನು ಇಡೀ ಪ್ರಪಂಚಕ್ಕೆ ತೋರಿಸಿಕೊಟ್ಟ ಮೇರು ಕಲಾವಿದರನ್ನು ಅತ್ಯಂತ ಆದರಾಭಿಮಾನದಿಂದ ಸ್ವಾಗತಿಸಿದರು. ಡಾ. ಕಂಬಾರರು–ಸಾಹಿತ್ಯ ಕ್ಷೇತ್ರಕ್ಕೆ, ಬೆಳಗಲ್ ವೀರಣ್ಣ–ಕಲೆ ಹಾಗೂ ವೆಂಕಟೇಶ್ ಕುಮಾರ್–ಸಂಗೀತ, ಹೀಗೆ ಸಾಹಿತ್ಯ–ಕಲೆ–ಸಂಗೀತದ ತ್ರಿವೇಣಿ ಸಂಗಮವು ದೆಹಲಿ ಕರ್ನಾಟಕ ಸಂಘದಲ್ಲಿ ಆಗಿದ್ದು ದೆಹಲಿ ಕನ್ನಡಿಗರೆಲ್ಲರಿಗೂ ಹೆಮ್ಮೆ ತಂದಿದೆ ಎಂದ ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಅವರು ಕಲಾವಿದರ ಪುಟ್ಟ ಪರಿಚಯ ನೀಡಿದರು. ನಂತರ ಸಂಘದ ಅಧ್ಯಕ್ಷ, ಡಾ. ವೆಂಕಟಾಚಲ ಹೆಗಡೆ ಹಾಗೂ ಹಿರಿಯ ಕನ್ನಡಿಗ, ಮಾಜಿ ವಾರ್ತಾಧಿಕಾರಿ ಐ. ರಾಮಮೋಹನ ರಾವ್ ಅವರು ಪ್ರಶಸ್ತಿ ಪುರಸ್ಕೃತರಿಗೆ ಸಂಘದ ಪರವಾಗಿ ಪುಷ್ಪಗುಚ್ಛ, ಶಾಲು ಹಾಗೂ ಸ್ಮರಣಿಕೆಗಳನ್ನು ನೀಡಿ ಅಭಿನಂದಿಸಿದರು.

ಕಲಾವಿದರೊಂದಿಗೆ ಕರ್ನಾಟಕದಿಂದ ಆಗಮಿಸಿದ್ದ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ಶ್ರೀನಿವಾಸ ಜಿ. ಕಪ್ಪಣ್ಣ ಅವರು ಕನ್ನಡದ ಈ ಮೂವರು ಕಲಾವಿದರೊಡನೆ ತಮ್ಮ ನಿರಂತರ ಒಡನಾಟ, ಬದುಕಿನ ಸಂಕೀರ್ಣತೆಗಳು, ಸಂದಿಗ್ಧತೆಗಳು ಅವುಗಳನ್ನು ಜಯಿಸಿಬಂದ ಅವರ ಮುಗ್ಧತೆ, ಕಲಾನಿಷ್ಠೆ, ಗುರುಭಕ್ತಿ ಮುಂತಾದ ಸದ್ಗುಣಗಳನ್ನು ಮನದುಂಬಿ ನೆನೆದರು. ಪುಟ್ಟರಾಜ ಗವಾಯಿಗಳ ಶಿಷ್ಯರಾದ ಹಿಂದುಸ್ತಾನಿ ಗಾಯಕ ಪಂ. ಎಂ. ವೆಂಕಟೇಶ್ ಕುಮಾರ್ ಅವರು ನಾದಬ್ರಹ್ಮನೆಂದು ಹೆಸರಾದ ದಿ.ಪಂ.ಭೀಮಸೇನ್ ಜೋಶಿ ಅವರಿಗೂ ಪ್ರಿಯವಾದ ಹಿಂದುಸ್ತಾನಿ ಗಾಯಕ. ಭೀಮಸೇನ್ ಜೋಶಿ, ರಶೀದ್ ಖಾನ್ ಮುಂತಾದ ದಿಗ್ಗಜರೊಡನೆ ಜುಗಲ್ ಬಂದಿ ಹಾಡುವಷ್ಟರ ಮಟ್ಟಕ್ಕೇರಿರುವ ವೆಂಕಟೇಶ್ ಕುಮಾರ್ ಬರೀ ಕನ್ನಡದ ಕಲಾವಿದ ಅಲ್ಲ, ಭಾರತದ ಬಹು ದೊಡ್ಡ ಕಲಾವಿದ ಮತ್ತು ಕರ್ನಾಟಕದ ಅತ್ಯಂತ ಬೇಡಿಕೆಯಲ್ಲಿರುವ ಗಾಯಕನೆಂದು ಕೊಂಡಾಡಿದರು. ಬೆಳಗಲ್ ವೀರಣ್ಣ ಪ್ರಥಮತಃ ವೃತ್ತಿರಂಗಭೂಮಿ ಕಲಾವಿದ. ಸಂಗೀತಾಭ್ಯಾಸ ಮಾಡಿದವರು. ವೃತ್ತಿ ರಂಗಭೂಮಿಯಲ್ಲಿ ಕಲಿತವರೇ ಪರಿಪೂರ್ಣ ಕಲಾವಿದರು ಮತ್ತು ಕುಂದಗಲ್ ಹನುಮಂತರಾಯರ ನಾಟಕದ ಸಾಲುಗಳನ್ನು ಹೇಳಿದವರೇ ನಿಜವಾದ ಕಲಾವಿದರು ಎಂದ ಕಪ್ಪಣ್ಣ ಗುಬ್ಬಿ ವೀರಣ್ಣನಿಗೆ ಸರಿಸಮಾನರಾಗಿ ಹೆಸರಾದವರೇ ಬೆಳಗಲ್ ವೀರಣ್ಣ ಎಂದು ಅಪ್ಯಾಯತೆಯಿಂದ ನುಡಿದರು. ನಟರಾಗಿ, ಗಾಯಕರಾಗಿ ಅದ್ಭುತ ಸಾಧನೆ ಮಾಡಿದ ವೀರಣ್ಣ ನಂತರ ಹೊಟ್ಟೆಪಾಡಿನ ಬದುಕಿಗಾಗಿ ತಮ್ಮ ಕುಟುಂಬದ ಕುಲ ಕಸುಬಾದ ತೊಗಲು ಬೊಂಬೆಯಾಟವನ್ನು ಮುಂದುವರಿಸಿಕೊಂಡು ಬಂದುದರ ಬಗ್ಗೆ ವಿವರಿಸಿದರು. ಶ್ರದ್ಧೆ–ಶ್ರಮ ಯಾರನ್ನೂ ದೊಡ್ಡ ಮಟ್ಟಕ್ಕೆ ಒಯ್ಯುತ್ತದೆಂಬ ಕಿವಿಮಾತನ್ನು ನುಡಿದರು.

ನಂತರ ತೊಗಲುಬೊಂಬೆಯಾಟ ಕಲಾವಿದ ಬೆಳಗಲ್ ವೀರಣ್ಣ ತಮ್ಮ ಬಾಲ್ಯಕಾಲದ ಕಷ್ಟದ ದಿನಗಳನ್ನು ನೆನೆಯುತ್ತ. ಆಗ ಪಾತ್ರಗಳನ್ನು ಮಾಡುತ್ತಿದ್ದ, ಕಲೆಯೇ ಜೀವನವೆಂದು ಹೊರಟ ತಾವು ಅದರಿಂದ ಉಪಜೀವನ ಕಷ್ಟಕರವಾಗಿ ಜೀವನೋಪಾಯಕ್ಕಾಗಿ ಶುರುಮಾಡಿದ್ದು ತಮ್ಮ ಕುಲ ಕಸುಬಾದ ತೊಗಲು ಬೊಂಬೆಯಾಟವನ್ನು. ತಮ್ಮ ಹುಟ್ಟೂರಿನ ಕುಲ ಬಾಂಧವರನ್ನೆಲ್ಲ ಸೇರಿಸಿ ತೊಗಲು ಬೊಂಬೆಯಾಟವನ್ನು ಪ್ರಾರಂಭಿಸಿದ ಕತೆಯನ್ನು, ಪಟ್ಟ ಪಾಡನ್ನು ನಮ್ಮೊಂದಿಗೆ ಮುಕ್ತ ಮನಸ್ಸಿನಿಂದ ಹಂಚಿಕೊಂಡರು. 'ಸ್ವಾತಂತ್ರ್ಯ ಸಂಗ್ರಾಮ'ದ ಕುರಿತು ಗೊಂಬೆಯಾಟ ತಯಾರಿಸುವಾಗ ಎದುರಾದ ತೊಡಕುಗಳು, ಮತ್ತವನ್ನು ನಿವಾರಿಸಿದ ಬಗೆಯನ್ನು ವಿವರಿಸಿದರು. ಕುವೆಂಪು ಅವರ ರಾಮಾಯಣ ದರ್ಶನಂ ಮಹಾಕಾವ್ಯದ ಛಂದಗಳನ್ನು ತೊಗಲುಗೊಂಬೆಯಾಟಕ್ಕೆ ಅಳವಡಿಸಿದ್ದು ತಮ್ಮ ಸುಯೋಗ–ಅದೊಂದು ಅಪರೂಪದ ಅನುಭವವೆಂದ ವೀರಣ್ಣ ತೊಗಲುಬೊಂಬೆಯಾಟದ ಕಲೆಯನ್ನು ಜಗತ್ತಿನಾದ್ಯಂತ ಪ್ರದರ್ಶಿಸಿ, ಪರಿಚಯಿಸಿ ನಾಡಿಗೆ ಹೆಮ್ಮೆತಂದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಖ್ಯಾತ ಹಿಂದುಸ್ತಾನಿ ಗಾಯಕ ಎಂ. ವೆಂಕಟೇಶ್ ಕುಮಾರ್ ಪಂಡಿತ ಪುಟ್ಟರಾಜ ಗವಾಯಿ ಅವರ ಶಿಷ್ಯರು. ಕಿರಾಣಾ ಹಾಗೂ ಗ್ವಾಲಿಯರ್ ಘರಾಣಾ ಶೈಲಿಯಲ್ಲಿ ಪರಿಣತಿ ಹೊಂದಿದ ವೆಂಕಟೇಶ್ ಕುಮಾರ್ ಸಂಗೀತ ಕ್ಷೇತ್ರದಲ್ಲಿ ಮಹಾನ್ ಸಾಧನೆ ಮಾಡಿದ್ದಾರೆ. ಅವರ ತಂದೆ ಕೂಡ ವೃತ್ತಿಪರ ತೊಗಲುಬೊಂಬೆಯಾಟದ ಕಲಾವಿದರು. ಆದರೆ ವೆಂಕಟೇಶ್ ಸಂಗೀತ ಕಲಿತರು. ತಂದೆಯವರೇ ಅವರ ಸಂಗೀತಕ್ಕೆ ಪ್ರೇರಣೆ. ಬೆಳಗಲ್ ವೀರಣ್ಣ ಅವರ ಸೋದರ ಮಾವ. ಹನ್ನೊಂದು ವರ್ಷ ಪುಟ್ಟರಾಜ ಗವಾಯಿಗಳ ವೀರೇಶ್ವರ ಪುಣ್ಯಾಶ್ರಮದಲ್ಲಿ ಸಂಗೀತಾಭ್ಯಾಸ ನಡೆಸಿದ ವೆಂಕಟೇಶ್ ಕುಮಾರ್ ಅವರಿಗೆ ಗುರುಗಳಲ್ಲಿ ಅಪಾರ ಶ್ರದ್ಧೆ, ಅಭಿಮಾನ. ಪುಟ್ಟರಾಜ ಗವಾಯಿಗಳು ಭಿಕ್ಷೆಬೇಡಿ ತಂದು ಮಕ್ಕಳಿಗೆ ಸಂಗೀತ ಹೇಳುತ್ತಿದ್ದರೆಂದು ತಮ್ಮ ಗುರುಗಳನ್ನು, ತಮ್ಮ ಆಶ್ರಮದ ಬದುಕನ್ನು ನೆನೆದ ವೆಂಕಟೇಶ್ ಅವರ ಗುರುಭಕ್ತಿಗೆ ಸಮನಾದುದಿಲ್ಲ. ಪುಟ್ಟರಾಜ ಗವಾಯಿ ಅಜ್ಜನ ತಿಥಿಯನ್ನು ಹರಕೆಯ ತರ ನಿಷ್ಠೆಯಿಂದ ಆಚರಿಸುತ್ತಾರೆ. ಪುಟ್ಟರಾಜ ಗವಾಯಿಗಳ ಪ್ರೀತಿಯ ಶಿಷ್ಯರಾಗಿದ್ದರು. ದೇವರ ಕೊರಳಿನಲ್ಲಿ ಹೂವಿನ ಜೊತೆ ನಾರು ಸ್ವರ್ಗ ಸೇರಿದ ಹಾಗೆ ನಾನು ಗುರುಗಳ ಆಶೀರ್ವಾದದಿಂದ ಬೆಳೆದೆ ಎಂದು ಭಾವ–ಭಕ್ತಿಪರವಶರಾಗಿ ಹೇಳುತ್ತಾರೆ. ಸಭಿಕರ ಕೋರಿಕೆಗೆ ವೆಂಕಟೇಶ್ ಕುಮಾರ್–ಪ್ರಣತಿಯಿದೆ ಬತ್ತಿ ಇದೆ, ಜ್ಯೋತಿ ಬೆಳಗುವೊಡೆ–ಎಂಬ ಅಲ್ಲಮ ಪ್ರಭುವಿನ ವಚನವನ್ನು ಹಾಡಿದರು.

ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಕಾರ್ಯಕ್ರಮವನ್ನು ನಿರೂಪಿಸಿದರು ಹಾಗೂ ಜಂಟಿ ಕಾರ್ಯದರ್ಶಿ ರೇಣುಕಾ ನಿಡಗುಂದಿ ವಂದಿಸಿದರು.

**ರೇಣುಕಾ ನಿಡಗುಂದಿ**

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 23 ಸಂಚಿಕೆ 2

ನವೆಂಬರ್ 2012, ಬೆಲೆ ರೂ. 1

ಪ್ರಧಾನ ಸಂಪಾದಕರು
ಉಷಾ ಭರತಾದ್ರಿ

ಸಂಪಾದಕ ಮಂಡಳಿ
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಖಜಾಂಚಿ
ಕೆ.ಆರ್. ರಾಮಮೂರ್ತಿ

ಜಂಟಿ ಕಾರ್ಯದರ್ಶಿಗಳು
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

ಸಮಿತಿ ಸದಸ್ಯರು
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಬಿ. ಹೆಗಡಿ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

ಮುಖಪುಟ ಚಿತ್ರ : ಬಸ್ತಿ ದಿನೇಶ್ ಶೆಣೈ
ರೂಪದರ್ಶಿ ಪುಟಾಣಿಗಳು :
ಮಾನ್ಯ ಕಾಮತ್ ಮತ್ತು ಆದ್ಯ ಕಾಮತ್
ಹಿಂಬದಿ ಚಿತ್ರ : ಜ್ಯೋತಿ ಪೊದ್ದಾರ್

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

# ಮನದ ಮಾತು

ನಮ್ಮ ಮನೆಯ ದೇವರಡಿಯ ನಂದಾದೀಪ–ಅದು ನೀಡುವಷ್ಟು ಮುದ ಯಾವುದೂ ಇಲ್ಲ. ಈ ಜ್ಯೋತಿಯನ್ನು ಜಗತ್ತಿಗೆ ತೋರಿಸಿ ಹಣ, ಹೆಸರು ಮಾಡಲು ಮನಸ್ಸು ಒಪ್ಪದು. ನಮ್ಮ ಮನೆಯಲ್ಲಿನ ದೀಪ ನಮ್ಮ ಅಚ್ಚುಕಟ್ಟಿನಲ್ಲಿಯೇ ಇರಲಿ. ಏಕೆ ಬೇಕು ಬೇರೆಯವರ ಪರಾಕು? ಇದು ಸಾಧಾರಣವಾಗಿ ನಮ್ಮ ಕನ್ನಡಿಗರ ಧೋರಣೆ. ಹೀಗಾಗಿಯೇ ನಮ್ಮೊಳಗೆ ಇರುವ ಆಪ್ಯಾಯಮಾನವಾದ ಸಂಗತಿಗಳನ್ನು, ಘಟನೆಗಳನ್ನು ನಾವು 'ಮಾರುಕಟ್ಟೆ' ಮಾಡುವುದೇ ಇಲ್ಲ. ಅತಿ ಎಂದರೆ ಊರ ಹಬ್ಬ, ಇನ್ನೂ ಅತಿಯೆಂದರೆ ಜಿಲ್ಲಾ ಉತ್ಸವ, ಮತ್ತಷ್ಟು ಅತಿಯೆಂದರೆ 'ನಾಡಹಬ್ಬ'–ಇಲ್ಲಿಗೆ ಮುಗಿಯಿತು ನಮ್ಮ 'ಮಾರುಕಟ್ಟೆ ಪ್ರತಿಭೆ'. ಇದಕ್ಕೆ ತದ್ವಿರುದ್ಧ ನೆರೆರಾಜ್ಯದ ಕೇರಳದವರು. ತಿನ್ನುವ ತಿಂಡಿಯಿಂದ ಹಿಡಿದು ಉಡುವ ತೊಡುಗೆಯವರೆಗೆ ಎಲ್ಲವನ್ನೂ ಜಗತ್ತಿನ ಮಾರುಕಟ್ಟೆಗೆ ಮಾರಾಟಕ್ಕಿಡುತ್ತಾರೆ. ಹೀಗಾಗಿ ಜಾಗತಿಕ ಪ್ರವಾಸೋದ್ಯಮದಲ್ಲಿ ಕೇರಳಕ್ಕೆ ಪ್ರಥಮ ಸ್ಥಾನ. ಕೇರಳಕ್ಕಿಂತ ಸಾಂಸ್ಕೃತಿಕ ಶ್ರೀಮಂತಿಕೆಯಿದ್ದರೂ ನಾವು ಹಿಂದೆ, ಹಿಂದೆ, ಬಹಳ ಹಿಂದೆ ಉಳಿದಿದ್ದೇವೆ. ಸಮಸ್ಯೆಯೆಂದರೆ ಸಮಸ್ತ ಕನ್ನಡಿಗರಿಗೆ, ಕರ್ನಾಟಕ ಸರ್ಕಾರಕ್ಕೆ ಅಥವ ನಮ್ಮ ಸಾಂಸ್ಕೃತಿಕ ವಕ್ತಾರರಿಗೆ ಖಂಡಿತ ಬೇಸರವಿಲ್ಲ !!

ರಿಯೋ ಕಾರ್ನಿವಾಲ್ ಹಾಗೂ ಯುರೋಪಿನ ಅನೇಕ ಕಾರ್ನಿವಾಲ್‌ಗಳು ಮತ್ತು ತಮಿಳುನಾಡಿನ ಜಲ್ಲಿಕಟ್ಟು ಇತ್ಯಾದಿಗಳು ಲಕ್ಷಗಟ್ಟಲೆ ವಿದೇಶಿ ಪ್ರವಾಸಿಗರನ್ನು ಆಕರ್ಷಿಸುತ್ತಿದ್ದರೆ, 400 ವರ್ಷಗಳ ಸುದೀರ್ಘ ಇತಿಹಾಸವುಳ್ಳ ನಮ್ಮ ಮೈಸೂರು ದಸರ ಕ್ರಮೇಣ ಪ್ರವಾಸಿಗರನ್ನು ಆಕರ್ಷಿಸಲು ಸೋಲುತ್ತಿರುವುದಕ್ಕೆ ಕನ್ನಡಿಗರ ಧೋರಣೆ ಹಾಗೂ ಕ್ಷೀಣವಾದ ಮಾರುಕಟ್ಟೆ ಪ್ರತಿಭೆ ಕಾರಣ. ಯಾವ ಯುರೋಪಿಯನ್ ಕಾರ್ನಿವಾಲ್‌ಗಳೂ ನಮ್ಮ ಹತ್ತು ದಿನಗಳ ದಸರಾ ವೈಭವಕ್ಕೆ ಸಾಟಿಯಿಲ್ಲ. ಆದರೆ ಮೈಸೂರು ದಸರ ಪ್ರವಾಸೋದ್ಯಮದ ಭೂಪಟದಿಂದ ಕ್ರಮೇಣ ಮಾಯವಾಗುತ್ತಿದೆ. ಇದಕ್ಕೆ ನೇರವಾಗಿ ಹೊಣೆ ಹೊರಬೇಕಾದದ್ದು ಸರಕಾರದ ಚುಕ್ಕಾಣಿ ಹಿಡಿದವರು. ಪ್ರತಿ ವರ್ಷ 3000ಕ್ಕೂ ಮಿಗಿಲಾಗಿ ಬರುತ್ತಿದ್ದ ವಿದೇಶಿ ಪ್ರವಾಸಿಗರ ಸಂಖ್ಯೆ 150ಕ್ಕೆ ಇಳಿದಿದೆ. ಏಕೆಂದರೆ ಮೈಸೂರು ದಸರ ನಡೆಯುವುದರ ಬಗ್ಗೆ ಸೂಕ್ತ ಮಾಹಿತಿಯಿಲ್ಲ. ಪ್ರವಾಸಿಗರನ್ನು ಆಕರ್ಷಿಸಲು ಯೋಜನೆಗಳಿಲ್ಲ, ಮೈಸೂರು ದಸರಾದ ವೈಭವವನ್ನು ಹಾಡಿ ಹೊಗಳಿ ಪ್ರವಾಸಿಗರಲ್ಲಿ ಕುತೂಹಲ ಹುಟ್ಟಿಸಬಲ್ಲ ಮಾರುಕಟ್ಟೆ ಪ್ರತಿಭೆಗಳಿಲ್ಲ. ಇದಕ್ಕೆ ಮುಖ್ಯ ಕಾರಣ–ಮೈಸೂರು ದಸರೆಯನ್ನು ನಾಡಹಬ್ಬ ಎಂದು ಉದ್ಘೋಷಿಸಿ ಅದರ 'ವಿಶ್ವಮಾನ್ಯತೆ'ಯನ್ನು ಕಡಿತಗೊಳಿಸಿದ್ದು. ದಸರೆಯ ಇತಿಹಾಸದ ಪುಟಗಳನ್ನು ಅವಲೋಕಿಸಿದರೆ ಅಚ್ಚರಿ ಕಾದಿದೆ. ವಿಜಯನಗರ ಸಾಮ್ರಾಜ್ಯದ ವೈಭವದ ಪರಂಪರೆಯನ್ನು ಮುಂದುವರೆಸಲು 1612ರಲ್ಲಿ ಮೈಸೂರು ಪ್ರಾಂತ್ಯದ ಮೊದಲನೆಯ ರಾಜ ಒಡೆಯರ್ ಅವರು ಮೈಸೂರು ದಸರೆಯ ಅದ್ಧೂರಿ ಆಚರಣೆಗೆ ಶುಭ ನಾಂದಿ ಹಾಡಿದರು. ಮಹಾ ನವಮಿ ಹಾಗೂ ವಿಜಯ ದಶಮಿಗಳನ್ನು ಸಂಭ್ರಮದಿಂದ ಆಚರಿಸಲು ವಿಧಿ ವಿಧಾನಗಳನ್ನು ರೂಪಿಸಿದರು. ಸ್ವಾತಂತ್ರ್ಯ ನಂತರವೂ ಮೈಸೂರು ದಸರ ಯಾವುದೇ ಕೊರತೆಯಿಲ್ಲದೆ ನಾಡಿನ, ದೇಶದ, ಜಗತ್ತಿನ ಜನರನ್ನು ಆಕರ್ಷಿಸುತ್ತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಇದು ಒಂದು ನಾಡಹಬ್ಬ ಮಾತ್ರ. ಮೈಸೂರಿನ ಸ್ಥಳೀಯ ಜನತೆ ಕೂಡ ದಸರೆ ನೋಡಲು ಹೋದರೆ ಹೋದರು, ಇಲ್ಲದಿದ್ದರೆ ಇಲ್ಲ. ದಸರೆ ನೋಡಲಿಲ್ಲ, ಅದರಿಂದ ಏನೋ ಕಳೆದುಕೊಂಡಿದ್ದೇವೆ ಎನ್ನುವ ಭಾವನೆ ಯಾರಲ್ಲೂ ಮೂಡುತ್ತಿಲ್ಲ.

ಈ ಸಲದ ದಸರೆಯನ್ನೇ ನೋಡಿ, ಶುರುವಿನಲ್ಲೇ ಬರಗಾಲದ ನೆಪವೊಡ್ಡಿ ಸಂಭ್ರಮಾಚರಣೆಯಲ್ಲಿ ಕಡಿತ ಎಂದು ಸರ್ಕಾರ ಘೋಷಿಸಿತು. 1612ರಲ್ಲಿ ದಸರೆಯ ವಿಧಿಬದ್ಧ ಆಚರಣೆಗೆ ವಿನ್ಯಾಸ ರೂಪಿಸಿದ ಮೊದಲ ರಾಜ ಒಡೆಯರ್ ಅವರು–ರಾಜವಂಶದಲ್ಲಿ ಮೃತ್ಯು ಸಂಭವಿಸಿದರೂ ದಸರೆಯ ಆಚರಣೆಯಲ್ಲಿ ಯಾವುದೇ ಕೊರತೆ ಮಾಡಬಾರದು ಎಂಬ ಫರ್ಮಾನು ಹೊರಡಿಸಿದ್ದರು. ನಮ್ಮ ಸರ್ಕಾರಕ್ಕೆ 'ಇತಿಹಾಸ ಪ್ರಜ್ಞೆ' ಇದೆಯೇ ಎಂಬ ಪ್ರಶ್ನೆ ಇದರಿಂದ ಏಳುವುದು ಸಹಜ. ಅಷ್ಟೇ ಅಲ್ಲ, ದಸರೆ ಈಗ ಸ್ಥಳೀಯ ರಾಜಕಾರಣಿಗಳ ಹಿಡಿತದಲ್ಲಿದೆ. ಇವರ ಜತೆ ಅಧಿಕಾರಿಗಳು ಪೈಪೋಟಿಗಿಳಿಯುತ್ತಾರೆ. ಸಾಂಸ್ಕೃತಿಕ ವೈಭವವನ್ನು ಕಣ್ತುಂಬಿಕೊಳ್ಳಲು ಬಂದವರಿಗೆ ಕಾಣಸಿಗುವುದು ರಾಜಕೀಯ ಕುರೂಪಗಳು, ವೈಯಕ್ತಿಕ ರಾಗದ್ವೇಷಗಳು ಹಾಗೂ ಅಧಿಕಾರಿಗಳ ಹುಚ್ಚಾಟಗಳು.

ಮೈಸೂರು ದಸರೆ ತನ್ನ ಶ್ರೀಮಂತಿಕೆಯನ್ನು ಕಳೆದುಕೊಂಡರೆ, ತನ್ನ ವೈಭವವನ್ನು ಗತಕಾಲದ ನೆನಪು ಎಂದು ಮಂಕಾದರೆ ಆಗುವ ನಷ್ಟ ಅಪಾರ. ಪ್ರವಾಸೋದ್ಯಮದಿಂದ ಬರುತ್ತಿದ್ದ ಅಪಾರ ಹಣದ ಹೊಳೆ ಬತ್ತುತ್ತದೆ; ಕ್ರಮೇಣ ವಿಶ್ವ ಭೂಪಟದಿಂದ ಮೈಸೂರು ದಸರ ಮಂಗಮಾಯವಾಗುತ್ತದೆ. ಇನ್ನು ಮುಂದಾದರೂ ಈ ನಾಡಹಬ್ಬವನ್ನು ವಿಶ್ವದ ಹಬ್ಬವಾಗಿಸುವ ಸದ್ಬುದ್ಧಿ ಹಾಗೂ 'ಮಾರುಕಟ್ಟೆ ಪ್ರತಿಭೆ'ಗಳನ್ನು ತಾಯಿ ಚಾಮುಂಡೇಶ್ವರಿ ನಮ್ಮನ್ನಾಳುವ ನಾಯಕರಿಗೆ ಕರುಣಿಸಲಿ ಎಂಬುದು ನಮ್ಮ ಪ್ರಾರ್ಥನೆ.

ದಸರೆಯ ಸಂಭ್ರಮದಿಂದ ಹೊರ ಬರುತ್ತಿದ್ದಂತೆ ದೂರದ ಅಮೇರಿಕದಲ್ಲಿ ಅಪ್ಪಳಿಸಿದ ಸ್ಯಾಂಡಿ ಹಾಗೂ ತಮಿಳುನಾಡಿನ ಕರಾವಳಿಯಲ್ಲಿ ವಿರಾಟ್ ಸ್ವರೂಪ ತೋರಿಸಿದ ನೀಲಂ ನಮ್ಮನ್ನು ಬೆಚ್ಚಿ ಬೀಳಿಸಿದವು. ಪ್ರಕೃತಿ ಮಾತೆಯ ನಿರ್ಣಯ ಅಂತಿಮ–ಈ ನಿರ್ಣಯದೆದುರು ನಮ್ಮ ಸಾಧನೆಗಳು ಹಾಗೂ ಆಧುನಿಕ ನಿರ್ಮಿತಿಗಳು ನಶ್ವರ ಎಂಬ ಸತ್ಯ ಮನದಟ್ಟಾಗಿದೆ. ಈ ಪ್ರಕೃತಿ ಮಾತೆಗೆ ಅಂದರೆ ಅತೀತ ಶಕ್ತಿಗೆ ಮತ್ತೊಮ್ಮೆ ನಮನ ಸಲ್ಲಿಸಲು ಬೆಳಕಿನ ಹಬ್ಬ ದೀಪಾವಳಿ ಬಂದಿದೆ.

**ಸರ್ವರಿಗೂ ದೀಪಾವಳಿ ಹಾಗೂ ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು. ದೀಪಾವಳಿ ಕತ್ತಲನ್ನು ಕೊನೆಗಾಣಿಸಿ ಎಲ್ಲೆಡೆ ಬೆಳಕನ್ನು ದಯಪಾಲಿಸಲಿ, ರಾಜ್ಯೋತ್ಸವ ನಾಡು–ನುಡಿಗಳ ಪ್ರೇಮ ಮತ್ತಷ್ಟು ಉದ್ದೀಪನಗೊಳ್ಳಲು ಪ್ರೇರಣೆ ನೀಡಲಿ–ಎಂಬುದು ನಮ್ಮ ಹಾರೈಕೆ.**

**ಉಷಾ ಭರತಾದ್ರಿ**

ಅಂತರಾಳದಿಂದ...

# ರಾಜ್ಯೋತ್ಸವದ ಕನಸುಗಳು

ದೆಹಲಿ ಕನ್ನಡಿಗರೆಲ್ಲರಿಗೂ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು. ನವೆಂಬರ್ ತಿಂಗಳೆಂದರೆ ಕನ್ನಡಿಗರೆಲ್ಲರಿಗೂ ಪುಳಕ. ಕನ್ನಡ ರಾಜ್ಯದ ಕನಸು ನನಸಾದ ತಿಂಗಳು ಇದು. ಐವತ್ತೇಳು ವರ್ಷಗಳ ಹಿಂದೆ 'ಉದಯವಾಯಿತು ನಮ್ಮ ಚೆಲುವ ಕನ್ನಡ ನಾಡು' ಎಂದು ಹಾಡಿದ್ದರು. ಹಲವಾರು ದಶಕಗಳ ಕಾಲ ಕನ್ನಡಿಗರು ತಮ್ಮದೇ ಆದ ನಾಡನ್ನು ಕಟ್ಟುವ ಕನಸಿನಲ್ಲಿದ್ದರು. ಒಂದೆಡೆ ಮದ್ರಾಸ್ ಪ್ರಾಂತ್ಯ. ಇನ್ನೊಂದೆಡೆ ಮುಂಬೈ ಪ್ರಾಂತ್ಯ. ಇವೆರೆಡರ ನಡುವೆ ಸಿಕ್ಕ ಹೈದರಾಬಾದ್ ಕರ್ನಾಟಕ. ಹೀಗೆ ಕನ್ನಡ ಮಾತನಾಡುವವರ ಒಟ್ಟಾರೆ ಕನ್ನಡಿಗರ ಈ ಪ್ರಾಂತ್ಯಗಳು ಹೀಗೆ ಚೆಲ್ಲಾಪಿಲ್ಲಿಯಾಗಿ ಹರಡಿ ಹೋಗಿದ್ದವು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಭಾಷಾವಾರು ರಾಜ್ಯಗಳ ಸ್ಥಾಪನೆಗೆ ಸಂವಿಧಾನ ಅನುವು ಮಾಡಿಕೊಟ್ಟ ಮೇಲೆ ಆಗಿನ ಮುಕ್ಕೋಟಿ ಕನ್ನಡಿಗರ ಕನಸಿಗೆ ಸಫಲತೆ ದೊರತಿತು. ಈ ಕನ್ನಡಿಗರ ಕನಸು, ಈ ಕನಸಿನ ಸಾಕಾರಕ್ಕಾಗಿ ಹಲವು ಸ್ತರಗಳಲ್ಲಿ ನಡೆದ ಹೋರಾಟದ ನೆನಪನ್ನು ಈ ನವೆಂಬರ್ ತಿಂಗಳಿನಲ್ಲಿ ನಾವು ತಂದುಕೊಳ್ಳಬೇಕು. ಈ ತಿಂಗಳಿನಲ್ಲಿ ಅರ್ಥಪೂರ್ಣವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು, ಕನ್ನಡದ ಏನೆಲ್ಲ ಕೆಲಸವಾಗಬೇಕೆಂಬುದರ ಬಗ್ಗೆ ವಿಸ್ತೃತವಾದ ಚರ್ಚೆ ಮಾಡಬೇಕು.

ಕರ್ನಾಟಕ ರಾಜ್ಯೋತ್ಸವವೆಂದರೆ ನವೆಂಬರ್ ತಿಂಗಳು ಕನ್ನಡ-ಕನ್ನಡವೆಂದು ಹಪಹಪಿಸಿ, ನಂತರ ಪೂರಾ ವರುಷ ಏನು ಮಾಡದೇ ಇರುವುದು. ಈ ತಿಂಗಳಿನಲ್ಲಿ ಕರ್ನಾಟಕದಲ್ಲಿ, ಹೊರನಾಡಿನಲ್ಲಿ ಹಾಗೂ ಎಲ್ಲೆಡೆ ಎಡೆಬಿಡದ ಕನ್ನಡ ಕುರಿತಾದ ಕಾರ್ಯಕ್ರಮಗಳು ನಡೆಯುತ್ತವೆ. ಗಾಯಕರಿಗೆ, ಸಾಹಿತಿಗಳಿಗೆ, ರಾಜಕಾರಣಿಗಳಿಗೆ, ಯಾರಿಗೂ ಈ ತಿಂಗಳಿನಲ್ಲಿ ಬಿಡುವೇ ಇಲ್ಲ. ಅಲ್ಲೊಂದು ಕಾರ್ಯಕ್ರಮ-ಇಲ್ಲೊಂದು ಕಾರ್ಯಕ್ರಮ. ಹೀಗೆ ಕಾರ್ಯಕ್ರಮಗಳ ಗಡಿಬಿಡಿಯಲ್ಲಿ ಈ ಪೂರಾ ತಿಂಗಳು ಕಳೆದು ಹೋಗುತ್ತದೆ. ಒಂದು ಬಗೆಯ ಉತ್ಸಾಹ ಹಾಗೂ ಹಬ್ಬದ ವಾತಾವರಣವಿದ್ದರೆ ಯಾವುದೇ ಕಾರ್ಯಕ್ರಮಕ್ಕೆ ಹಾಗೂ ಚಟುವಟಿಕೆಗಳಿಗೆ ಒಂದು ಬಗೆಯ ರಂಗು ಬರುತ್ತದೆ. ಈ ಉತ್ಸಾಹ ನಮ್ಮೆಲ್ಲರಲ್ಲೂ ಮೂಡಿ ಬರಬೇಕಾದದ್ದು ಅಗತ್ಯ.

ಈ ಬಗೆಯ ಹಬ್ಬದ, ಉತ್ಸವದ ವಾತಾವರಣದಲ್ಲಿ ನಮ್ಮ ರಾಜ್ಯದ ಹಾಗು ಕನ್ನಡದ ಕನಸು ಕಳೆದು ಹೋಗಬಾರದು. . ಕನ್ನಡವನ್ನು ಉಳಿಸಿಕೊಂಡು, ಬೆಳೆಸುವ ಪ್ರಯತ್ನಗಳು ನಿರಂತರವಾಗಿ ನಡೆಯಬೇಕು. ಕನ್ನಡ ಭಾಷೆ ಶ್ರೀಮಂತವಾದದ್ದು ಹಾಗೂ ಅದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆಯೆಂದು ನಾವೆಲ್ಲ ಬಲ್ಲೆವು. ಆಗಿನ 'ಮುಕ್ಕೋಟಿ' ಕನ್ನಡಿಗರು ಈಗ 'ಆರು ಕೋಟಿ'ಗೂ ಮೀರಿದ್ದಾರೆ. ಹೊಸ ಪೀಳಿಗೆ, ಹೊಸ ವಿಚಾರಗಳು ಕರ್ನಾಟಕದ ತುಂಬಾ ಹರಡುತ್ತಿವೆ. ಜಾಗತೀಕರಣದ ಪ್ರಭಾವ ಕರ್ನಾಟಕದ ಮೇಲೆ ಅಪ್ಪಳಿಸುತ್ತಿದೆ. ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಮೇಲೆ ಈ ಜಾಗತೀಕರಣದ ಪ್ರಭಾವದಿಂದ ಆಗುತ್ತಿರುವ ಅನಾಹುತಗಳ ಬಗ್ಗೆ ನಮಗೆ ಅರಿವೇ ಇಲ್ಲವೆಂದು ಹೇಳಬೇಕಾಗಿದೆ. ಎಷ್ಟೋ ಜನಸಮುದಾಯದ ಸಂಸ್ಕೃತಿಗಳು ಮೂಲೆಗುಂಪಾಗುತ್ತಿವೆ. ಈ ಸಂಸ್ಕೃತಿಯ ಆವರಣದಲ್ಲಿ ಬದುಕುತ್ತಿರುವವರು ಜಾಗತೀಕರಣ ರೂಪಿಸುತ್ತಿರುವ ಹೊಸ ಆಶಯಗಳತ್ತ ಮುನ್ನೆಡೆದಿದ್ದಾರೆ.

ಕೆಲವು ವಿದ್ವಾಂಸರ ಪ್ರಕಾರ ಜಾಗತೀಕರಣದಿಂದ ಆಗುತ್ತಿರುವ ಪರಿಣಾಮಗಳಿಂದ ಜನಸಮುದಾಯಗಳಿಗೆ ಒಳ್ಳೆಯದೇ ಆಗುತ್ತದೆ. ಈ ವಾದವನ್ನು ಒಪ್ಪುವುದು ಸಾಧ್ಯವೇ ಇಲ್ಲ. ಯಾಕೆಂದರೆ, ಭಾಷೆ, ಸಂಸ್ಕೃತಿ ಹಾಗೂ ಜನಜೀವನದ ಪರಿಗಳನ್ನು ವ್ಯವಹಾರಗಳ ಧೋರಣೆಯಿಂದ ನೋಡಲು ಸಾಧ್ಯವಿಲ್ಲ. ಈ ವಿವಿಧ ಸಾಂಸ್ಕೃತಿಕ ಪರಿಗಳನ್ನು ಬೆಲೆಕಟ್ಟಿ ಅಳೆಯಲು ಸಾಧ್ಯವಿಲ್ಲ. ಒಂದು ಭಾಷೆ ಮತ್ತು ಈ ಭಾಷೆಯನ್ನಾಡುವ ಜನಸಮುದಾಯ ಇದನ್ನು ಸಾವಿರಾರು ವರುಷಗಳಿಂದ ಬೆಳೆಸಿಕೊಂಡು, ಉಳಿಸಿಕೊಂಡು ಬಂದಿದೆ. ಈ ಜಾಗತೀಕರಣದ ಕಬಂಧ ಬಾಹುಗಳೂ ಈ ಜನಸಮುದಾಯದ ಸಂಸ್ಕೃತಿಗಳನ್ನು ಕಾಲಾಂತರದಲ್ಲಿ ಕಬಳಿಸಿ, ನಿರ್ನಾಮ ಮಾಡುವುದು ಅಸಾಧ್ಯವೇನಿಲ್ಲ. ಹೀಗೆ ಆಗದಂತೆ ನೋಡಿಕೊಳ್ಳಲು ನಾವು ಯಾವ ಬಗೆಯ ಎಚ್ಚರದಲ್ಲಿರಬೇಕೆಂಬುದರ ಬಗ್ಗೆ ವಿವರವಾದ ಚರ್ಚೆ ನಡೆಯಬೇಕಿದೆ.

ಇನ್ನೊಂದು ವಿಚಾರವೆಂದರೆ, ಭಾಷೆ, ಸಂಸ್ಕೃತಿ ಹಾಗೂ ಸಾಹಿತ್ಯಗಳೆಲ್ಲ ಮಾರ್ಕೆಟಿನಲ್ಲಿ ರವಾನೆಯಾಗುವ ಸರಕುಗಳಲ್ಲ. ಹಾಗೆ ನೋಡಿದರೆ, ಈ ಭಾಷೆ ಹಾಗೂ ಸಂಸ್ಕೃತಿಗಳನ್ನು ಸರಿಯಾಗಿ ಬಳಸಿಕೊಂಡು ಕೋಟಿಕೋಟಿ ರೂಪಾಯಿಗಳನ್ನು ಸಂಪಾದಿಸುವ ಬುದ್ಧಿವಂತರೂ ಇದ್ದಾರೆ. ಆದರೆ ಈ ಎಲ್ಲವನ್ನು ಮೂಲದಲ್ಲಿ ಇರಿಸಿಕೊಂಡು, ಉಳಿಸಿ-ಬೆಳೆಯಿಸುವ ಜನಸಮುದಾಯಕ್ಕೆ ಒಂದು ಬಿಲ್ಲೆಯೂ ಸಿಗುವುದಿಲ್ಲ. ಈ ಬಗೆಯ 'ಸಾಂಸ್ಕೃತಿಕ ಕಳ್ಳತನ' ಕರ್ನಾಟಕದ ಕುರಿತಾಗಿ ಅಲ್ಲ, ಇಡೀ ಜಗತ್ತಿನಾದ್ಯಂತ ನಡೆಯುತ್ತಿದೆ. ಯಾರೋ ಎಲ್ಲೋ ಹಾಡಿದ ಜಾನಪದ ಗೀತೆ. . .ಯಾರೋ ಎಲ್ಲೋ ಬಾರಿಸಿದ ಸಂಗೀತ. . .ಯಾರೋ ಎಲ್ಲೋ ರೂಪಿಸಿದ ನರ್ತನ. . . ಬುದ್ಧಿವಂತನೊಬ್ಬ ಈ ಎಲ್ಲವನ್ನೂ ನಾಜೂಕಾಗಿ ತನ್ನೊಳಗೆ ಇಳಿಸಿಕೊಂಡು, ಅದನ್ನು ತನ್ನದೇ ಮಾಡಿಕೊಂಡು, ಅದರ ಮೇಲೆ ತನ್ನ ಹಕ್ಕನ್ನು ಸ್ಥಾಪಿಸಿಕೊಂಡು ಕೋಟಿಕೋಟಿಗಳ ಲೆಕ್ಕದಲ್ಲಿ ಲಾಭ ಗಳಿಸುವುದು ಯಾವ ಬಗೆಯ ನ್ಯಾಯ?

ಈ ಬಗೆಯ 'ಕಳ್ಳತನ'ಗಳು ದಿನನಿತ್ಯ ಕರ್ನಾಟಕದ ಎಲ್ಲೆಡೆ ನಡೆಯುತ್ತಿವೆ. ಒಂದು ಕಾಲದಲ್ಲಿ ಏನೂ ಬೆಲೆಯಿಲ್ಲದ 'ಸಾಹಿತ್ಯ-ಭಾಷೆ-ಸಂಸ್ಕೃತಿ'ಯ ವಿವಿಧ ಆಯಾಮಗಳಿಗೆ ಈಗ ಎಣೆಯಿಲ್ಲದ ಬೆಲೆ. ಈ ಬೆಲೆಯ ಲಾಭವನ್ನು ತಮ್ಮ ಜೇಬಿಗಿಳಿಸುವವರನ್ನು ಹೇಗೆ ಹಿಡಿಯುವುದು? ಘನ ಕರ್ನಾಟಕ ಸರಕಾರ ಈ ಕುರಿತಾಗಿ ಎಚ್ಚರಿಂದ ಹಾಗೂ ತ್ವರಿತವಾಗಿ ಕ್ರಮಕೈಗೊಳ್ಳುವ ಅಗತ್ಯವಿದೆ. ಯಾರು ತಮ್ಮ ಹಾಡುಗಳನ್ನು, ತಮ್ಮ ಸಾಂಸ್ಕೃತಿಕ ಮಜಲುಗಳನ್ನು ಬೆಳೆಯಿಸಿಕೊಂಡು ಬಂದವರೋ ಅವರಿಗೆ ತಮ್ಮ ಈ ಬೌದ್ಧಿಕ ಸಂಪತ್ತಿನ ಮೇಲೆ ಪೂರಾ ಹಕ್ಕು ದೊರಕುವಂತಾಗಬೇಕು. ಅದರ ಬಗ್ಗೆ ನಾವ್ಯಾರೂ ಏನೇನೂ ತಲೆ ಕೆಡಿಸಿಕೊಂಡಂತೆ ಕಾಣುವುದಿಲ್ಲ.

ಹತ್ತಾರು ವರ್ಷಗಳ ಹಿಂದೆ ಈ ಕುರಿತಾಗಿ ಯಾರೂ ಹೆಚ್ಚು ತಲೆ ಕೆಡಿಸಿಕೊಂಡಿರಲಿಲ್ಲ. ಆದರೆ, ಈಗ ನೋಡಿದರೆ ಕಾಲವೇ ಬದಲಾಗಿ ಹೋಗಿದೆ. ಯಾವುದು ಕೆಲಸಕ್ಕೆ ಬಾರದ್ದು ಎಂದು ನಾವು ಹೇಳಿಕೊಂಡು ಕುಳಿತಿದ್ದೆವೋ, ಅದಕ್ಕೆ ಈಗ ಬಂಗಾರದ ಬೆಲೆಯಿದೆ. ಹೊಸ ವೈಜ್ಞಾನಿಕ ಹಾಗೂ ತಾಂತ್ರಿಕ ಆವಿಷ್ಕಾರಗಳಿಂದಾಗಿ, ಅದರಲ್ಲೂ ಮುಖ್ಯವಾಗಿ ಕಂಪ್ಯೂಟರ್ ಹಾಗೂ ಅಂತರ್ ಜಾಲದ ಪ್ರಭಾವದಿಂದಾಗಿ ಮಾಹಿತಿ ತಂತ್ರಜ್ಞಾನವೆಂಬುದು ನಮ್ಮನ್ನೆಲ್ಲ ಆವರಿಸಿಕೊಂಡು ಬಿಟ್ಟಿದೆ. ಹೀಗಾಗಿ ನಾವ್ಯಾರೂ ಸ್ವಸ್ಥವಾಗಿ ಕುಳಿತುಕೊಳ್ಳುವಂತಿಲ್ಲ. ಎಲ್ಲ ಬಗೆಯಲ್ಲೂ ಮತ್ತು ಎಲ್ಲ ಕಾಲಕ್ಕೂ ನಾವು ಚುರುಕಾಗಿ ಕೆಲಸ ಮಾಡುತ್ತಿರಬೇಕಿದೆ. ಎಲ್ಲವೂ ಕ್ಷಣಾರ್ಧದಲ್ಲಿ ಆಗಿ ಬಿಡುತ್ತದೆ. ಈಗ ಬಗೆಯ ತಂತ್ರಜ್ಞಾನಗಳು ನಮ್ಮ ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಮೇಲೆ ಹೊಸ ಹೊಸ ಸಮಸ್ಯೆಗಳನ್ನು ತಂದಿರಿಸುತ್ತವೆ. ಈ ಬಗೆಯ ಹೊಸ ಆವಿಷ್ಕಾರಗಳಿಂದ ಹುಟ್ಟುವ ಪರಿಣಾಮಗಳನ್ನು ಎದುರಿಸುವುದೇ ನಮ್ಮ ಮುಂದಿರುವ ದೊಡ್ಡ ಸವಾಲಾಗಿದೆ.

ರಾಜ್ಯೋತ್ಸವದ ಹಬ್ಬದ ಅಂಗಳದಲ್ಲಿ ಈ ಮೇಲೆ ನಮೂದಿಸಿದ ವಿಚಾರಗಳ ಕುರಿತಾಗಿ ಚರ್ಚೆ ನಡೆಯಬೇಕಾಗಿದೆ. ಕನ್ನಡವನ್ನು ಓದುವ-ಬರೆಯುವವರ ಸಂಖ್ಯೆ ನಿಧಾನವಾಗಿ ಕಡಿಮೆಯಾಗುತ್ತಿದೆ. ಕನ್ನಡ ಮಾತನಾಡುವವರ ಸಂಖ್ಯೆ ವೃದ್ಧಿಸುತ್ತಿಲ್ಲ. ಈ ಕುರಿತಾಗಿ ಹೊರನಾಡ ಕನ್ನಡಿಗರು ಅನುಭವಿಸುತ್ತಿರುವ ಸಂಕಟದ ಪಾಟಲು ಬೇರೆ ತೆರನಾದದ್ದು. ಹೊರನಾಡ ಕನ್ನಡಿಗರ ಮಕ್ಕಳು ಕರ್ನಾಟಕದಲ್ಲಿ ತಂತ್ರಜ್ಞಾನವನ್ನು ಅಥವಾ ಇಂಜಿನಿಯರಿಂಗ್ ಓದಲು ಈಗ ಒಂದು ಕನ್ನಡ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಕನ್ನಡದ ಓದಿನ ಹಾಗೂ ಗಂಧಗಾಳಿ ಇಲ್ಲದ ಮಕ್ಕಳು ಈ ಬಗೆಯ ಸವಾಲುಗಳನ್ನು ಹೇಗೆ ಸ್ವೀಕರಿಸಿಯಾರು? ಈ ಬಗೆಯ ಕಟ್ಟಳೆಯಿಂದ ಹೊರನಾಡ ಕನ್ನಡಿಗರ ಮಕ್ಕಳಿಗೆ ಮುಕ್ತಿ ದೊರೆಯಬೇಕು.

ಕರ್ನಾಟಕದಲ್ಲಿ ಅಡಿಯಿಡುವ ಕನ್ನಡಿಗರು ಹಾಗೂ ಕನ್ನಡೇತರರು ಕನ್ನಡದಲ್ಲಿ ಓದಿ-ಬರೆದು ಹಾಗೂ ಮಾತನಾಡುವಂತಿರಬೇಕು ಇದು ಕಡ್ಡಾಯವಾಗಬೇಕು. ಕರ್ನಾಟಕ ಸರಕಾರ ಈಗಾಗಲೇ ಈ ನಿಟ್ಟಿನಲ್ಲಿ ಹಲವಾರು ಸ್ವಾಗತಾರ್ಹ ಕ್ರಮಗಳನ್ನು ಕೈಗೊಂಡಿದೆ. ಇದು ಸಾಕಾಗುವುದಿಲ್ಲ. ಇನ್ನೂ ಹೆಚ್ಚಿನ ಕಟ್ಟುನಿಟ್ಟಿನ ಕ್ರಮಗಳ ಅಗತ್ಯವಿದೆಯೆಂದು ಹಲವರ ಅಭಿಪ್ರಾಯ. ಈ ಎಲ್ಲ ಆಶಯಗಳೊಂದಿಗೆ ನಾವೆಲ್ಲ ಈ ನವೆಂಬರ್ ತಿಂಗಳಿನ ಉದ್ದಕ್ಕೂ ರಾಜ್ಯೋತ್ಸವವನ್ನು ಆಚರಿಸೋಣ.

ದೆಹಲಿ ಕರ್ನಾಟಕ ಸಂಘವೂ ಈ ದಿಶೆಯಲ್ಲಿ ಹಲವಾರು ಉಪಯುಕ್ತ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಇಡೀ ನವೆಂಬರ್ ತಿಂಗಳು ಕಾರ್ಯಕ್ರಮಗಳಿವೆ. ಈ ಎಲ್ಲ ಕಾರ್ಯಕ್ರಮಗಳಲ್ಲಿ ತಾವೆಲ್ಲರೂ ಬಂದು ಭಾಗವಹಿಸಬೇಕೆಂದು ವಿನಮ್ರವಾಗಿ ಕೇಳಿಕೊಳ್ಳುತ್ತ ಮತ್ತೊಮ್ಮೆ ತಮಗೆಲ್ಲ ರಾಜ್ಯೋತ್ಸವದ ಶುಭಾಶಯಗಳನ್ನು ಕೋರುತ್ತ.......

**ಡಾ.ವೆಂಕಟಾಚಲ ಹೆಗಡೆ**

## ಕರ್ನಾಟಕ ರಾಜ್ಯೋತ್ಸವ ಹಾಗೂ ದೀಪಾವಳಿಯ ಶುಭಾಶಯಗಳು

ಕರ್ನಾಟಕ ರಾಜ್ಯೋತ್ಸವವನ್ನು ನವೆಂಬರ್ 24 ಮತ್ತು 25ರಂದು ಆಯೋಜಿಸಲಾಗಿದೆ. ಕಳೆದ ಬಾರಿಯ ಹಾಗೆ ಜ್ಞಾನಪೀಠ ಪುರಸ್ಕೃತ ಕವಿಗಳ ನಮನ, ಸುಗಮ ಸಂಗೀತ ಮತ್ತು ಜಾನಪದ ಸಂಗೀತ–ಮಹಿಳೆಯರು ಮತ್ತು ಪುರುಷರು, ಜಾನಪದ ನೃತ್ಯರೂಪಕ–ಮಹಿಳೆಯರು, ಸಮೂಹ ನೃತ್ಯ–ಮಹಿಳೆಯರು ಮತ್ತು ಮಕ್ಕಳು, ಕೋಲಾಟ–ಮಹಿಳೆಯರು ಮತ್ತು ಪುರುಷರು–ಮಕ್ಕಳಿಗಾಗಿ–ವಿಶೇಷವಾಗಿ–ನೃತ್ಯರೂಪಕ ಮುಂತಾದವುಗಳಲ್ಲಿ ಸ್ಥಳೀಯ ಕಲಾವಿದರಿಗೆ ತರಬೇತಿಯನ್ನು ನೀಡಿ ಅವರಿಂದ ಕಾರ್ಯಕ್ರಮವನ್ನು ನವೆಂಬರ್ 24ರಂದು ಆಯೋಜಿಸುವುದರ ಕುರಿತು ತೀರ್ಮಾನವಾಗಿದ್ದು ಇದಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ನಮ್ಮೊಂದಿಗೆ ಸಹಕರಿಸುತ್ತಿದ್ದಾರೆ. ಕರ್ನಾಟಕದಿಂದ ಅತ್ಯುತ್ತಮ ತರಬೇತಿದಾರರನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಳುಹಿಸಿಕೊಡುತ್ತಿದೆ. ತರಬೇತಿ ಕಾರ್ಯಕ್ರಮ ನವೆಂಬರ್ 16ರಿಂದ ಪ್ರಾರಂಭವಾಗಲಿದೆ. ಆಸಕ್ತಿಯುಳ್ಳವರು ಸಂಘದಲ್ಲಿ ತಮ್ಮ ಹೆಸರನ್ನು ನೋಂದಾಯಿಸಬಹುದು.

ವಿಶಿಷ್ಠ ಕನ್ನಡಿಗ ಪ್ರಶಸ್ತಿ ಪ್ರದಾನ, ವಿದ್ಯಾರ್ಥಿ ವೇತನ ವಿತರಣೆ, ಸಾಂಸ್ಕೃತಿಕ ಕಾರ್ಯಕ್ರಮಗಳು ನವೆಂಬರ್ 25ರಂದು ನಡೆಯಲಿವೆ. ಕರ್ನಾಟಕ ಚಲನಚಿತ್ರ ಅಕಾಡೆಮಿ ಸಹಯೋಗದೊಂದಿಗೆ 'ಬೆಳ್ಳಿಹೆಜ್ಜೆ' ಎನ್ನುವ ವಿಶೇಷ ಕಾರ್ಯಕ್ರಮವನ್ನು ನವೆಂಬರ್ 17ರಂದು ಆಯೋಜಿಸಲಾಗಿದೆ. ಖ್ಯಾತ ಚಲನಚಿತ್ರ ನಟ ಶ್ರೀ ರಮೇಶ್ ಅವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಚಲನಚಿತ್ರ ಪ್ರದರ್ಶನ ಹಾಗೂ ರಮೇಶ್ ಅವರೊಂದಿಗೆ ನೇರ ಸಂವಾದ ಮುಂತಾದ ಕಾರ್ಯಕ್ರಮಗಳು ನಡೆಯಲಿವೆ.

ದಯವಿಟ್ಟು ಈ ಮೇಲಿನ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಿ.

ಸಿ ಎಂ ನಾಗರಾಜ

### ದೆಹಲಿ ಕರ್ನಾಟಕ ಸಂಘ
### ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ಸಹಯೋಗದೊಂದಿಗೆ

"ಯಮುನೆಯ ತಡಿಯಲ್ಲಿ ಕನ್ನಡ ನುಡಿ–ಸಾಂಸ್ಕೃತಿಕ ಮಾಲಿಕೆ"

**ಕು. ಪೂಜ್ಯಾ ಮೋಹನ್, ತುಮಕೂರು**
**ಇವರಿಂದ**



## ವಚನ ಗಾಯನ

**ಡಿಸೆಂಬರ್ 8, 2012 ಶನಿವಾರ**

**ಸಮಯ : ಸಂಜೆ 5.30ಗಂಟೆಗೆ**

**ಸ್ಥಳ : ಸಂಘದ ಸಭಾಂಗಣ**

ತಮಗೆಲ್ಲರಿಗೂ ಆದರದ ಸ್ವಾಗತ

| | |
|---|---|
| ಡಾ. ವೆಂಕಟಾಚಲ ಹೆಗಡೆ<br>ಅಧ್ಯಕ್ಷರು | ಸಿ.ಎಂ. ನಾಗರಾಜ<br>ಪ್ರಧಾನ ಕಾರ್ಯದರ್ಶಿ |

### ದೆಹಲಿ ಕರ್ನಾಟಕ ಸಂಘ
## ಕರ್ನಾಟಕ ರಾಜ್ಯೋತ್ಸವ ಸಮಾರಂಭ

**ನವೆಂಬರ್ 24 ಮತ್ತು 25, 2012**

ಸ್ಥಳ : ಸಂಘದ ಸಭಾಂಗಣ

**ವಿಶಿಷ್ಠ ಕನ್ನಡಿಗ ಪ್ರಶಸ್ತಿ ಪ್ರದಾನ**
**ವಿದ್ಯಾರ್ಥಿ ವೇತನ ವಿತರಣೆ**

ಹಾಗೂ

**'ನಟನ' ಮೈಸೂರು ತಂಡದಿಂದ ನಾಟಕ**
**ಸಾಂಸ್ಕೃತಿಕ ಕಾರ್ಯಕ್ರಮ**

ತಮಗೆಲ್ಲರಿಗೂ ಆದರದ ಸ್ವಾಗತ

| | |
|---|---|
| ಡಾ. ವೆಂಕಟಾಚಲ ಹೆಗಡೆ<br>ಅಧ್ಯಕ್ಷರು | ಸಿ.ಎಂ. ನಾಗರಾಜ<br>ಪ್ರಧಾನ ಕಾರ್ಯದರ್ಶಿ |

ದೆಹಲಿ ಕರ್ನಾಟಕ ಸಂಘ ಹಾಗೂ ಕನ್ನಡ ಚಲನಚಿತ್ರ ಅಕಾಡೆಮಿ, ಕರ್ನಾಟಕ ಸರ್ಕಾರ
ಸಂಯುಕ್ತ ಆಶ್ರಯದಲ್ಲಿ

### "ಬೆಳ್ಳಿ ಹೆಜ್ಜೆ" ಕಾರ್ಯಕ್ರಮ

ಕನ್ನಡದ ಚಲನಚಿತ್ರ ನಟ ಶ್ರೀ ರಮೇಶ್ ಅವರೊಂದಿಗೆ ಸಂವಾದ ಕಾರ್ಯಕ್ರಮ ಹಾಗೂ ಚಲನಚಿತ್ರ ಪ್ರದರ್ಶನ

**ದಿನಾಂಕ : 17.11.2012 ಸ್ಥಳ: ದೆಹಲಿ ಕರ್ನಾಟಕ ಸಂಘದ ಸಭಾಂಗಣ ಸಮಯ ಸಂಜೆ : 4ಕ್ಕೆ**

**ಎಲ್ಲರಿಗೂ ಸ್ವಾಗತ**

| | |
|---|---|
| ಡಾ. ವೆಂಕಟಾಚಲ ಹೆಗಡೆ<br>ಅಧ್ಯಕ್ಷರು | ಸಿ.ಎಂ. ನಾಗರಾಜ<br>ಪ್ರಧಾನ ಕಾರ್ಯದರ್ಶಿ |

*ಹಲವಾರು ಕನ್ನಡಿಗರ ದಶಕಗಳ ಹೋರಾಟದ ಫಲವಾಗಿ ಕರ್ನಾಟಕ ಏಕೀಕರಣಗೊಂಡಿತು. ಆದರೆ ಈಗ ಅರ್ಧ ಶತಮಾನ ಕಳೆದರೂ ಇನ್ನೂ, ಕನ್ನಡಿಗರ ಸಮಸ್ಯೆಗಳು ಪರಿಹಾರವಾಗಿಲ್ಲ. ಕೋಮು ಗಲಭೆಗಳು, ಗಡಿ ಸಮಸ್ಯೆ, ನದಿ ನೀರು ಹಂಚಿಕೆ ಸಮಸ್ಯೆ, ಪ್ರಾದೇಶಿಕ ಅಸಮತೋಲನ ಇತ್ಯಾದಿಗಳ ಬಗೆಗೆ ಚರ್ಚೆಗಳು ಹೆಚ್ಚುತ್ತಿವೆ. ಈ ಸಂದರ್ಭದಲ್ಲಿ ಇಂತಹ ಎರಡು ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವಂತ ಲೇಖನಗಳನ್ನು, ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ವಿಶೇಷವಾಗಿ ನಿಮ್ಮೆದುರು ಪ್ರಸ್ತುತ ಪಡಿಸುತ್ತಿದ್ದೇವೆ. ಈ ಲೇಖನಗಳನ್ನು, ಕಳುಹಿಸಿಕೊಟ್ಟ ಲೇಖಕರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಕೃತಜ್ಞತೆಗಳು.*

# ಪ್ರಾದೇಶಿಕ ಅಸಮಾನತೆ ಮತ್ತು 371 ಜೆ

ನಮ್ಮ ರಾಜ್ಯದ ಗುಲಬರ್ಗಾ ವಿಭಾಗದ ಆರು ಜಿಲ್ಲೆಗಳ (ಬಳ್ಳಾರಿ, ಬೀದರ್, ಗುಲಬರ್ಗಾ, ಕೊಪ್ಪಳ, ರಾಯಚೂರು ಮತ್ತು ಯಾದಗಿರ್) ವಿಶೇಷ ಅಭಿವೃದ್ಧಿಗಾಗಿ ಸಂವಿಧಾನದ 371 ಜೆ ಕಲಮನ್ನು ಜಾರಿಗೊಳಿಸುವ ಬಗ್ಗೆ ಕೇಂದ್ರ ಸರ್ಕಾರವು ತೀರ್ಮಾನ ತೆಗೆದುಕೊಂಡ ಸುದ್ಧಿಯನ್ನು ಕೇಳಿ ಸಕಾರಣವಾಗಿ ಇಲ್ಲಿನ ಜನರು ವಿಜಯೋತ್ಸವನ್ನು ಆಚರಿಸುತ್ತಿದ್ದಾರೆ. ಈ ವಿಭಾಗದ ಜಿಲ್ಲೆಗಳು ಎದುರಿಸುತ್ತಿರುವ ದುಸ್ಥಿತಿಯ ನಿವಾರಣೆಗಾಗಿ ಸಂವಿಧಾನಾತ್ಮಕ ಸವಲತ್ತು ಬೇಕು ಎಂಬ ಸಂಗತಿಯನ್ನು ಮುಂದಿಟ್ಟುಕೊಂಡು ಅನೇಕ ದಶಕಗಳಿಂದ ಜನರು ನಿರಂತರ ಹೋರಾಟ ಮಾಡುತ್ತಾ ಬಂದಿದ್ದರು. ಈಗ ಸಂವಿಧಾನದ 371ರ ವಿಧಿಗೆ ತಿದ್ದುಪಡಿ ಮಾಡಿ ನಮ್ಮ ರಾಜ್ಯದ ಗುಲಬರ್ಗಾ ವಿಭಾಗದ ಆರು ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನ ನೀಡುವುದಕ್ಕಾಗಿ ಅಲ್ಲಿಗೆ 371–ಜೆ ಎಂಬ ಹೊಸ ಭಾಗವನ್ನು ಸೇರಿಸುವ ಬಗ್ಗೆ ಕೇಂದ್ರ ಸರ್ಕಾರದ ಸಚಿವ ಸಂಪುಟವು ತೀರ್ಮಾನ ತೆಗೆದುಕೊಂಡಿದೆ.

**ಈ 371–ಜೆ ಕಲಮಿನಡಿಯಲ್ಲಿ ನಮ್ಮ ರಾಜ್ಯದ ರಾಜ್ಯಪಾಲರಿಗೆ ಕೆಳಕಂಡ ಅಧಿಕಾರ ಪ್ರಾಪ್ತವಾಗುತ್ತದೆ:**

1. ಗುಲಬರ್ಗಾ ವಿಭಾಗದ ಆರು ಜಿಲ್ಲೆಗಳನ್ನೊಳಗೊಂಡ ಪ್ರದೇಶದ ಪ್ರಗತಿಗಾಗಿ ವಿಶೇಷ ಅಭಿವೃದ್ಧಿ ಮಂಡಳಿಯನ್ನು ರಚಿಸುವುದು.
2. ಇಡೀ ರಾಜ್ಯದ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿ ವೆಚ್ಚವನ್ನು ನ್ಯಾಯಯುತವಾಗಿ ಹಂಚುವುದು,
3. ಈ ಪ್ರದೇಶಕ್ಕೆ –ಹುಟ್ಟುನಿಂದಾಗಲಿ ಅಥವಾ ವಲಸೆ ಬಂದು ನೆಲೆಸಿರುವವರಾಗಲಿ– ಸೇರಿದ ಎಲ್ಲರಿಗೂ ಶೈಕ್ಷಣಿಕ ಮತ್ತು ಮತ್ತು ವೃತ್ತಿ ತರಬೇತಿ ಸಂಸ್ಥೆಗಳಲ್ಲಿ ಕೆಲವು ಸ್ಥಾನಗಳನ್ನು ಮೀಸಲಿಡುವುದು,
4. ಈ ಪ್ರದೇಶಕ್ಕೆ–ಹುಟ್ಟಿನಿಂದಾಗಲಿ ಅಥವಾ ವಲಸೆ ಕಾರಣದಿಂದಾಗಲಿ– ಸೇರಿದ ಎಲ್ಲರಿಗೂ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿರುವ ಹುದ್ದೆಗಳಲ್ಲಿ ಒಂದು ಭಾಗವನ್ನು ಮೀಸಲಿಡುವುದು.

ಒಟ್ಟಾರೆ ಸಂಪನ್ಮೂಲಗಳ ನ್ಯಾಯಯುತ ವಿತರಣೆಗಾಗಿ ಮತ್ತು ಸೇವಾ ಕ್ಷೇತ್ರದಲ್ಲಿ ಸ್ಥಳೀಯ ಕೇಡರನ್ನು ರಚಿಸುವ ಮೂಲಕ ಮಾನವ ಸಂಪನ್ಮೂಲದ ಸಾಮರ್ಥ್ಯವನ್ನು ವರ್ಧಿಸುವುದಕ್ಕೆ ಹಾಗೂ ಶೈಕ್ಷಣಿಕ ಮತ್ತು ವೃತ್ತಿ ತರಬೇತಿ ಸಂಸ್ಥೆಗಳಲ್ಲಿ ಮೀಸಲಾತಿ ನೀಡುವ ಮೂಲಕ ಉದ್ಯೋಗದ ಅವಕಾಶಗಳನ್ನು ವಿಸ್ತರಿಸುವುದಕ್ಕೆ 371–ಜೆ ಅಡಿಯಲ್ಲಿ ಒಂದು ಸಾಂಸ್ಥಿಕ ವ್ಯವಸ್ಥೆಯನ್ನು ರೂಪಿಸಲಾಗುತ್ತದೆ. ಅಂದರೆ ಈ ಹೊಸ ವ್ಯವಸ್ಥೆಯಲ್ಲಿ ಸ್ಥಳೀಯ ಜನಸಮುದಾಯದ ಧಾರಣಾ ಸಾಮರ್ಥ್ಯವನ್ನು ಸಂವರ್ಧಿಸುವ ಮೂಲಕ ಮತ್ತು ಸಂವರ್ಧಿಸಿದ ಧಾರಣಾ ಸಾಮರ್ಥ್ಯಕ್ಕೆ ಅಗತ್ಯವಾದ ಉದ್ಯೋಗದ ಅವಕಾಶಗಳನ್ನು ಒದಗಿಸುವುದುರ ಮೂಲಕ ಅಭಿವೃದ್ಧಿಯನ್ನು ಸಹಭಾಗಿತ್ವವನ್ನಾಗಿ ಮಾಡಲು ಪ್ರಯತ್ನಿಸಲಾಗುತ್ತದೆ.

ಈ ಪ್ರದೇಶದ ಜಿಲ್ಲೆಗಳು ಏಕೀಕರಣ ಪೂರ್ವದಲ್ಲಿ ಯಾವ ಸಮಸ್ಯೆಗಳನ್ನು, ಅಂದರೆ ಬಡತನ, ದುಸ್ಥಿತಿ, ಹಸಿವು, ಅನಕ್ಷರತೆ, ಅನಾರೋಗ್ಯ, ಅಸಮಾನತೆ ಮುಂತಾದವುಗಳನ್ನು ಅನುಭವಿಸುತ್ತಿದ್ದವೋ ಅದೇ ಸಮಸ್ಯೆಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಅದೇ ಪ್ರಮಾಣದಲ್ಲಿ ಏಕೀಕರಣವಾಗಿ 55 ವರ್ಷಗಳ ನಂತರವೂ ಅವು ಇಂದು ಅನುಭವಿಸುತ್ತಿವೆ. ಈ ಕಾರಣದಿಂದಾಗಿ ಪ್ರಸ್ತುತ 371–ಜೆ ಕಾರ್ಯ ಯೋಜನೆಯು ಎಷ್ಟರಮಟ್ಟಿಗೆ ಈ ಜಿಲ್ಲೆಗಳನ್ನು ಕಾಡುತ್ತಿರುವ ಸಮಸ್ಯೆಗಳನ್ನು ನಿವಾರಿಸುವುದುರಲ್ಲಿ ಸಫಲವಾಗುತ್ತದೆ ಎಂಬುದರ ಬಗ್ಗೆ ಸಣ್ಣ ಅನುಮಾನ ಉಂಟಾಗುತ್ತದೆ. ಇದಕ್ಕೆ ಕಾರಣಗಳು ಇಲ್ಲದಿಲ್ಲ. ಈ ಹಿಂದೆ ಈ ಪ್ರದೇಶದ ಜಿಲ್ಲೆಗಳ ಅಭಿವೃದ್ಧಿಗಾಗಿ ನಡೆಸಿದ ಎಲ್ಲ ವಿಶೇಷ ಪ್ರಯತ್ನಗಳು ವಿಫಲವಾಗಿರುವ ವಿಷಾದಕರ ಅನುಭವ ನಮ್ಮ ಮುಂದಿದೆ.

ಈ ಪ್ರದೇಶದ ಜಿಲ್ಲೆಗಳ ದುಸ್ಥಿತಿಯನ್ನು ಮತ್ತು ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸುವ ಉದ್ದೇಶದಿಂದ 1990ರಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲಾಯಿತು. ಈ ಪ್ರದೇಶದ ಜಿಲ್ಲೆಗಳ ಅಭಿವೃದ್ಧಿಗೆ ಅದರ ಕಾಣಿಕೆಯೇನು ಮತ್ತು ಅದರಿಂದ ಈ ಪ್ರದೇಶದಲ್ಲಿ ಬಡತನ, ಹಸಿವು, ಅನಕ್ಷರತೆ, ಅನಾರೋಗ್ಯ ಮುಂತಾದ ಸಮಸ್ಯೆಗಳು ಎಷ್ಟರಮಟ್ಟಿಗೆ ನಿವಾರಣೆ/ಕಡಿಮೆಯಾಗಿವೆ ಎಂಬುದು ಇಂದು ಜಗಜ್ಜಾಹೀರಾಗಿದೆ. ನಮ್ಮ ರಾಜ್ಯದ ಯೋಜನಾ ಮಂಡಳಿಯು ಈ ಸಂಸ್ಥೆಯು ತನ್ನ ಉದ್ದೇಶವನ್ನು ಈಡೇರಿಸುವುದರಲ್ಲಿ ವಿಫಲವಾಗಿರುವ ಕಾರಣ ಅದನ್ನು ರದ್ದುಪಡಿಸಬೇಕೆಂದು 90ರ ದಶಕದ ಕೊನೆಯ ಭಾಗದಲ್ಲಿ ಶಿಫಾರಸ್ಸು ಮಾಡಿತ್ತು. ಪ್ರಾದೇಶಿಕ ಅಸಮಾನತೆ ನಿವಾರಣೆ ಬಗ್ಗೆ ವಿಶೇಷ ಅಧ್ಯಯನ ನಡೆಸಿದ ಡಾ.ಡಿ.ಎಂ. ನಂಜುಂಡಪ್ಪ ಸಮಿತಿಯು ಕೂಡ ಪ್ರದೇಶ ಅಭಿವೃದ್ಧಿ ಮಂಡಳಿಗಳನ್ನು ರದ್ದು ಪಡಿಸುವಂತೆ ಸಲಹೆ ಮಾಡಿತ್ತು.

ಈ ಪ್ರದೇಶದಲ್ಲಿ ವಿಕೇಂದ್ರೀಕರಣ ವ್ಯವಸ್ಥೆಯ ಪ್ರಯೋಗವೂ ನಿರೀಕ್ಷಿಸಿದ ಫಲಗಳನ್ನೇನು ನೀಡಲಿಲ್ಲ. ಈ ಪ್ರದೇಶದ ಎಲ್ಲ ಜಿಲ್ಲೆಗಳಲ್ಲೂ ಸಂವಿಧಾನಾತ್ಮಕ 'ಜಿಲ್ಲಾ ಯೋಜನಾ ಸಮಿತಿ'ಗಳು ಅಸ್ತಿತ್ವದಲ್ಲಿವೆ. ಆದರೆ ಅವುಗಳು ಕ್ರಿಯಾಶೀಲವಾಗಿಲ್ಲ. ತಳಮಟ್ಟದ ಅಭಿವೃದ್ಧಿ ಯೋಜನೆ ಎಂಬುದು ಕೇವಲ ಕಡತದಲ್ಲಿದೆ ವಿನಾ ವಾಸ್ತವದಲ್ಲಿ ಅದು ಆಚರಣೆಯಲ್ಲಿಲ್ಲ.

ಇವಲ್ಲದೆ ಮತ್ತೊಂದು ಕ್ರಮವು 2007–08ರಲ್ಲಿ ಅಸ್ತಿತ್ವಕ್ಕೆ ಬಂತು. ಡಾ.ಡಿ.ಎಂ. ನಂಜುಂಡಪ್ಪ ಸಮಿತಿಯ ಶಿಫಾರಸ್ಸಾದ ರೂ31,000 ಕೋಟಿಯ ಎಂಟು ವರ್ಷಗಳ 114 ಹಿಂದುಳಿದ ತಾಲ್ಲೂಕುಗಳಿಗೆ ಅನ್ವಯವಾಗುವ ವಿಶೇಷ ಅಭಿವೃದ್ಧಿ ಯೋಜನೆಯನ್ನು ಸರ್ಕಾರವು 2007–08ರಲ್ಲಿ ಅನುಷ್ಟಾನಗೊಳಿಸಿತು. ಇದರ ಅನುಭವವೂ ಆಶಾದಾಯಕವಾಗಿಲ್ಲ. ಮೊದಲನೆಯದಾಗಿ ಈ ಯೋಜನೆಯನ್ನು ಸರ್ಕಾರವು 2003ರಲ್ಲಿ ಅನುಷ್ಟಾನಗೊಳಿಸಬೇಕಾಗಿತ್ತು. ಆದರೆ ಅದು 2007–08ರಲ್ಲಿ ಅನುಷ್ಟಾನಗೊಂಡಿತು. ಇದರ ಗಾತ್ರವಾದ ರೂ. 31,000 ಕೋಟಿಯಲ್ಲಿ ರೂ. 15,000 ಕೋಟಿಯು ವಾರ್ಷಿಕವಾಗಿ ಯೋಜನೆ ಬಾಬ್ತು ಹರಿದು ಬರುವ ಮೊತ್ತವಾದರೆ ಉಳಿದ ರೂ. 16,000 ಕೋಟಿಯನ್ನು ಸರ್ಕಾರವು 'ಹೆಚ್ಚುವರಿ'ಯಾಗಿ ನೀಡಬೇಕು ಎಂಬುದು ಸಮಿತಿಯ ಶಿಫಾರಸ್ಸಾಗಿತ್ತು. ಈ ರೂ. 16,000 ಕೋಟಿಯು ಹೆಚ್ಚುವರಿಯಾಗಿ ಒದಗಿ ಬರುವುದಕ್ಕೆ ಪ್ರತಿಯಾಗಿ ಅದು ವಾರ್ಷಿಕ ಬಜೆಟ್ಟಿನ ಭಾಗವಾಗಿ ಹರಿದು ಬರುತ್ತಿದೆ ಮತ್ತು ರೂ. 15,000 ಕೋಟಿಯ ಬಗ್ಗೆ ಯಾವುದೇ ಕ್ರಮಗಳು ಕಂಡು ಬರುತ್ತಿಲ್ಲ.

ಇದೆಲ್ಲಕ್ಕಿಂತ ಮುಖ್ಯವಾಗಿ ರೂ. 16,000 ಕೋಟಿ ಅನುದಾನವನ್ನು 114 ಹಿಂದುಳಿದ ಪ್ರದೇಶ, ವಿಭಾಗ, ಜಿಲ್ಲೆ ಮತ್ತು ತಾಲ್ಲೂಕುಗಳ ನಡುವೆ ಹಂಚಲು ಡಾ.ಡಿ.ಎಂ.ನಂಜುಂಡಪ್ಪ ಸಮಿತಿಯು ತಾನು ರೂಪಿಸಿದ್ದ ದುಸ್ಥಿತಿ ಸೂಚ್ಯಂಕವನ್ನು ಆಧರಿಸಿ ಒಂದು ಸೂತ್ರವನ್ನು ನೀಡಿತ್ತು. ಯಾವ ಕಾರಣವನ್ನು ನೀಡದೆ ಸರ್ಕಾರವು 2007–08ರಲ್ಲಿ ಸಮಿತಿಯ ಸೂತ್ರವನ್ನು ಕೈಬಿಟ್ಟು ತನ್ನ ಸರ್ಕಾರಿ ಸೂತ್ರವನ್ನು ಅನುಸರಿಸಿ ಅನುದಾನವನ್ನು ಹಂಚಿತು. ಇದರಿಂದಾಗಿ ಮೊದಲನೆಯ ವರ್ಷವೇ ಸಮಿತಿ ಸೂತ್ರವನ್ನು ಅನುಸರಿಸಿ ಅನುದಾನವನ್ನು ಹಂಚಿದ್ದರೆ ರಾಜ್ಯದ ಅತ್ಯಂತ ಹಿಂದುಳಿದ ಗುಲಬರ್ಗಾ ವಿಭಾಗಕ್ಕೆ ಎಷ್ಟು ಹಣ ಹರಿದು ಬರಬೇಕಾಗಿತ್ತೋ ಅದಕ್ಕಿಂತ ರೂ. 128 ಕೋಟಿ 2007–08 ರಲ್ಲಿ ಮತ್ತು ರೂ. 235.48 ಕೋಟಿ 2008–09ರಲ್ಲಿ ಕಡಿಮೆ ದೊರೆಯಿತು. ನಾವಿಬ್ಬರು ಈ ರೀತಿಯ ನ್ಯೂನ್ಯತೆಯನ್ನು ಸರ್ಕಾರದ ಗಮನಕ್ಕೆ ತಂದ ಮೇಲೆ 2009–10ರಲ್ಲಿ ಸರ್ಕಾರಿ ಸೂತ್ರವನ್ನು ಕೈಬಿಟ್ಟು ಸಮಿತಿ ಸೂತ್ರವನ್ನು ಅನುದಾನ ಹಂಚಿಕೆಗೆ ಅಳವಡಿಸಿಕೊಳ್ಳಲಾಯಿತು.

ಇದರ ಮತ್ತೊಂದು ವಿಷಾದಕರ ಸಂಗತಿಯೆಂದರೆ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯ ಹಣಕಾಸಿನ ನಿರ್ವಹಣೆಯು ಸಮರ್ಪಕವಾಗಿಲ್ಲ. ಉದಾಹರಣೆಗೆ ಸರ್ಕಾರವು 2007-08 ರಿಂದ 2011-2012ರ ಅವಧಿಯಲ್ಲಿ ಇದಕ್ಕೆ ಒದಗಿಸಿದ ಹಣ ರೂ 12,265.82 ಕೋಟಿ. ಆದರೆ ಇದರಲ್ಲಿ ಬಿಡುಗಡೆಯಾದ ಹಣ ಕೇವಲ ರೂ 8,342.05 ಕೋಟಿ. ಬಿಡುಗಡೆಯಾದುದರಲ್ಲಿ ಖರ್ಚಾಗಿರುವುದು ರೂ7,881.18 ಕೋಟಿ. ಈ ವಿಶೇಷ ಯೋಜನೆಯ ನಿರ್ವಹಣೆಗಾಗಿ ಒಂದು ಉನ್ನತಾಧಿಕಾರ ಸಮಿತಿಯಿದೆ. ಈ ಸಮಿತಿಯಿದ್ದರೂ ಅದರ ಕಾರ್ಯಾನುಷ್ಠಾನ ದುರ್ಬಲವಾಗಿದೆ.

ಮೇಲೆ ತಿಳಿಸಿರುವ ಯಾವ ಯೋಜನೆಗಳಲ್ಲೂ ಸದರಿ ಪ್ರದೇಶದ 55.68 ಲಕ್ಷ(2011) ಮಹಿಳೆಯರ ಬದುಕನ್ನು ಉತ್ತಮಪಡಿಸುವ ಬಗ್ಗೆ ಕ್ರಮಗಳಿಲ್ಲ. ಈ ಪ್ರದೇಶದಲ್ಲಿ ಮಹಿಳೆಯರು ಅನೇಕ ಬಗೆಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವರ ಬದುಕನ್ನು ಉತ್ತಮಪಡಿಸಲು ಕೆಲವು ನಿರ್ದಿಷ್ಟ ಕಾರ್ಯಕ್ರಮಗಳು ಬೇಕಾಗುತ್ತವೆ. ಆದರೆ ಅಂತಹ ದೃಷ್ಟಿಕೋನ ನಮಗೆ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಚಟುವಟಿಕೆಗಳಲ್ಲಾಗಲಿ ಅಥವಾ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯಲ್ಲಾಗಲಿ ಕಂಡು ಬರುತ್ತಿಲ್ಲ. ಇದಕ್ಕೆ 371-ಜೆ ಅಪವಾದವಾಗುತ್ತದೆಯೇ?

ಇದಲ್ಲದೆ ಗುಲಬರ್ಗಾ ವಿಭಾಗದ ಜಿಲ್ಲೆಗಳಲ್ಲಿ ವಲಸೆಯು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಹೀಗೆ ವಲಸೆ ಹೋಗುವವರೆಲ್ಲರೂ ಸಮಾಜದ ಅಂಚಿನಲ್ಲಿರುವ ಸಮುದಾಯಕ್ಕೆ ಸೇರಿದವರಾಗಿರುತ್ತಾರೆ ಮತ್ತು ಭೂರಹಿತ ದಿನಗೂಲಿಗಳಾಗಿರುತ್ತಾರೆ. ಈ ಬಗೆಯ ಜನರ ಅನಿವಾರ್ಯ ವಲಸೆಯನ್ನು ತಡೆಯುವುದು ನಮಗೆ ಸಾಧ್ಯವಾಗಿಲ್ಲ. ಅದಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳೆಲ್ಲವೂ ವಿಫಲವಾಗಿವೆ. ಈಗ ಕಾರ್ಯಾನುಷ್ಠಾನಗೊಳ್ಳುತ್ತಿರುವ ಸಂವಿಧಾನದ ಕಲಮು 371-ಜೆ ಇದರಲ್ಲಿ ಯಶಸ್ವಿಯಾಗುತ್ತದೆಯೇ?

ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ ನಾವು ನಿರಾಶರಾಗುವ ಅಗತ್ಯವಿಲ್ಲ. ಈಗ ಹೊಸದಾಗಿ ಅಸ್ತಿತ್ವಕ್ಕೆ ಬರಲಿರುವ 371-ಜೆ ಕಾರ್ಯಸೂಚಿಯಲ್ಲಿ ಅನೇಕ ವಿಶಿಷ್ಟವಾದ ಮತ್ತು ಈವರೆಗಿನ ಕಾರ್ಯಕ್ರಮಗಳಿಗಿಂತ ಭಿನ್ನವಾದ ಕೆಲವು ಸಂಗತಿಗಳಿವೆ. ಈ ಹೊಸ ಕಾರ್ಯಸೂಚಿಯಲ್ಲಿ ಪ್ರಾದೇಶಿಕ ಯೋಜನೆಯನ್ನು ಸಿದ್ದಪಡಿಸುವುದು, ಅದರ ಅನುಷ್ಠಾನ, ಅದಕ್ಕೆ ಸಂಬಂಧಿಸಿದ ಅನುದಾನದ ಹಂಚಿಕೆ, ಕಾರ್ಯಕ್ರಮಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಜವಾಬುದಾರಿಯು ರಾಜ್ಯಪಾಲದ ವಶದಲ್ಲಿರುತ್ತದೆ. ಈ ಕಾರ್ಯವನ್ನು ನಿರ್ವಹಿಸಲು ರಾಜ್ಯಪಾಲರು ಇಬ್ಬರೂ ಅಥವಾ ಮೂವರ ತಜ್ಞರ ಒಂದು ಅಥವಾ ಎರಡು ಸಲಹಾ ಸಮಿತಿಗಳನ್ನು ನೇಮಿಸಿಕೊಳ್ಳಬಹುದು. ಈ ಪ್ರದೇಶದ ಅಭಿವೃದ್ಧಿಯಲ್ಲಿ ಇದು ವಿಶಿಷ್ಟವಾದ ಪರಿಣಾಮ ಬೀರಬಲ್ಲದು. ಮತ್ತೊಂದು ವಿಶಿಷ್ಟ ಸಂಗತಿಯೆಂದರೆ ಈ ಕಾರ್ಯಸೂಚಿಯಲ್ಲಿರುವ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಮೀಸಲಾತಿ ಕ್ರಮದ ಮೂಲಕ ಈ ಪ್ರದೇಶದ ಮಾನವ ಸಂಪನ್ಮೂಲದ ಧಾರಣಾ ಸಾಮರ್ಥ್ಯವನ್ನು ಉತ್ತಮಪಡಿಸಲು ಸಾಧ್ಯವಿದೆ. ಅಮರ್ತ್ಯಸೇನ್ ಪ್ರಕಾರ ಅಭಿವೃದ್ಧಿಯಲ್ಲಿ ಎರಡು ಸಂಗತಿಗಳು ಏಕಕಾಲದಲ್ಲಿ ನಡೆಯಬೇಕು. ಒಂದು: 371-ಜೆ ಅಡಿಯಲ್ಲಿ ಅವಕಾಶಗಳ ವ್ಯಾಪ್ತಿಯ ವಿಸ್ತರಣೆಯಾಗಬೇಕು. ಎರಡು: ಹೀಗೆ ವಿಸ್ತರಣೆಯಾದ ಅವಕಾಶಗಳನ್ನು ಧಾರಣೆ ಮಾಡಿಕೊಳ್ಳಲು ಅಗತ್ಯವಾದ ಜನರ ಸಾಮರ್ಥ್ಯವನ್ನು ಉತ್ತಮಪಡಿಸಬೇಕು. ಇವೆರಡೂ ಏಕಕಾಲದಲ್ಲಿ ನಡೆಯಬೇಕು.

ಸಂವಿಧಾನದ ವಿಶೇಷ ಸವಲತ್ತಿಗಾಗಿ ಕಳೆದ ಎರಡು-ಮೂರು ದಶಕಗಳಿಂದ ಹೋರಾಟ ನಡೆಸಿಕೊಂಡು ಬಂದ ಹೈದರಾಬಾದ್ ಕರ್ನಾಟಕ ಪ್ರದೇಶದ ಮುತ್ಸದ್ದಿಗಳು 371-ಜೆ ಜಾರಿಗೆ ಬಂದು ಬಿಟ್ಟಿದೆ ಎಂದು ನಿರ್ಲಿಪ್ತರಾಗಿ ಕುಳಿತುಕೊಳ್ಳಬಾರದು. ಈ ಸವಲತ್ತಿಗಾಗಿ ಹೋರಾಟ ನಡೆಸಿ ಅದರಿಂದ ಬರಬಹುದಾದ ಅನುಕೂಲಗಳ ಬಗ್ಗೆ ಅವರೆಲ್ಲ ಯಾವ ಕನಸನ್ನು ಕಂಡಿದ್ದರೋ ಅದನ್ನು ನನಸು ಮಾಡುಕೊಳ್ಳುವ ದಿಶೆಯಲ್ಲಿಯೂ ಅವರು ಕ್ರಿಯಾಶೀಲ ರಾಗಿರಬೇಕಾಗುತ್ತದೆ. ಈಗ ನಾಗರಿಕ ಸಮಾಜದ ಜವಾಬುದಾರಿ ಹೆಚ್ಚಾಗಿದೆ. ಇಂದು ನಡೆಯುತ್ತಿರುವ ಲಕ್ಷಾಂತರ ಕೋಟಿ ರೂಪಾಯಿಗಳ ಹಗರಣಗಳ ಹಿನ್ನೆಲೆಯಲ್ಲಿ ನಾವು ಇದರ ಬಗ್ಗೆ ಚಿಂತಿಸುವ ಅಗತ್ಯವಿದೆ.

ಅಭಿವೃದ್ಧಿಯ ಉದ್ದೇಶವಿಟ್ಟುಕೊಂಡ ಸಾಂಸ್ಥಿಕ ವ್ಯವಸ್ಥೆಯೊಂದು ಅಸ್ತಿತ್ವಕ್ಕೆ ಬಂದು ಬಿಟ್ಟರೆ ಸಾಕಾಗುವುದಿಲ್ಲ. ಹೀಗೆ ಅಸ್ತಿತ್ವಕ್ಕೆ ಬಂದ ಸಾಂಸ್ಥಿಕ ವ್ಯವಸ್ಥೆಯು ಅತ್ಯಂತ ಉಪಯುಕ್ತವಾಗಿ ಮತ್ತು ಕರ್ತೃತ್ವದಿಂದ ಕಾರ್ಯವೆಸಗುವಂತೆ ನೋಡಿಕೊ ಳ್ಳಬೇಕಾಗುತ್ತದೆ. ಸಾಂಸ್ಥಿಕ ವ್ಯವಸ್ಥೆಯೇ ಅಭಿವೃದ್ಧಿಯಲ್ಲ. ಅಭಿವೃದ್ಧಿಗೆ ಸಾಂಸ್ಥಿಕ ವ್ಯವಸ್ಥೆಯು ಅಗತ್ಯ. ಆದರೆ ಅದೇ ಎಲ್ಲವೂ ಅಲ್ಲ. ಕೇವಲ 371-ಜೆ ಜಾರಿಗೊಂಡು ಬಿಟ್ಟರೆ ಗುಲಬರ್ಗಾ ವಿಭಾಗದ ಆರು ಜಿಲ್ಲೆಗಳಲ್ಲಿರುವ ವಂಚಿತರಿಗೆ, ಅಂಚಿನಲ್ಲಿರುವವರಿಗೆ, ಮಹಿಳೆಯರಿಗೆ, ದಿನಗೂಲಿ ದುಡಿಮೆಗಾರರಿಗೆ, ದಲಿತರಿಗೆ ಅನುಕೂಲಗಳು ತಮ್ಮಷ್ಟಕ್ಕೆ ತಾವು ಹರಿದು ಬರುವುದಿಲ್ಲ. ಕಳೆದ 50 ವರ್ಷಗಳ ಸದರಿ ಪ್ರದೇಶದ ಅಭಿವೃದ್ಧಿ ನಿರ್ವಹಣೆಯಿಂದ ನಾವು ಕಲಿಯಬಹುದಾದ ಪಾಠ ಇದಾಗಿದೆ. ಈ ಪಾಠ ಕಲಿಯದಿದ್ದರೆ '371-ಜೆ'ನ ಕೊಡುಗೆಯು ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಮತ್ತು ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಗಳ ಕೊಡುಗೆಗಳಿಗಿಂತ ಭಿನ್ನವಾಗಿರುವುದಿಲ್ಲ. ಈ ಬಗ್ಗೆ ನಾವು ಯೋಚಿಸುವ ಅಗತ್ಯವಿದೆ.

**ಡಾ. ಟಿ.ಆರ್. ಚಂದ್ರಶೇಖರ್**
**ಪ್ರಾಧ್ಯಾಪಕರು, ಕನ್ನಡ ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿ.ವಿ.-ಹಂಪಿ.**

**ಡಾ.ಬಿ.ಶೇಷಾದ್ರಿ.**
**ನಿವೃತ್ತ ಪ್ರಾಧ್ಯಾಪಕರು, ಕನ್ನಡ ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿ.ವಿ. -ಹಂಪಿ**
**(ಪ್ರಸ್ತುತ ಬಳ್ಳಾರಿಯಲ್ಲಿ ನೆಲೆಸಿದ್ದಾರೆ)**

# ಸುಗಮ ಸಂಗೀತದ ಸುಧೆ ಹರಿಸಿದ ಮೃತ್ಯುಂಜಯ ದೊಡ್ಡವಾಡ




"ಯಮುನೆಯ ತಡಿಯಲ್ಲಿ ಕನ್ನಡ ನುಡಿ"-ಸಾಂಸ್ಕೃತಿಕ ಮಾಲಿಕೆಯ ಮೂರನೆಯ ಕಾರ್ಯಕ್ರಮದಲ್ಲಿ ಅಕ್ಟೋಬರ್ 13ರ ಶನಿವಾರ ಸಂಜೆ ಖ್ಯಾತ ಸುಗಮ ಸಂಗೀತ ಗಾಯಕ ಮೃತ್ಯುಂಜಯ ದೊಡ್ಡವಾಡ ಅವರು ಅತ್ಯಂತ ಜನಪ್ರಿಯ ಭಾವಗೀತೆಗಳನ್ನು ದೆಹಲಿ ಕನ್ನಡಿಗರ ಮುಂದೆ ಭಾವ ತುಂಬಿ ಹಾಡಿದರು. ಗಾಯಕ ಹಾಗೂ ಸಂಗೀತ ನಿರ್ದೇಶಕರಾಗಿ ಜನಪ್ರಿಯರಾಗಿರುವ ಮೃತ್ಯುಂಜಯ ಅವರು ನಾಡಿನಾದ್ಯಂತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇದೀಗ ತಾನೇ ಅಮೆರಿಕದಲ್ಲಿ ಜರುಗಿದ 'ಅಕ್ಕ' ಕಾರ್ಯಕ್ರಮದಲ್ಲಿ ಕೂಡಾ ತಮ್ಮ ಗಾನಾಮೃತವನ್ನು ಅನಿವಾಸಿ ಕನ್ನಡಿಗರಿಗೆ ನೀಡಿ ಅಪಾರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಕೀ ಬೋರ್ಡ್ ವಾದಕರಾಗಿಯೂ ಪರಿಣಿತಿ ಹೊಂದಿರುವ ಮೃತ್ಯುಂಜಯ ಅವರು ನಾಡಿನ ಪ್ರಮುಖ ಗಾಯಕರೊಡನೆ ಹಾಡಿದ್ದಾರೆ. ಸಂಗೀತ ಧಾಮ ಮ್ಯೂಸಿಕ್ ಅಕಾಡೆಮಿಯನ್ನು ಸ್ಥಾಪಿಸಿ ನೂರಾರು ಮಕ್ಕಳಿಗೆ ಸಂಗೀತ ಕಲಿಸುತ್ತಿರುವ ಮೃತ್ಯುಂಜಯ ಅವರು ನಾಡಿನ ಖ್ಯಾತ ಕವಿಗಳ ಹತ್ತು ಧ್ವನಿ ಸುರುಳಿಗಳನ್ನು ಹೊರ ತಂದಿದ್ದು ಜನಪ್ರಿಯತೆ ಗಳಿಸಿದೆ. ಇವರ ವಿಶಿಷ್ಟ ಕಂಠಸಿರಿಯೊಂದಿಗೆ ಮಧುರ ದನಿಗೂಡಿಸಿದವರು ಶ್ರೀಮತಿ ಜ್ಯೋತಿ ರವಿಪ್ರಕಾಶ್. ನಾಡಿನೆಲ್ಲೆಡೆ ಹಲವಾರು ಸಂಗೀತ ಕಾರ್ಯಕ್ರಮಗಳನ್ನು ನೀಡಿ ಖ್ಯಾತರಾಗಿರುವ ಜ್ಯೋತಿ ರವಿಪ್ರಕಾಶ್ ಅವರೂ ಕೂಡಾ ಜನಪ್ರಿಯ ಭಾವಗೀತೆಗಳನ್ನು ಹಾಡಿ ಪ್ರಶಂಸೆಗೆ ಪಾತ್ರರಾದರು. ಕೀ ಬೋರ್ಡ್‌ನಲ್ಲಿ ಗಣೇಶ ಪ್ರಸಾದ್, ತಬಲಾದಲ್ಲಿ ಹನುಮಂತರಾಯ ಹಾಗೂ ರಿದಂ ಪ್ಯಾಡ್‌ನಲ್ಲಿ ಅನಂತ ಪದ್ಮನಾಭ ಅವರು ಸಾಥ್ ನೀಡಿದರು.

ಕಾರ್ಯಕಾರಿ ಸಮಿತಿಯ ಸದಸ್ಯೆ ಎಸ್.ಸಿ. ಹೇಮಲತ ಕಾರ್ಯಕ್ರಮ ನಿರ್ವಹಣೆ ಮಾಡಿದರು.

# ರಾಜ್ಯದ ಹಿತರಕ್ಷಣೆ ಯಾರ ಹೊಣೆ?

ನವೆಂಬರ್ ಬಂದರೆ ರಾಜ್ಯದ ರಾಜಧಾನಿಯಿಂದ ಹಿಡಿದು ಹಳ್ಳಿಯವರೆಗೆ ಸಡಗರದ ರಾಜ್ಯೋತ್ಸವದ ಸಂಭ್ರಮ, ರಾಜಕಾರಣಿಗಳು, ಸರಕಾರಿ ಅಧಿಕಾರಿಗಳು, ಸಂಸ್ಕೃತಿಯನ್ನು ಗುತ್ತಿಗೆ ಪಡೆದವರು ಎಲ್ಲರೂ ಕನ್ನಡ ನಾಡಿನ ಸೇವೆ ಮಾಡಲು ಅಥವಾ ಮಾಡುವಂತೆ ತೋರಿಸಿಕೊಳ್ಳುವುದರಲ್ಲಿ ನಿರತರಾಗಿರುತ್ತಾರೆ. ಸರಕಾರವು ನಾಡಿನ ಸೇವೆ ಮಾಡಿದ ಗಣ್ಯರನ್ನು ಸನ್ಮಾನಿಸುವುದು, ಸನ್ಮಾನ ಸಿಗದವರು ಅದಕ್ಕಾಗಿ ಪೈಪೋಟಿ ಮಾಡುವುದು ಎಲ್ಲ ಸಹಜವೆಂಬಂತೆ ನಡೆಯುತ್ತಿರುತ್ತದೆ. ಆದರೆ ಕನ್ನಡ ನಾಡಿನ ನೆಲ, ಜಲ ಹಾಗೂ ನಮ್ಮ ಸಂಸ್ಕೃತಿಯ ರಕ್ಷಣೆ ನಿಜವಾಗಿಯೂ ಸಾಧ್ಯವಾಗಿದೆಯೇ? ಕಳೆದ ಐವತ್ತಾರು ವರ್ಷಗಳಿಂದ ನಾಡಿನ ಜನರ, ಈ ನೆಲದ ಹಿತವನ್ನು ಕಾಪಾಡುವಲ್ಲಿ ನಮ್ಮ ಸರಕಾರಗಳು ಎಷ್ಟರ ಮಟ್ಟಿಗೆ ಸಫಲರಾಗಿದ್ದಾರೆ?

ನೆಲ, ಅರಣ್ಯ ಸಂಪತ್ತಿನ ರಕ್ಷಣೆ : ಕರ್ನಾಟಕವು ವಿವಿಧ ರೀತಿಯ ಭೂ ಪ್ರದೇಶ ಹೊಂದಿದ್ದು ಅಲ್ಲಿ ಹವಾಗುಣ ಹಾಗೂ ಮಣ್ಣಿನ ಫಲವತ್ತತೆಯಿಂದ ತನ್ನದೇ ವಿಶಿಷ್ಟತೆ ಪಡೆದಿದೆ. ಬಯಲು ಸೀಮೆಯಲ್ಲಿ ಕಪ್ಪು ಎರೆಮಣ್ಣು ಅದರಲ್ಲಿ ಬೆಳೆಯುವ ಜೋಳ, ರಾಗಿ, ಎಣ್ಣೆ ಕಾಳುಗಳು ನೀರಾವರಿ ಪ್ರದೇಶದಲ್ಲಿ ಬೆಳೆಯುವ ಭತ್ತ, ಮಲೆನಾಡಿನಲ್ಲಿ ಬೆಳೆಯುವ ಕಾಫಿ, ಅಡಿಕೆ, ಏಲಕ್ಕಿ ಮತ್ತು ವಿವಿಧ ತೋಟಗಾರಿಕೆ ಬೆಳೆಗಳು ನಮ್ಮ ರಾಜ್ಯದ ಸಮೃದ್ಧ ಭೂ ಸಂಪತ್ತಿನ ದ್ಯೋತಕ. ಆದರೆ ಕಳೆದ 4 ದಶಕಗಳಿಂದ ರಾಜ್ಯ ಸರಕಾರದ ಕೃಷಿ ನೀತಿಯಿಂದ ಸಂಪದ್ಭರಿತವಾಗಿ ಬೆಳೆಯಬೇಕಾಗಿದ್ದ ಜೋಳ ಅದರಲ್ಲೂ ವಿಜಾಪುರದ ಬಿಳಿಜೋಳ ಹೊಲಗಳಿಂದ ಮಾಯವಾಗಿದೆ. ತೃಣ ಧಾನ್ಯಗಳು, ಬೇಳೆಕಾಳು ಮಾಯವಾಗಿದ್ದು ಅದರ ಸ್ಥಾನವನ್ನು ಮೆಕ್ಕೆ ಜೋಳ ಅತಿಕ್ರಮಿಸಿದೆ. ರಾಸಾಯನಿಕಗಳ ಅತ್ಯಧಿಕ ಬಳಕೆಯಿಂದ ದ್ರಾಕ್ಷಿ ಹಾಗೂ ದಾಳಿಂಬೆ ನೆಲ ಕಚ್ಚಿವೆ. ರೈತನ ಸಾಮಾನ್ಯ ಜ್ಞಾನ ಕಡೆಗಣಿಸಿ ಆಧುನಿಕ ಕೃಷಿ ಮಾಡಲು ಸರಕಾರ ಪ್ರೋತ್ಸಾಹ ನೀಡಿ ಅವರನ್ನು ಸಾಲದ ಕೂಪಕ್ಕೆ ತಳ್ಳುವುದರ ಜತೆಗೆ ಅವರ ಆಹಾರ ಸುರಕ್ಷತೆ ಕಡೆಗಣಿಸಿ ಕಾರ್ಪೋರೇಟ್ ಕಂಪನಿಗಳ ನೆರವಿಗೆ ಸಿದ್ಧವಾಗಿ ನಿಂತ ಸರಕಾರ, ರೈತರ ಹಿತ, ನೆಲದ ಫಲವತ್ತತೆಯನ್ನು ಕಡೆಗಣಿಸಿದೆ.

ಕೃಷಿಗೆ ಗೊಬ್ಬರ ಹಾಗೂ ರಾಸಾಯನಿಕಗಳು ಅನಿವಾರ್ಯ ಎಂಬ ವಾತಾವರಣ ಸೃಷ್ಟಿಯಾಗಿದೆ. ಸದ್ಯ ನಡೆಯುತ್ತಿರುವ 'ಸಾವಯವ' ಮಿಷನ್ ಪ್ರಯತ್ನಗಳು ಅಲ್ಪ ಮಟ್ಟಿಗೆ ಈ ಸಮಸ್ಯೆಗೆ ಪರಿಹಾರ ಒದಗಿಸಬಹುದು. ಆಡಳಿತದ ಚುಕ್ಕಾಣಿ ಹಿಡಿದಿರುವ ಎಲ್ಲಾ ರಾಜಕೀಯ ಪಕ್ಷಗಳು ರೈತರ ಹಿತ ರಕ್ಷಿಸುವಲ್ಲಿ ವಿಫಲವಾಗಿದ್ದು ರೈತರು ಆತ್ಮಹತ್ಯೆಗಳು ಕೃಷಿ ನೀತಿಯ ವಿಫಲತೆಯ ಸಂಕೇತ. ಆದರೆ ಕೋಟ್ಯಂತರ ರೂಪಾಯಿ ಸಹಾಯ ಧನ ನೀಡುವ ರಾಜ್ಯ ಸರಕಾರವೇ, ನಮ್ಮ ಭೂಮಿಗೆ ವಿಷ ಉಣ್ಣಿಸುತ್ತಿರುವಾಗ ಅವರಿಂದ ನಾವು ವಿಷಮುಕ್ತ ಕೃಷಿ ನೀತಿ ನಿರೀಕ್ಷಿಸುವದು ಸಾಧ್ಯವಿಲ್ಲ. ರಾಜ್ಯವನ್ನು ಆಳುತ್ತ ಬಂದಿರುವ ಮಣ್ಣಿನ ಮಕ್ಕಳು, ರೈತ ಕುಟುಂಬದಿಂದ ಬಂದಿರುವ ಮಂತ್ರಿಗಳೇ ಈ ವಿಷ ಉಣ್ಣಿಸುವ ಕೆಲಸ ಮಾಡುತ್ತಿದ್ದಾರೆ. ಈ ಹಿಂದೆ ರೈತ ಸಮುದಾಯವನ್ನು ಸಫಲವಾಗಿ ಸಂಘಟಿಸಿದ್ದ ರೈತ ಸಂಘವು ಒಡೆದು ಹೋಳಾಗಿ ತನ್ನ ಶಕ್ತಿ ಕಳೆದುಕೊಂಡಿರುವುದು ದೊಡ್ಡ ದುರಂತ.

ಮಲೆನಾಡ ಹಸಿರು ? : ರಾಜ್ಯದ ಪಶ್ಚಿಮ ಘಟ್ಟ ಪ್ರದೇಶದಲ್ಲಿರುವ 'ಮಲೆನಾಡು' ನಮ್ಮ ರಾಜ್ಯದಲ್ಲಿ ಹರಿಯುವ ಎಲ್ಲಾ ನದಿಗಳ ಉಗಮಸ್ಥಾನ. ಮಲೆನಾಡಿನಲ್ಲಿ ಕಾಡು ಮಾಯವಾದಾಗ ರಾಜ್ಯದ ನೆಲ, ಜಲ ಹಾಗೂ ನೀರಿನ ಮೂಲಕ್ಕೆ ಪೆಟ್ಟು ಖಚಿತ. ಇದರಿಂದಾಗಿಯೇ 'ಮಲೆನಾಡ ಹಸಿರು, ಬಯಲು ಸೀಮೆಯ ಉಸಿರು' ಎಂಬ ನಂಬಿಕೆ ಮೂಡಿಬಂತು. ಆದರೆ ಇಂದು ನಶಿಸುತ್ತಿರುವ ಮಲೆನಾಡಿನ ಜೀವಜಾಲದ ರಕ್ಷಣೆಗೆ ವಿಶ್ವ ಸಂಸ್ಥೆ ಮುಂದಾದರೆ ನಮ್ಮ ರಾಜಕಾರಣಿಗಳದ್ದು ಇದಕ್ಕೆ ವಿರೋಧ! ರಾಜ್ಯ ಸರಕಾರವು 1989ರಲ್ಲಿ ಮಲೆನಾಡಿನ ಹಸಿರು ಕಾನನದಲ್ಲಿ ಹಸಿ ಮರಗಳನ್ನು ಕಡಿಯುವುದನ್ನು ನಿಷೇಧಿಸಿದ್ದು, ಕಳೆದ 22 ವರ್ಷದಿಂದ ಇದು ಮುಂದುವರಿದುಕೊಂಡು ಬಂದಿದೆ. ಈ ಸಕಾರಾತ್ಮಕ ಕ್ರಮದಿಂದ ರಾಜ್ಯದ ಹಸಿರಿನ ರಕ್ಷಣೆ ಸಾಧ್ಯವಾಗಬೇಕಿತ್ತು. ಆದರೆ ಹಸಿರಿನ ನಾಶ ತೀವ್ರಗತಿಯಿಂದ ಮುನ್ನಡೆದಿದೆ. ರಾಜ್ಯದ ಉಚ್ಚನ್ಯಾಯಾಲಯವು ತನ್ನ ಒಂದು ನಿರ್ಣಯದಲ್ಲಿ 'ರಾಜ್ಯ ಸರಕಾರವೇ ಕಾಡಿನ ಶತ್ರು'! ಎಂದು ಹೇಳಿದ್ದನ್ನು ನೆನಪಿಸಿಕೊಳ್ಳಬಹುದು.

ಇದ್ದ ಅಳಿದುಳಿದ ಅರಣ್ಯ ಸಂಪತ್ತಿನ ರಕ್ಷಣೆ ಮಾಡದೆ ಸರಕಾರ ವಿದೇಶಿ ನೆರವಿನ ಕೋಟ್ಯಂತರ ಹಣ ಪಡೆದರೂ ಸಹ ಹೊಸ ಅರಣ್ಯ ಸೃಷ್ಟಿಸಲು ಸಾಧ್ಯವಾಗದೆ ಇರುವುದು ನಮ್ಮ ಅರಣ್ಯ ನೀತಿಯ ವಿಫಲತೆಯ ಸಂಕೇತವಲ್ಲವೇ? ಅರಣ್ಯ ಭೂಮಿಯನ್ನೇ ಅತಿಕ್ರಮಿಸಿ ಅಕ್ರಮ ಗಣಿಗಾರಿಕೆಗೆ ಅನುವು ಮಾಡಿಕೊಟ್ಟಿದ್ದರಿಂದ ಬಳ್ಳಾರಿ, ಚಿತ್ರದುರ್ಗ ಹಾಗೂ ತುಮಕೂರಿನ ಪ್ರದೇಶಗಳಲ್ಲಿ ಜನರು ನಿರ್ಗತಿಕರಾಗಿ ಕೇವಲ ರಾಜಕಾರಣಿಗಳು, ಗೂಂಡಾಗಳು ಶ್ರೀಮಂತರಾಗಿ ರಾಜ್ಯದ ಆಡಳಿತ ಯಂತ್ರ ಹಾಗೂ ನಮ್ಮ ರಾಜಕೀಯ ಪಕ್ಷಗಳ ನೈತಿಕ ಆಧಾರವನ್ನೇ ನೆಲ ಕಚ್ಚಿಸಿತು. ಇದನ್ನು ಸರಿಪಡಿಸಲು ಹೊರಟ ತೀರ್ಪುಗಳನ್ನು ಆತ್ಮಸಾಕ್ಷಿ ಉಳ್ಳ ಅಧಿಕಾರಿಗಳ ವರದಿಗಳನ್ನು ಅಲಕ್ಷಿಸಿರುವ ರಾಜ್ಯ ಸರಕಾರ ಇಂದು ತನ್ನ ಮೂಲ ಉದ್ದೇಶವಾದ 'ಜನ ಹಿತ' ಮರೆತು, ಸ್ವಹಿತಕ್ಕಾಗಿ ರಾಜ್ಯದ ಸಂಪತ್ತನ್ನು ಕಬಳಿಸುತ್ತಿದೆ.

ಜಲ : ಜಲ ಸಂಪನ್ಮೂಲ ರಕ್ಷಣೆಗಾಗಿಯೇ ಇಲಾಖೆ ಇದೆ, ಮಂತ್ರಿ ಇದ್ದಾರೆ, ಕೋಟ್ಯಂತರ ರೂಪಾಯಿ ಖರ್ಚಾದರೂ ಸಹ ಜಲ ಸಂಪತ್ತನ್ನು ಉಳಿಸಿ, ವೃದ್ಧಿಸಲು ಯಾಕೆ ಸಾಧ್ಯವಾಗಿಲ್ಲ? ಸಾಮಾನ್ಯ ಜನರಿಗೆ ಸ್ವಚ್ಛ ಕುಡಿಯುವ ನೀರು, ಕೃಷಿಗೆ ಬೇಕಾಗಿರುವ ನೀರಾವರಿ ಅಗತ್ಯ ಪೂರೈಸಲು ಸಾಧ್ಯವಾಗಿಲ್ಲ. ಯಾಕೆಂದರೆ ನಾವು ಒಂದು ನದಿಯನ್ನು ಅದರ ಸಮಗ್ರತೆಯ ದೃಷ್ಟಿಯಿಂದ ನೋಡಿಯೇ ಇಲ್ಲ. ಕಾವೇರಿ ಗದ್ದಲದಲ್ಲಿ ಅದರ ಹುಟ್ಟೂರಾದ ಕೊಡಗಿನಲ್ಲಿ ಆಗಿರುವ ಅರಣ್ಯ ನಾಶದ ಬಗ್ಗೆ ನಮ್ಮ ಗಮನ ಹರಿದಿಲ್ಲ. ಪಶ್ಚಿಮ ಘಟ್ಟದ ಹಸಿರು ಪರ್ವತಗಳನ್ನು ಬೋಳಾಗಿಸಿ ಚಿಕ್ಕ ಜಲ ವಿದ್ಯುತ್ ಯೋಜನೆ ಮಾಡಿದಾಗ ನದಿ ಮೂಲದ ಸೆಲೆಗಳೇ ಸಂಪೂರ್ಣ ನಾಶವಾಗುತ್ತವೆ. ರಾಜಕಾರಣಿಗಳು ಇಂಥ ವಿನಾಶಕಾರಿ ಯೋಜನೆಗಳಿಗೆ ಬೆಂಬಲ ನೀಡಿ ತನ್ನ ಜಲ ವಿರೋಧಿ ನೀತಿಯನ್ನು ಜಾರಿಗೆ ತಂದು ನಮ್ಮ ಇಂದಿನ ಹಾಗೂ ಮುಂದಿನ ಜನಾಂಗದ ಜಲ ಸುರಕ್ಷತೆಯನ್ನೆ ಹಾಳುಗೆಡಹಿದ್ದಾರೆ. ರಾಜ್ಯದಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಮರಳು ಗಣಿಗಾರಿಕೆ ನಮ್ಮ ಜಲಸಂಪತ್ತಿನ ಮೇಲೆ ದುಷ್ಪರಿಣಾಮ ಬೀರುತ್ತಿದೆ. ನದಿ ಪಾತ್ರಗಳಿಂದ ಮರಳನ್ನು ಅಧಿಕ ಪ್ರಮಾಣದಲ್ಲಿ ತೆಗೆದಾಗ ಅಂತರಜಲ ಬತ್ತಿ ಭೂಮಿ ಬರಡಾಗುತ್ತಿದೆ.

ಮಾನವ ಸಂಪನ್ಮೂಲಗಳನ್ನು ಪೋಷಿಸಿಕೊಂಡು ಬರುವಲ್ಲಿ ಶಿಕ್ಷಣದ ಪಾತ್ರ ಬಹಳ ಪ್ರಮುಖವಾದದ್ದು. ರಾಜ್ಯದ ಶಿಕ್ಷಣ ಪದ್ಧತಿ ಹಿಂದೊಮ್ಮೆ ರಾಷ್ಟ್ರದಲ್ಲೆ ಉತ್ತಮವಾಗಿತ್ತು. ಇಂದು ನಾಯಿಕೊಡೆಗಳಂತೆ ತಲೆ ಎತ್ತಿರುವ ಶಿಕ್ಷಣ ಸಂಸ್ಥೆಗಳು ಹಣ ಗಳಿಕೆಯ ಘಟಕಗಳಾಗಿವೆ. ಶಿಕ್ಷಣದ ಗುಣಮಟ್ಟ ಕುಂದಿರುವದು ಮಾನವ ಸಂಪನ್ಮೂಲದ ದುರ್ಬಳಕೆಗೆ ಎಡೆ ಮಾಡಿಕೊಟ್ಟಿದೆ. ಇದು ನಮ್ಮ ಯುವ ಜನಾಂಗಕ್ಕೆ ಸರಕಾರ ನೀಡಿದ ಉಡುಗೊರೆ!

ವಿವಿಧ ಜನಾಂಗ ಹಾಗೂ ಕನ್ನಡ ಭಾಷೆಯಲ್ಲಿನ ವೈವಿಧ್ಯತೆಗೆ ಹೆಸರಾಗಿರುವ ಕರ್ನಾಟಕದಲ್ಲಿಂದು ಐಟಿ, ಬೀಟಿಯ ವೈಭವೀಕರಣದಿಂದಾಗಿ ಹಳ್ಳಿಯಿಂದ ಪಟ್ಟಣದವರೆಗೆ ಎಲ್ಲರೂ ತಮ್ಮ ನಡೆನುಡಿಗಳನ್ನು ಮರೆತು ಪರಕೀಯ ಭಾವನೆ ಹೊತ್ತು 'ಇಂಗ್ಲಿಷ್' ವ್ಯಾಮೋಹಕ್ಕೆ ಬಲಿಯಾಗಿದ್ದಾರೆ.

ಐಟಿ, ಬೀಟಿ ಕಂಪನಿಗಳಿಗೆ ಸುಲಭದರಲ್ಲಿ ಹಲವಾರು ರಿಯಾಯಿತಿಗಳನ್ನು ಪಡೆದು ಶೀಘ್ರದಲ್ಲಿ ಬೆಳವಣಿಗೆ ಹೊಂದಲು ಸರಕಾರದ ನೀತಿಗಳೇ ಕಾರಣ. ಆದರೆ ಇಂದು ನಾಡಿನ ಭಾಷೆ, ಸಂಸ್ಕೃತಿ, ವಿವಿಧ ಜಾನಪದ ಕಲೆಗಳ ರಕ್ಷಣೆಗೆ ಸರಕಾರ ಯಾವ ಪ್ರೋತ್ಸಾಹವನ್ನೂ ನೀಡುತ್ತಿಲ್ಲ. ಕೇವಲ ಸಾಂಕೇತಿಕವಾಗಿ ನಮ್ಮ ಸಂಸ್ಕೃತಿ ಇಲಾಖೆ ಕಾರ್ಯಕ್ರಮ ನಡೆಸುತ್ತಿದೆಯೇ ಹೊರತು ನಮ್ಮ ನಾಡಿನ ನಿಜವಾದ ಸಾಂಸ್ಕೃತಿಕ ಬದುಕನ್ನು ಗಟ್ಟಿಗೊಳಿಸುವತ್ತ ಗಮನ ಹರಿಸಿಲ್ಲ.

ರಾಜ್ಯೋತ್ಸವದ ಈ ಸಂದರ್ಭದಲ್ಲಿ ನಮ್ಮ ರಾಜ್ಯದ ನೆಲ, ಜಲ ಹಾಗೂ ಸಂಸ್ಕೃತಿಯನ್ನು ರಕ್ಷಿಸುವತ್ತ ದೃಢವಾದ ನಿಲುವನ್ನು ತಾಳಬೇಕಾಗಿದೆ. ಕೇವಲ ಸಾಂಕೇತಿಕ ರಾಜ್ಯೋತ್ಸವಗಳ ಆಚರಣೆಯಲ್ಲದೆ, ನಿಜವಾಗಿ ನಮ್ಮ ನಾಡಿನ ಜನರ, ಸಂಪತ್ತಿನ ರಕ್ಷಣೆಗೆ ಹೆಚ್ಚಿನ ಗಮನ ನೀಡಬೇಕೆಂಬ ಜನರ ಹಂಬಲವನ್ನು ಕಾರ್ಯರೂಪಕ್ಕೆ ನಮ್ಮ ರಾಜಕಾರಣಿಗಳು ತರುವರೆಂದು ಆಶಿಸೋಣವೆ?

**ಪಾಂಡುರಂಗ ಹೆಗಡೆ**

ಪರಿಸರ ತಜ್ಞರು, ಅಪ್ಪಿಕೋ ಚಳುವಳಿ, ಕೃಪೆ : ವಿಜಯ ಕರ್ನಾಟಕ

# ಯಶಸ್ವಿಯಾಗಿ ಜರುಗಿದ ಏಕಾಂಕ ನಾಟಕ ಸ್ಪರ್ಧೆ



ದೆಹಲಿ ಕರ್ನಾಟಕ ಸಂಘದ ಅತ್ಯಂತ ಜನಪ್ರಿಯ ಕಾರ್ಯಕ್ರಮಗಳಲ್ಲಿ ಒಂದಾದ ಏಕಾಂಕ ನಾಟಕ ಸ್ಪರ್ಧೆ ಅಕ್ಟೋಬರ್ 12,13 ಮತ್ತು 14ರಂದು ಯಶಸ್ವಿಯಾಗಿ ಜರುಗಿತು. ಇತ್ತೀಚೆಗೆ ನಿಧನರಾದ ಕನ್ನಡ ಭಾರತಿಯ ಸಕ್ರಿಯ ಕಲಾವಿದೆ ಜ್ಯೋತ್ಸ್ನಾ ರಾವ್ ಅವರಿಗೆ ಈ ಬಾರಿಯ ಸ್ಪರ್ಧೆಯನ್ನು ಅರ್ಪಿಸಲಾಯಿತು. ದೆಹಲಿಯ ಹಿರಿಯ ರಂಗ ಕಲಾವಿದ, ನಾಟಕಕಾರ ಎಚ್.ಎಸ್. ಕುಲಕರ್ಣಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಳೆದ 2 ದಶಕಗಳಿಂದ ಜನಮನ್ನಣೆ ಗಳಿಸಿರುವ ನಾಟಕ ಸ್ಪರ್ಧೆ ದೆಹಲಿ ಕನ್ನಡಿಗರ ಒಳಗಿರುವ ಪ್ರತಿಭೆಯನ್ನು ಹೊರತರುವಲ್ಲಿ ಯಶಸ್ವಿಯಾಗಿದೆ, ಇದಕ್ಕೆ ಸೂಕ್ತ ವೇದಿಕೆ ಹಾಗೂ ಪ್ರೋತ್ಸಾಹ ನೀಡುತ್ತಿರುವ ದೆಹಲಿ ಕರ್ನಾಟಕ ಸಂಘ ನಿರಂತರವಾಗಿ ಇದನ್ನು ಮುಂದುವರಿಸಿಕೊಂಡು ಹೋಗಲಿ ಎಂದು ಆಶಿಸಿದ ಅವರು ನಾಟಕದಲ್ಲಿ ಭಾಗವಹಿಸಿದ ಎಲ್ಲ ಕಲಾವಿದರಿಗೆ ಶುಭ ಕೋರಿದರು. ಒಟ್ಟು 5 ನಾಟಕ ತಂಡಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದು ಇದರ ತೀರ್ಪುಗಾರರಾಗಿ ಎಂ.ವಿ. ಶ್ರೀನಾಥ್, ಅಶ್ವಥ್ ನಾರಾಯಣ ಶೆಟ್ಟರು ಹಾಗೂ ಸಖಾರಾಮ ಉಪ್ಪೂರು ಅವರು ಪಾಲ್ಗೊಂಡಿದ್ದರು.

### ನಾಟಕ : ಅತ್ತೆಗೆ–ಲತ್ತೆ
### ರಚನೆ : ಗೌರೀಶ್ ಕಾಯ್ಕಿಣಿ, ನಿರ್ದೇಶನ : ಎಸ್.ಸಿ. ಹೇಮಲತ
### ತಂಡ : ದೆಹಲಿ ಪೋಲಿಸ್ ಕನ್ನಡ ಕಲ್ಯಾಣ ಸಮಿತಿ

**ಪಾತ್ರ ಪರಿಚಯ :** ಕಾವೇರಮ್ಮ : ಮಂಜುಳಾನಾಗರಾಜು, ನಿರ್ಮಲೆ : ಶೋಭಾನಾಗರಾಜ, ಪಾರ್ವತಮ್ಮ : ಎಸ್.ಸಿ. ಹೇಮಲತ, ವೇಣು : ಗಿರಿಜಾ ಶ್ರೀನಿವಾಸ, ಬೇಬಿ : ಆಶಾಮಹದೇವ್, ತಿರುಕ / ಪೋಸ್ಟ್‌ಮ್ಯಾನ್ : ಗಿರೀಶ್, ತಾರಾಬಾಯಿ : ಲೀಲಾದೇವರಾಜ
ರಂಗಸಜ್ಜಿಕೆ : ಗಿರೀಶ್, ಪ್ರಸಾದನ : ಎಸ್.ಸಿ. ಹೇಮಲತ, ಬೆಳಕು : ಶಿವರಾಮ ಎಚ್.ಜಿ., ಸಂಗೀತ : ಟಿ.ಎಸ್. ರಮೇಶ್
ವಸ್ತ್ರಾಲಂಕಾರ : ಮಂಜುಳಾ ನಾಗರಾಜ.

**ನಾಟಕದ ಕುರಿತು :** ದಿನನಿತ್ಯದ ಬದುಕಿನಲ್ಲಿ ನಡೆಯುವ ಅತ್ತೆ ಸೊಸೆಯರ ಸಂಬಂಧ ಕುರಿತ ನವಿರಾದ ಹಾಸ್ಯಭರಿತ ನಾಟಕ. ಅತ್ತೆಯ ದರ್ಪ, ದಬ್ಬಾಳಿಕೆ, ಸ್ವಾರ್ಥ ಒಂದೆಡೆಯಾದರೆ ಧ್ವನಿ ಇಲ್ಲದ ಮೂಕಿ ಸೊಸೆ ಮತ್ತೊಂದೆಡೆ. ಸೊಸೆಯಾದವಳು ತಮ್ಮ ಸೇವೆಗಾಗಿಯೇ ಮೀಸಲಾದವಳು ಎಂದು ಭಾವಿಸುವ ಸ್ವಾರ್ಥಿ ಅತ್ತೆಯಂದಿರು ಮಗಳು ಮಾತ್ರ ಅವಳ ಅತ್ತೆ ಮಾವಂದಿರ ಸೇವೆ ಮಾಡದೇ ಸ್ವತಂತ್ರವಾಗಿರಬೇಕೆಂದು ಬಯಸಿ ಕುತಂತ್ರ ಮಾಡುತ್ತಲೇ ಇರುವ ಅತ್ತೆ. ಆದರೆ ಬೀಗತಿಯು ಅತ್ತೆಗೆ ಅವಳ ತಂತ್ರವನ್ನೇ ತಿರುಗು ಬಾಣವಾಗಿ ಪ್ರಯೋಗಿಸಿ ಪಾಠ ಕಲಿಸುವಳೋ? ಸೊಸೆ ಹಾಗೂ ಮಗಳ ನಡುವೆ ಬೇಧವೆಣಿಸದೆ ಸೊಸೆಯೂ ಮಗಳಂತೆ ಎಂದು ಭಾವಿಸುವಳೇ ಅತ್ತೆ?









## ನಾಟಕ : ಮದುವೆ... ಅಯ್ಯೋ... ಮೂಕಿಯ ಮದುವೆ
## ರಚನೆ ಮತ್ತು ನಿರ್ದೇಶನ : ಶ್ರೀಮತಿ ಸವಿತಾ ಇನಾಮದಾರ್
## ತಂಡ : ಜನಕಪುರಿ ಮಹಿಳಾ ಮಂಡಳಿ






**ಪಾತ್ರ ಪರಿಚಯ :** ಶ್ರೀ ರಘುಪತಿ ರಾವ್ : ಮೋಹಿನಿ ರೈ, ಸೀತಮ್ಮ : ಸವಿತಾ ಭಂಡಾರ್‌ಕರ್, ರಾಜೇಶ್ : ಪವಿತ್ರಾತಮಣ್‌ಕರ್, ವಿನಾಯಕ : ವೀಣಾ ಜಗದೀಶ್, ಅಕ್ಕ : ಮೀರಾ ನಾಡಿಗ್, ವೆಂಕಟೇಶಯ್ಯಾ : ರಾಜೇಶ್ವರಿ ಪ್ರಕಾಶ್, ಪದ್ದಮ್ಮಾ : ಜಯಶ್ರೀ ಬಸವರಾಜ್, ಸುಮ : ನಯನಾ ಮಾಣಕಾಪುರೆ, ವಿಮಲ : ಪ್ರೇರಣಾ ವೆಂಕಟೇಶ್, ಶ್ಯಾಮಲ : ಡಾ. ಸಾಯಿಪ್ರಶಾಂತಿ ಶೆಟ್ಟಿ, ಗೀತಾ : ಅನಿತಾಪ್ರಸಾದ್, ವಿಠ್ಠಲ ಶಾಸ್ತ್ರಿಗಳು : ಸವಿತಾ ಇನಾಮದಾರ್, ರುಕ್ಮಿಣಿಬಾಯಿ : ಕಲ್ಪನಾ ದೇಶಪಾಂಡೆ, ವೈಷ್ಣವಿ : ಕು. ವೈಷ್ಣವಿ ಬಸವರಾಜ್, ಶಾಂಭವಿ : ಕು. ಭಕ್ತಿ ಮಾಣಕಾಪುರೆ, ಶಂಕರಿ : ಕು. ನಿಸರ್ಗ ಅಶೋಕ್, ಭಾರ್ಗವಿ : ಕು. ನಿತ್ಯಶ್ರೀ ಅಶೋಕ್, ಈಶ್ವರಿ : ಕು. ವಾಸುಕಿ. ದೇಶಪಾಂಡೆ.

**ರಂಗಸಜ್ಜಿಕೆ :** ಶ್ರೀಮತಿ ಅಶ್ವಿನಿ ಹನಮಸಾಗರ್ ಮತ್ತು ಶ್ರೀಮತಿ ಲಾವಣ್ಯ ಬಸವರಾಜ್, ವಸ್ತ್ರಾಲಂಕಾರ : ಡಾ. ರೂಪಶ್ರೀ ಅಶೋಕ್ ಮತ್ತು ಕು. ವಂದನಾ ರೈ, ನೆರಳು / ಬೆಳಕು : ಶುಚಿರ್ ಇನಾಮದಾರ್, ಹಿನ್ನೆಲೆ ಸಂಗೀತ : ಕು. ಸುರಭಿ ಇನಾಮದಾರ್.

**ನಾಟಕದ ಕುರಿತು...**

'ವರದಕ್ಷಿಣೆ' ಎಂಬುದು ಸಾಮಾಜಿಕ ಪಿಡುಗು, ಅಲ್ಲದೆ ಇದೊಂದು ಅನಿಷ್ಟ ಪದ್ಧತಿಯು ಹೌದು, ಸಮಾಜದ ಆರೋಗ್ಯವನ್ನು ಕೆಡಿಸುವಂತಹ ಮಹಾಮಾರಿ. ಕೆಲವರಿಗೇನೋ ಇದು ವರದಾನವಾಗಿರಬಹುದು. ಆದರೆ ಹೆಣ್ಣು ಜನ್ಮಕ್ಕೂ , ಹೆಣ್ಣ ಹೆತ್ತವರಿಗೂ ಇದು ಶಾಪವೇ ಸರಿ. ಅಂತೂ ಮದುವೆ ಎಂಬುದು ಇಂದು ಆಡಂಬರದ ಆಪ್ತಬಂಧುವಾಗಿದೆ. ಮದುವೆಯಾಗದೇ ಉಳಿದ ಹೆಣ್ಣುಮಗಳು ಕೆಲವರ ಹೊಲಸು ನಾಲಿಗೆಗೆ ಬಲಿಯಾಗಬೇಕಾಗುತ್ತದೆ. ಆರೋಪ ಆಪಾದನೆಗಳ ಸುಳಿಯಲ್ಲಿ ಸಿಲುಕುವ ಸಂದರ್ಭಗಳೂ ಇರುತ್ತವೆ. ಈ ಮುಜುಗರಗಳನ್ನೆಲ್ಲಾ ಹೆಣ್ಣು ಹೆತ್ತವರೂ ಅನುಭವಿಸಬೇಕಾಗುತ್ತದೆ. ಈ ಕಾರಣದಿಂದಲೇ ಇಂದು 'ಹೆಣ್ಣು ಪಿಂಡ' ಎಂದ ತಕ್ಷಣ ಅದನ್ನು ಮೊಳಕೆಯಲ್ಲೇ ಚಿವುಟುವ 'ಭ್ರೂಣ ಹತ್ಯೆ'ಯು ನಿರಂತರವಾಗಿ ನಡೆಯತ್ತಲೇ ಇದೆ. ಹೆಣ್ಣು ಮನಸ್ಸು ಮಾಡಿದರೆ ಸಾಧಿಸಲಾಗದ್ದು ಯಾವುದೂ ಇಲ್ಲ "ಒಲಿದರೆ ನಾರಿ, ಮುನಿದರೆ ಮಾರಿ" ಎಂಬಂತೆ ಹೆಣ್ಣು ತನ್ನ ನಿಜ ಸ್ವರೂಪವನ್ನು ತೋರಿಸಬೇಕಾಗಿದೆ. ವರದಕ್ಷಿಣೆಕೊಟ್ಟು ನಾನು ಮದುವೆಯಾಗುವುದಿಲ್ಲ ಎಂಬ ಧೈರ್ಯದ ಕೂಗು ಹೆಣ್ಣಿನ ಕಂಠದಿಂದ ಹೊರಬರಬೇಕಾಗಿದೆ....

## ನಾಟಕ : ಕನಸು
## ರಚನೆ : ಶ್ರೀ ನಾಗರಾಜ್ ಕೋಟೆ, ಪರಿಕಲ್ಪನೆ ಮತ್ತು ನಿರ್ದೇಶನ : ಟಿ.ಎಂ. ಮೈಲಾರಪ್ಪ
## ತಂಡ : ಶ್ರೀ ಗಣೇಶ ಮಿತ್ರ ಮಂಡಳಿ

**ಪಾತ್ರ ಪರಿಚಯ :** ಸೂತ್ರದಾರ : ಪ್ರಭಾಕರ ಎಂ., ನಾಟಕಕಾರ : ಟಿ.ಎಂ. ಮೈಲಾರಪ್ಪ, ಭಿಕ್ಷುಕ : ಟಿ.ಎಸ್. ರಮೇಶ್, ವಿದೂಷಕ–1 / ನಟ–1 : ಪ್ರತೀಕ್ ಹೆಗ್ಡೆ, ವಿದೂಷಕ–2 : ನಾರಾಯಣ ಬಿ., ನಟ–2 : ನಾರಾಯಣ ಬಿ., ರಾಜಕೀಯ ವ್ಯಕ್ತಿ : ಆರ್. ಎಸ್. ಶ್ಯಾಮಸುಂದರ್, ನಟ–3 : ಎಸ್. ಕುಮಾರ್, ನಟ–4 : ಶಶಿಕಾಂತ್ ಪಾಟೀಲ್, ವಕೀಲ : ರಾಮ್‌ಪ್ರಸಾದ್.

| | | |
|---|---|---|
| ಬೆಳಕು | : | ಶಿವಾನಂದ ಇಂಗಳೇಶ್ವರ |
| ಸಂಗೀತ | : | ಸುಧೀರ್ ಫಡ್ನೀಸ್ / ಟಿ.ಎಸ್. ರಮೇಶ್ |
| ರಂಗ ವಿನ್ಯಾಸ | : | ಯು.ಎ. ಶರೀಫ್ / ಪ್ರತೀಕ್ ಹೆಗಡೆ |
| ಪ್ರಸಾದನ | : | ಶಶಿಕಾಂತ್ ಪಾಟೀಲ್ |
| ವಸ್ತ್ರಾಲಂಕಾರ | : | ಅಶೋಕ್ ಕುಮಾರ್ ವಿ. / ಎಸ್. ಕುಮಾರ್ |

**ನಾಟಕದ ಕುರಿತು :** ನಾಟಕಕಾರನು ಕಾಣುವ ಕನಸು ಪ್ರಾತ್ರಧಾರಿಗಳು ಆ ಸ್ಥಾನಕ್ಕೆ ಬಂದಾಗ ಬದಲಾಗುವ ಶೈಲಿ, ಶೋಷಣೆ ಮಾಡುವ ರೀತಿ ಎಲ್ಲವೂ ಈ ನಾಟಕದಲ್ಲಿದೆ. ಕಥೆಯ ಹಂದರ ನಗೆಯ ಸಂಭಾಷಣೆಗಳೊಡನೆ, ಹಾಸ್ಯ, ವಿಡಂಬನೆ, ವ್ಯಂಗ್ಯ ಈ ಎಲ್ಲಾ ರೀತಿಯ ಚಿಂತನೆಗಳೊಂದಿಗೆ ನಾಟಕಕಾರ ವಿದೂಷಕರು, ಭಿಕ್ಷುಕ, ರಾಜಕೀಯ ವ್ಯಕ್ತಿ ಮತ್ತು ವಕೀಲ ಪಾತ್ರಧಾರಿಗಳ ಮೂಲಕ ಈ ನಾಟಕದಲ್ಲಿ ಸಾಮಾಜಿಕ ನ್ಯಾಯ ಅನ್ಯಾಯಗಳ ವಿವೇಚನೆ ನಡೆಯುತ್ತದೆ. . . .









# ಏಕಾಂಕ ನಾಟಕ ಸ್ಪರ್ಧೆಯ



ಶ್ರೇಷ್ಠ ನಾಟಕ : ಪ್ರಥಮ–ಕನಸು–ಗಣೇಶ ಮಿತ್ರ ಮಂಡಳಿ



ಶ್ರೇಷ್ಠ ನಿರ್ದೇಶಕ : ಪ್ರಥಮ–ಟಿ.ಎಂ. ಮೈಲಾರಪ್ಪ



ಶ್ರೇಷ್ಠ ನಿರ್ದೇಶಕಿ : ದ್ವಿತೀ



ಶ್ರೇಷ್ಠ ನಟ : ಪ್ರಥಮ – ಆರ್.ಎಸ್. ಶ್ಯಾಮಸುಂದರ್



ಶ್ರೇಷ್ಠ ನಟ : ದ್ವಿತೀಯ–ಅಮರೇಶ್ ಎಸ್.ಎಚ್.



ಶ್ರೇಷ್ಠ ನಟಿ : ದ್ವಿತೀಯ– ಮಂ



ತೀರ್ಪುಗಾರರ ವಿಶೇಷ ಪ್ರಶಸ್ತಿ : ನಾರಾಯಣ ಬಿ.



ತೀರ್ಪುಗಾರರ ವಿಶೇಷ ಪ್ರಶಸ್ತಿ : ಉಷಾ ಭರತಾದ್ರಿ



ತೀರ್ಪುಗಾರರ ವಿಶೇ



ಅತ್ಯುತ್ತಮ ರಂಗವಿನ್ಯಾಸ : ಶ್ರೀಮತಿ ರಾಧಾ ಕೌಜಲಗಿ ಮತ್ತು ಆಶಾ ಶ್ಯಾಮಸುಂದರ್



ಅತ್ಯುತ್ತಮ ವೇಷಭೂಷಣ : ಕು. ವಂದನಾ ರೈ
ಮತ್ತು ಡಾ. ರೂಪಶ್ರೀ ಅಶೋಕ್



ಪೋಷಕ ನಟಿ : ಶ

# ು ಬಹುಮಾನ ವಿಜೇತರು



ಯ–ಎಸ್.ಸಿ. ಹೇಮಲತ



ಅತ್ಯುತ್ತಮ ಬೆಳಕು : ಶಿವಾನಂದ ಇಂಗಳೇಶ್ವರ



ಶ್ರೇಷ್ಠ ನಾಟಕ : ದ್ವಿತೀಯ–ಮದುವೆ. . .ಅಯ್ಯೋ. . . ಮೂಕಿಯ ಮದುವೆ–
ಜನಕಪುರಿ ಮಹಿಳಾ ಮಂಡಳಿ



ಜುಳಾ ನಾಗರಾಜು



ಅತ್ಯುತ್ತಮ ಸಂಗೀತ : ಉಲ್ಲಾಸ್ ನಾಯ್ಕ್ ಮತ್ತು ಸಂತೋಷ್ ಉಪಾಧ್ಯಾಯ



ಶ್ರೇಷ್ಠ ನಟಿ : ಪ್ರಥಮ –ಸವಿತಾ ಇನಾಂದಾರ್







ೇಷ ಪ್ರಶಸ್ತಿ : ಟಿ.ಎಸ್. ರಮೇಶ್ ತೀರ್ಪುಗಾರರ ವಿಶೇಷ ಪ್ರಶಸ್ತಿ : ಮೋಹಿನಿ ರೈ ತೀರ್ಪುಗಾರರ ವಿಶೇಷ ಪ್ರಶಸ್ತಿ : ಆಶಾ ಮಹಾದೇವ್



ೋಭಾ ನಾಗರಾಜ



ಪೋಷಕ ನಟ : ಪ್ರತೀಕ್ ಹೆಗ್ಡೆ



ಪ್ರೋತ್ಸಾಹಕರ ಬಹುಮಾನ (ಬಾಲಪ್ರತಿಭೆ) : ಕು. ವೈಷ್ಣವಿ ಬಸವರಾಜ್, ಕು. ಭಕ್ತಿ ಮಾಣಕಾಪುರೆ
ಕು. ನಿಸರ್ಗ ಅಶೋಕ್, ಕು. ನಿತ್ಯಶ್ರೀ ಅಶೋಕ್, ಕು. ವಾಸುಕಿ ದೇಶಪಾಂಡೆ

## ನಾಟಕ : ಮದುವೆ ಮಾರ್ಕೆಟ್
## ರಚನೆ : ಎಂ.ಎಸ್. ನರಸಿಂಹಮೂರ್ತಿ, ನಿರ್ದೇಶನ : ಟಿ.ಎಂ. ಮೈಲಾರಪ್ಪ
## ತಂಡ : ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್






**ಪಾತ್ರ ಪರಿಚಯ :**

ರಾಮರಾವ್ : ಆಶಾಶ್ಯಾಮಸುಂದರ್, ರಾಧಾಬಾಯಿ : ರಾಧಾ ಕೌಜಲಗಿ, ಮೋಹನ : ರೇಣುಕಾ ನಿಡಗುಂದಿ, ನರ್ಮದಾ : ಗೀತಾ ಬೋರ್ಜಿ, ಗಂಗಿ : ಉಷಾ ಭರತಾದ್ರಿ

| | | |
|---|---|---|
| ರಂಗಸಜ್ಜಿಕೆ | : | ರಾಧಾ ಕೌಜಲಗಿ / ಆಶಾಶ್ಯಾಮ ಸುಂದರ್ |
| ವಸ್ತ್ರಾಲಂಕಾರ | : | ಸುಕನ್ಯಾ ಶ್ಯಾಮಸುಂದರ್ / ವಿಲಾಸಿನಿ ಶೆಟ್ಟಿ |
| ಬೆಳಕು | : | ಸುಗುಣಾನಾಗೇಶ್ |
| ಸಂಗೀತ | : | ಆಶಾಶ್ಯಾಮಸುಂದರ್ |
| ಪ್ರಸಾಧನ | : | ಶಶಿಕಾಂತ್ ಪಾಟೀಲ್ |

**ನಾಟಕದ ಕುರಿತು** : ಸರಳ ಮತ್ತು ಪ್ರೇಮ ವಿವಾಹಗಳನ್ನು ಉತ್ತೇಜಿಸುವ ನಾಟಕವಿದು. ಮೋಹನ ಮತ್ತು ನರ್ಮದಾ ಪರಸ್ಪರ ಪ್ರೀತಿ ಮಾಡುತ್ತಿರುತ್ತಾರೆ. ಆದರೆ ಮನೆಯಲ್ಲಿ ಹೇಳಿಕೊಳ್ಳುವ ಧೈರ್ಯವಿರುವುದಿಲ್ಲ. ತನ್ನ ತಾಯಿಯನ್ನು ಭೇಟಿ ಮಾಡಿ ಮಾತನಾಡು ಎಂದು ನರ್ಮದಾಳನ್ನು ತನ್ನ ಮನೆಗೆ ಮೋಹನ ಕಳಿಸುತ್ತಾನೆ. ನರ್ಮದಾಳಿಗೆ ಮೋಹನನ ತಾಯಿ ಒಂದು ಇಂಟರ್‌ವ್ಯೂ ಇಟ್ಟುಕೊಂಡಿರುತ್ತಾಳೆ. ಈ ಮೌಖಿಕ ಪರೀಕ್ಷೆಯಲ್ಲಿ ಪಾಸಾಗುವ ಹುಮ್ಮಸ್ಸಿನಲ್ಲಿ ನರ್ಮದಾ ಇರುತ್ತಾಳೆ. ಮನೆಯ ಕೆಲಸದಾಕೆ ಗಂಗೆಯನ್ನೇ ತನ್ನ ಅತ್ತೆ ಎಂದು ತಪ್ಪು ತಿಳಿದ ನರ್ಮದಾ ಪೇಚಿಗೆ ಸಿಲುಕುವ ಪ್ರಸಂಗ ಇಲ್ಲಿದೆ.

## ನಾಟಕ : ಶಾಂತಿ ಪಾರ್ಕ್
## ರಚನೆ : ಶ್ರೀ ನಾಗರಾಜ್ ಕೋಟೆ, ನಿರ್ದೇಶನ : ಟಿ.ಎಸ್. ರಮೇಶ್
## ತಂಡ : ಕಾವೇರಿ ಗೆಳೆಯರ ಬಳಗ

**ಪಾತ್ರ ಪರಿಚಯ :** ಪ್ರಭಾಕರ ಎಂ., ಎಸ್. ಕುಮಾರ್, ಟಿ.ಎಸ್. ರಮೇಶ್, ನಾರಾಯಣ ಬಿ., ಅಮರೇಶ್ ಎಸ್.ಎಚ್., ಮಂಜುಳಾ

| | | |
|---|---|---|
| ರಂಗಸಜ್ಜಿಕೆ | : | ಸುಧೀರ್ ಫಡ್ನೀಸ್ / ಉಲ್ಲಾಸ್ ನಾಯಕ್ |
| ಪ್ರಸಾದನ | : | ಶಶಿಕಾಂತ್ ಪಾಟೀಲ್ |
| ಬೆಳಕು | : | ಶಿವಾನಂದ ಇಂಗಳೇಶ್ವರ |
| ಸಂಗೀತ | : | ಟಿ.ಎಸ್. ರಮೇಶ್ / ಸಂತೋಷ್ ಕುಮಾರ್ ಉಪಾಧ್ಯಾಯ |

**ನಾಟಕದ ಕುರಿತು :** ಶಾಂತಿ ಪಾರ್ಕ್ ಈ ಪುಟ್ಟ ನಾಟಕ ಸ್ವಾತಂತ್ರ್ಯೋತ್ತರದ ಅದರಲ್ಲೂ ಮುಖ್ಯವಾಗಿ ಜಾಗತೀಕರಣ ಸಂದರ್ಭದ ಮಧ್ಯಮ ವರ್ಗದ ಬದುಕಿನ ಅನೇಕ ಮಗ್ಗುಲುಗಳನ್ನು ಧ್ವನಿಸುತ್ತದೆ. ಇಲ್ಲಿನ ಪಾರ್ಕ್ ಕೇವಲ ಶಾಂತಿಗೆ ಮಾತ್ರ ಸೀಮಿತವಾಗಿಲ್ಲ. ಅದೊಂದು ಆಶಾಂತ, ಅತೃಪ್ತ ಮನಸ್ಸುಗಳ ಅರ್ಥಪೂರ್ಣ ವೇದಿಕೆ. ಸಧ್ಯದ ಸಾಮಾಜಿಕ ಸಂದರ್ಭದ ಕೌಟುಂಬಿಕ ಏರುಪೇರುಗಳ ಕುರಿತಾದ ಸಮೃದ್ಧ ವಿಚಾರ-ಸಂಕೀರ್ಣ ಇಲ್ಲಿ ಸಾಂಕೇತಿಕವಾಗಿ ಬರುತ್ತದೆ.









# ಏಕಾಂಕ ನಾಟಕ ಸ್ಪರ್ಧೆ-2012 ಫಲಿತಾಂಶ

**ಶ್ರೇಷ್ಠ ನಾಟಕ**

ಪ್ರಥಮ -ಕನಸು-ಗಣೇಶ ಮಿತ್ರ ಮಂಡಳಿ

ದ್ವಿತೀಯ-ಮದುವೆ. . .ಅಯ್ಯೋ. . . ಮೂಕಿಯ ಮದುವೆ

ಜನಕಪುರಿ ಮಹಿಳಾ ಮಂಡಳಿ

**ಶ್ರೇಷ್ಠ ನಿರ್ದೇಶಕ**

ಪ್ರಥಮ - ಟಿ.ಎಂ. ಮೈಲಾರಪ್ಪ- ಕನಸು

ದ್ವಿತೀಯ - ಎಸ್.ಸಿ. ಹೇಮಲತ - ಅತ್ತೆಗೆ ಲತ್ತೆ

**ಶ್ರೇಷ್ಠ ನಟ**

ಪ್ರಥಮ - ಆರ್.ಎಸ್. ಶ್ಯಾಮಸುಂದರ್ - ಕನಸು

ದ್ವಿತೀಯ - ಅಮರೇಶ್ ಎಸ್.ಎಚ್. - ಶಾಂತಿ ಪಾರ್ಕ್

**ಶ್ರೇಷ್ಠ ನಟಿ**

ಪ್ರಥಮ -ಸವಿತಾ ಇನಾಂದಾರ್ಮದುವೆ...ಅಯ್ಯೋ... ಮೂಕಿಯ ಮದುವೆ

ದ್ವಿತೀಯ- ಮಂಜುಳಾ ನಾಗರಾಜು-ಅತ್ತೆಗೆ ಲತ್ತೆ

**ಅತ್ಯುತ್ತಮ ಬೆಳಕು**

ಶಿವಾನಂದ ಇಂಗಳೇಶ್ವರ (ಕನಸು)

**ಅತ್ಯುತ್ತಮ ಸಂಗೀತ**

ಉಲ್ಲಾಸ್ ನಾಯ್ಕ್ ಮತ್ತು ಸಂತೋಷ್ ಉಪಾಧ್ಯಾಯ (ಶಾಂತಿ ಪಾರ್ಕ್)

**ಅತ್ಯುತ್ತಮ ರಂಗವಿನ್ಯಾಸ**

ಶ್ರೀಮತಿ ರಾಧಾ ಕೌಜಲಗಿ ಮತ್ತು ಆಶಾ ಶ್ಯಾಮಸುಂದರ್ (ಮದುವೆ ಮಾರ್ಕೆಟ್)

**ಅತ್ಯುತ್ತಮ ವೇಷಭೂಷಣ**

ಡಾ. ರೂಪಶ್ರೀ ಅಶೋಕ್ ಮತ್ತು ಕು. ವಂದನಾ ರೈ

**ಪೋಷಕ ನಟಿ ಮತ್ತು ನಟ**

ಪ್ರತೀಕ್ ಹೆಗ್ಡೆ (ಕನಸು) ಮತ್ತು ಶೋಭಾ ನಾಗರಾಜ (ಅತ್ತೆಗೆ ಲತ್ತೆ)

**ತೀರ್ಪುಗಾರರ ವಿಶೇಷ ಪ್ರಶಸ್ತಿ**

ನಾರಾಯಣ ಬಿ. (ಶಾಂತಿ ಪಾರ್ಕ್), ಉಷಾ ಭರತಾದ್ರಿ (ಮದುವೆ ಮಾರ್ಕೆಟ್) ಟಿ.ಎಸ್. ರಮೇಶ್ (ಕನಸು), ಮೋಹಿನಿ ರೈ (ಮದುವೆ... ಅಯ್ಯೋ... ಮೂಕಿಯ ಮದುವೆ), ಆಶಾ ಮಹಾದೇವ್ (ಅತ್ತೆಗೆ ಲತ್ತೆ)

**ಪ್ರೋತ್ಸಾಹಕರ ಬಹುಮಾನ (ಬಾಲಪ್ರತಿಭೆ)**

ಕು. ವೈಷ್ಣವಿ ಬಸವರಾಜ್, ಕು. ಭಕ್ತಿ ಮಾಣಕಾಪುರೆ, ಕು. ನಿಸರ್ಗ ಅಶೋಕ್, ಕು. ನಿತ್ಯಶ್ರೀ ಅಶೋಕ್, ಕು. ವಾಸುಕಿ ದೇಶಪಾಂಡೆ

## ಅಪ್ರತಿಮ ಚಿಗುರು ಪ್ರತಿಭೆ ಯೋಗಪಟು ಮಾ॥ ಶಿವನಗೌಡ ಬಸನಗೌಡ ಹರ್ನಾಳ್





"ಬೆಳೆವ ಸಿರಿ ಮೊಳಕೆಯಲ್ಲಿ" ಎಂಬಂತೆ ಅತ್ಯಂತ ಕಿರಿಯ ವಯಸ್ಸಿನಲ್ಲೇ ಯೋಗಾಭ್ಯಾಸದಲ್ಲಿ ಅಪ್ರತಿಮ ಸಾಧನೆ ಮಾಡಿರುವ ಬಾಲಕ ಶಿವನಗೌಡ ಬಸನಗೌಡ ಹರ್ನಾಳ್ ಅವರ ಯೋಗಾಸನ ಪ್ರದರ್ಶನ ದೆಹಲಿ ಕನ್ನಡಿಗರನ್ನು ಬೆರಗುಗೊಳಿಸಿತು. ದೆಹಲಿಗೆ ಆಗಮಿಸಿದ್ದ 12ರ ಹರೆಯದ ಪುಟ್ಟ ಬಾಲಕ ಶಿವನಗೌಡ ಯೋಗ ಗುರುವಾದ ತನ್ನ ತಂದೆಯವರೊಡನೆ ಅಕ್ಟೋಬರ್ 14ರಂದು ಸಂಘಕ್ಕೆ ಭೇಟಿ ನೀಡಿ, ತನ್ನ ಅದ್ಭುತ ಯೋಗಾಸನ ಪ್ರದರ್ಶನವನ್ನು ನೀಡಿ ಅಪಾರ ಪ್ರಶಂಸೆಗೆ ಪಾತ್ರನಾದನು. ಬಿಜಾಪುರ ಜಿಲ್ಲೆಯ ತಿಡಗುಂದಿಯಲ್ಲಿ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಶಿವನಗೌಡ ತನ್ನ ಎಳೆಯ ವಯಸ್ಸಿನಿಂದಲೇ ತಂದೆಯಿಂದ ಯೋಗಾಭ್ಯಾಸ ನಡೆಸಿದ್ದಾನೆ. ಈಗಾಗಲೇ ಹಲವಾರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಯೋಗ ಚಾಂಪಿಯನ್‌ಷಿಪ್ ಸ್ಪರ್ಧೆಯಲ್ಲಿ ಭಾಗವಹಿಸಿ ಪುರಸ್ಕಾರಗಳನ್ನು ಪಡೆದಿದ್ದಾನೆ. ಅತ್ಯಂತ ಕಠಿಣವಾದ ಯೋಗಾಸನಗಳನ್ನು ಲೀಲಾಜಾಲವಾಗಿ ಪ್ರದರ್ಶಿಸಿದ ಶಿವನಗೌಡನ ಸಾಧನೆ ನಿಜಕ್ಕೂ ಅಭಿನಂದನೀಯ. ಈಗಾಗಲೇ ರಾಜ್ಯ ಸರ್ಕಾರವು ರಾಷ್ಟ್ರಪತಿ ಪುರಸ್ಕಾರಕ್ಕಾಗಿ ಇವನನ್ನು ಶಿಫಾರಸ್ಸು ಮಾಡಿದೆ. ದೆಹಲಿ ಕರ್ನಾಟಕ ಸಂಘದಿಂದ ಈ ಕನ್ನಡದ ಕಣ್ಮಣಿಗೆ ಶುಭ ಹಾರೈಸಿ ಅಭಿನಂದಿಸಲಾಯಿತು. ಶಿವನಗೌಡ ಹರ್ನಾಳ್‌ಗೆ ರಾಷ್ಟ್ರಪತಿ ಪುರಸ್ಕಾರ ದೊರೆಯಲಿ, ಯೋಗ ಕ್ಷೇತ್ರದಲ್ಲಿ ಇನ್ನೂ ಉನ್ನತ ಸಾಧನೆ ಮಾಡಿ ಯಶಸ್ಸು ಗಳಿಸಲಿ ಎಂದು ಶುಭ ಹಾರೈಸುತ್ತೇವೆ.



## ಅರಳು ಪ್ರತಿಭೆ

ಹದಿನಾಲ್ಕು ವರ್ಷದ ಸ್ವಾತಿ ಹೆಗಡೆ 2012ರ ಸಾಲಿನ "ಸಾಂಸ್ಕೃತಿಕ ಪ್ರತಿಭಾಶೋಧ ವಿದ್ಯಾರ್ಥಿ ವೇತನ"ಕ್ಕೆ ಆಯ್ಕೆಯಾಗಿರುತ್ತಾರೆ. ಇದನ್ನು ಕೇಂದ್ರ ಸಾಂಸ್ಕೃತಿಕ ಸಂಪನ್ಮೂಲ ಹಾಗೂ ತರಬೇತಿ ಕೇಂದ್ರವು ಮೇ 2012 ರಂದು ಆಯೋಜಿಸಿತ್ತು.

ಸ್ವಾತಿ ತನ್ನ ನೃತ್ಯ ಗುರುಗಳಾದ ಅಭಿನಯಾ ನಾಗಜ್ಯೋತಿ ಅವರ ತರಬೇತಿಯಲ್ಲಿ ಕೂಚುಪುಡಿ ನೃತ್ಯಗಳ ಪರೀಕ್ಷೆಗೆ ಸಿದ್ಧತೆ ನಡೆಸಿದ್ದಾಳೆ. ದೆಹಲಿ ಕನ್ನಡಿಗರಾದ ಡಾ. ಶ್ರೀರಾಮ ಹೆಗಡೆ ಹಾಗೂ ಪೂರ್ಣಿಮಾ ಹೆಗಡೆ ಅವರ ಪುತ್ರಿ ಸ್ವಾತಿ ಪ್ರಸ್ತುತ ಒಂಭತ್ತನೆ ತರಗತಿಯ ವಿದ್ಯಾರ್ಥಿನಿ. ಈ ಅರಳು ಪ್ರತಿಭೆಗೆ ದೆಹಲಿ ಕರ್ನಾಟಕ ಸಂಘ, ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು ಹಾಗೂ ಕಲೆಯ ಬಗೆಗಿನ ಪ್ರೀತಿ, ನಿಷ್ಠೆ, ಪರಿಶ್ರಮ ಅವಳನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯಲೆಂದು ಹೃತ್ಪೂರ್ವಕ ಹಾರೈಕೆಗಳು.

# ಗಡಿಯಂಕ ಕುಡಿಮುದ್ದ



ದೆಹಲಿಯಲ್ಲಿ ನಾಟಕ ಚಟುವಟಿಕೆಗಳು ಭರದಿಂದ ನಡೆಯುತ್ತಿವೆ. ದೆಹಲಿ ಕರ್ನಾಟಕ ಸಂಘ ನಡೆಸಿದ ಏಕಾಂಕ ನಾಟಕ ಸ್ಪರ್ಧೆ ಯಶಸ್ವಿಯಾಗಿ ನಡೆಯಿತಲ್ಲದೆ, ಹಲವು ಪ್ರತಿಭೆಗಳಿಗೆ ಸೂಕ್ತ ವೇದಿಕೆಯಾಯಿತು. ಕಂಬಾರರ ಕರಿಮಾಯಿ ಕನ್ನಡೇತರರ ಮನಗೆದ್ದಿತು. ಈ ಚಟುವಟಿಕೆಗಳಿಗೆ ಪೂರಕವಾಗಿ ಕಳೆದ ಅಕ್ಟೋಬರ 28ರಂದು ಶ್ರೀ ಡಿ. ಬಾಲಕೃಷ್ಣ ನಾಯಕ್ ಅವರ ನಿರ್ದೇಶನದಲ್ಲಿ, ಕೆಂಪುಕೋಟೆ ತಂಡದ ಯುವಕರು ಲಿಂಗದೇವರು ಹಳೆಮನೆ ಅವರ ಹೊಸ ನಾಟಕ ಗಡಿಯಂಕ ಕುಡಿಮುದ್ದ ನಾಟಕವನ್ನು ಪ್ರದರ್ಶಿಸಿ, ದೆಹಲಿಯ ರಂಗ ಚಟುವಟಿಕೆಗಳ ಗುಣಮಟ್ಟ ಗಣನೀಯವಾಗಿ ಸುಧಾರಿಸಿದೆ ಎಂಬುದನ್ನು ನೋಡುಗರಿಗೆ ಮನವರಿಕೆ ಮಾಡಿಕೊಟ್ಟರು.

ಹಳೆಮನೆಯವರ ಈ ನಾಟಕ ಮೇಲ್ನೋಟಕ್ಕೆ ತುಂಬ ಸರಳ ಅಂತ ತೆ–ೋರುತ್ತದೆ. 7ನೇಶತಮಾನದಲ್ಲಿ ಕರ್ನಾಟಕವನ್ನು ಆಳುತ್ತಿದ್ದ ಬಾದಾಮಿಯ ಚಾಳುಕ್ಯರ ಕಾಲದಲ್ಲಿ ನಡೆದಿದೆ ಎನ್ನಲಾದ ಘಟನೆಯೊಂದನ್ನು ಆಧರಿಸಿ ಅವರು ಈ ನಾಟಕವನ್ನು ಬರೆದಿದ್ದಾರೆ. ತನ್ನ ರಾಜ್ಯವನ್ನು ವಿಸ್ತಾರಗೊಳಿಸುತ್ತಿದ್ದ ಚಾಳುಕ್ಯರ ರಾಜ ಮಂಗಳೇಶನಿಗೆ ತನ್ನ ಅಣ್ಣನ ಮಗ ಇಮ್ಮಡಿ ಪುಲಿಕೇಶಿಯನ್ನು ಬಿಟ್ಟು ತನ್ನ ಮಗ ಆದಿತ್ಯನನ್ನು ಪಟ್ಟಕ್ಕೇರಿಸುವ ಆಲೋಚನೆ ಬರುತ್ತದೆ. ಅದಕ್ಕನುಗುಣವಾಗಿ ಆತನ ಮಂತ್ರಿಯಾದ ಅನಿವಾರಿತನು ಯುವರಾಜ ಇಮ್ಮಡಿ ಪುಲಿಕೇಶಿಯನ್ನು ಹತ್ಯೆಗೈಯಲು ಯೋಜನೆಯೊಂದನ್ನು ರೂಪಿಸಿ, ಕೇತಮಲ್ಲ ಎಂಬ ಬಾಡಿಗೆ ಬಂಟನನ್ನು ಆ ಕೆಲಸಕ್ಕೆ ನೇಮಿಸುತ್ತಾನೆ. ಆದ–ರೆ ಇಂಥ ರಾಜಕೀಯ ಕಾರಸ್ಥಾನಗಳ ಅರಿವಿರುವ ರಾಜಮಾತೆ ದುರ್ಲಭಾ ದೇವಿಯು ಯುವರಾಜ ಇಮ್ಮಡಿ ಪುಲಿಕೇಶಿಯ ಬೆಂಗಾವಲಿಗೆ ಗಡಿಯಂಕನಾದ ಕುಡಿಮುದ್ದನನ್ನು ನೇಮಿಸುತ್ತಾಳೆ. ಸ್ವಾಮಿ ನಿಷ್ಠಗೆ ಹೆಸರಾಗಿದ್ದ ಕುಡಿಮುದ್ದನು ರಾಜಮಾತೆಯ ಗೂಢಾಚಾರಿಣಿ ದೇವದಾಸಿ ಕೆಂಚಬ್ಬೆಯ ಮನೆಯಲ್ಲಿದ್ದು ತನ್ನ ಪ್ರಾಣ ಕೊಟ್ಟಾದರು ಯುವರಾಜನನ್ನು ಕಾಪಾಡುವ ಪಣವನ್ನು ತೊಡುತ್ತಾನೆ. ಅಲ್ಲಿ ಕುಡಿಮುದ್ದನಿಗೆ ಕೆಂಚಬ್ಬೆಯ ಮಗಳಾದ ಜಕ್ಕಬ್ಬೆಯ ಮೇಲೆ ಪ್ರೇಮಾಂಕುರವಾಗುತ್ತದೆ. ಆದರೆ ತನ್ನ ಕರ್ತವ್ಯಪ್ರಜ್ಞೆಯನ್ನು ಮಾತ್ರ ಆತ ಮರೆಯುವುದಿಲ್ಲ. ಪುಲಿಕೇಶಿಯನ್ನು ಕೊಲ್ಲಲು ಮಾಡಿದ ಪ್ರಯತ್ನಗಳನ್ನು ಶಕ್ತಿ ಮತ್ತು ಬುದ್ಧಿ ಉಪಯೋಗಿಸಿ ಕುಡಿಮುದ್ದ ವಿಫಲಗೊಳಿಸುತ್ತಾನೆ. ಬಾಡಿಗೆ ಬಂಟ ಕೇತಮಲ್ಲನು ಹೋರಾಟದಲ್ಲಿ ಸಾಯುತ್ತಾನೆ. ಆದರೆ ಸಾಯುವ ಕಾಲಕ್ಕೆ ಆತ ನೀಡಿದ ಮಾಹಿತಿಯನ್ನು ಆಧರಿಸಿ ಆತ ತನ್ನ ಪ್ರೇಯಸಿ ಜಕ್ಕಬ್ಬೆಯ ರಕ್ಷಣೆಗೆ ಧಾವಿಸಿದರೂ ಅದರಲ್ಲಿ ಆತ ಯಶಸ್ವಿಯಾಗುವುದಿಲ್ಲ. ಮಂಗಳೇಶನ ಮಗ ಆದಿತ್ಯನು ಜಕ್ಕಬ್ಬೆಯ ಬಲಾತ್ಕಾರಕ್ಕೆ ಪ್ರಯತ್ನಿಸಿದಾಗ ಆಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಹತಾಶನಾದ ಕುಡಿಮುದ್ದನು ಆದಿತ್ಯನನ್ನು ಕೊಂದು, ತಾನೂ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಅಧಿಕಾರ ರಾಜಕಾರಣದ ಉರಿಯಲ್ಲಿ ಅಮಾಯಕ ಪ್ರೇಮಿಗಳಿಬ್ಬರೂ ಬೆಂದು ಹೋಗುತ್ತಾರೆ. ಮುಂದೆ ಈ ಪ್ರೇಮಿಗಳು ಆಕಾಶದಲ್ಲಿ ನಕ್ಷತ್ರಗಳಂತೆ ಹೊಳೆಯುವುದನ್ನೂ, ಕುಡಿಮುದ್ದನ ರಕ್ಷಣೆಯಲ್ಲಿ ಬೆಳೆದು ದೊಡ್ಡವನಾದ ಇಮ್ಮಡಿ ಪುಲಕೇಶಿಯು ಮುಂದೆ ತನ್ನ ಮಗನಿಗೆ ವಿಜ್ಜಿಕೆ ಎಂಬ ದೇವದಾಸಿಯೊಡನೆ ಮದುವೆ ಮಾಡಿಸುವ ವಿವರವನ್ನೂ, ಜನರು ಗಡಿಯಂಕ ಕುಡಿಮುದ್ದ–ಜಕ್ಕಬ್ಬೆಯರ ನೆನಪಿಗೆ ವೀರಗಲ್ಲು– ಮಾಸ್ತಿ ಕಲ್ಲುಗಳನ್ನು ನೆಡೆಸುವ ಘಟನೆಯನ್ನೂ ಜೋಗತಿಯರು ನಿರೂಪಿಸುವುದರೊಂದಿಗೆ ನಾಟಕ ಕೊನೆಯಾಗುತ್ತದೆ.

ವೀರತ್ವ ಮತ್ತು ಪ್ರೇಮ ಜೊತೆ ಜೊತೆಯಾಗಿ ಹರಿಯುವ ಈ ನಾಟಕವನ್ನು ಆಯ್ಕೆ ಮಾಡಿಕೊಂಡು, ದೆಹಲಿಯ ನಟರಿಂದ ಆಡಿಸುವ ಯೋಜನೆಯಲ್ಲಿಯೇ ಶ್ರೀ ಬಾಲಕೃಷ್ಣ ನಾಯಕ್ ಅವರು ಅರ್ಧ ಯಶಸ್ಸು ಸಾಧಿಸಿದ್ದಾರೆ. ರಂಗಭೂಮಿ, ಮಾಧ್ಯಮ ಮತ್ತು ಸಾಹಿತ್ಯಗಳಲ್ಲಿ ಆಸಕ್ತರಾಗಿರುವ ಅವರಿಗೆ 'ಹೆಜ್ಜೆಗೊಂದು ಬಲಿ' ಮತ್ತು 'ಮೆಸೇಜ್ ಬಂತು' ಅಂತ ನಾಟಕಗಳನ್ನು ಬರೆದು, ಯಶಸ್ವಿಯಾಗಿ ನಿರ್ದೇಶಿಸಿದ ಅನುಭವವೂ ಇದೆ. ಕಾರಣ ಅವರು ಹೆಚ್ಚು ಸಂಕೀರ್ಣತೆಗಳಿಲ್ಲದೆ ( ತುಘಲಕ್, ಸಂಕ್ರಾಂತಿ ನಾಟಕಗಳ ಹಾಗೆ) ನಾಟಕವನ್ನು ಸಹಜವಾಗಿ ಆಯ್ದುಕೊಂಡಿದ್ದಾರೆ. ದೆಹಲಿಯ ಬೇರೆ ಬೇರೆ ಕಡೆ ಉದ್ಯೋಗದಲ್ಲಿರುವ ಹೊಸತಲೆಮಾರಿನ ಹುಡುಗರನ್ನು ಹುಡುಕಿ, ಅವರನ್ನು ಕನ್ನಡದ ಕೆಲಸಕ್ಕೆ ನಿಯೋಜಿಸಿದ ದೊಡ್ಡ ಕೆಲಸವನ್ನು ಬಾಲಕೃಷ್ಣ ನಾಯಕ್ ಅವರು ಮಾಡಿರುವುದನ್ನು ಇಲ್ಲಿಯೇ ನೆನಪಿಸಿಕೊಳ್ಳ ಬೇಕು.

ನಾಟಕದ ಒಟ್ಟು ಯಶಸ್ಸಿನಲ್ಲಿ ಎಲ್ಲರದೂ ಕಾಣಿಕೆ ಇದೆಯಾದರೂ ಇಬ್ಬರು ನಟರನ್ನು ಇಲ್ಲಿ ವಿಶೇಷವಾಗಿ ಗುರುತಿಸಬೇಕು. ಅವರೆಂದರೆ ಗಡಿಯಂಕ ಕುಡಿಮದ್ದನಾಗಿ ಪ್ರಮಾಣ ಬದ್ಧ ಅಭಿನಯ ನೀಡಿದ ಶ್ರೀ ಪ್ರದೀಪ್ ಕುಮಾರ್ ಮತ್ತು ಕೇತಮಲ್ಲನಾಗಿ ಲವಲವಿಕೆಯ ಅಭಿನಯ ನೀಡಿದ ಶ್ರೀ ಪ್ರಕಾಶ್ ಶೆಟ್ಟಿ. ಪ್ರದೀಪ್ ಕುಮಾರ್ ಅವರ ದೇಹ ಭಾಷೆ, ರಂಗ ಚಲನೆ, ಸ್ವರ ಎಲ್ಲವೂ ಒಬ್ಬ ವೃತ್ತಿಪರ ಕಲಾವಿದನ ಸಾಧನೆಯನ್ನು ನೆನಪಿಸುತ್ತಿತ್ತು. ಪ್ರಕಾಶ್ ಶೆಟ್ಟಿಯವರು ಕೇತಮಲ್ಲನ ರೋಷ, ವಂಚನೆ ಮತ್ತು ಅಂತಿಮದಲ್ಲಿ ಸಿದ್ಧಿಸಿದ ಪ್ರಾಮಾಣಿಕತೆಯನ್ನು ಅತ್ಯಂತ ಸಮರ್ಪಕವಾಗಿ ರಂಗದಲ್ಲಿ ಕಾಣಿಸಿದರು. ಉಳಿದಂತೆ, ಅಶೋಕ, ಅನಿತಾ, ಅವನೀಂದ್ರ, ಬಾಲಕೃಷ್ಣ, ಭರತ್, ಗುರುರಾಜ್, ಹರೀಶ್, ಲಕ್ಷ್ಮಿ, ಲಿವ್ಯಾ, ಮದನ್, ಮಹೇಶ್, ಮನೀಷ್, ಮಣಿಕಾಂತ್, ಮೇಘನಾ, ನಮಿತಾ, ಪವಿತ್ರಾ, ರಾಕೇಶ್, ರಕ್ಷಾ, ಸೌಜನ್ಯ, ಸುಖೇಶ್, ವಂದನಾ, ವಿನಯ್– ಹೀಗೆ ಎಲ್ಲರೂ ನಾಟಕದ ಒಟ್ಟು ಯಶಸ್ವಿಗೆ ತಮ್ಮ ಕಾಣಿಕೆ ಸಲ್ಲಿಸಿದರು. ಈ ಅರ್ಥದಲ್ಲಿ ಇದೊಂದು ಸಾಮೂಹಿಕ ಸಾಧನೆ.

ಬೆಳಕು ನಿಯಂತ್ರಣ ಮಾಡಿದ ಶಿವಾನಂದ ಅವರು, ವೇಷಭೂಷಣಗಳನ್ನು ರೂಪಿಸಿದ ನಮಿತಾ ಅವರು, ಸರಳ ಆದರೆ ಪರಿಣಾಮಕಾರಿ ರಂಗ ಸಜ್ಜಿಕೆ ಮಾಡಿದ ಮಹೇಶ್ ಅವರ ಕೊಡುಗೆ ದೊಡ್ಡದು. ಸಂಗೀತದಲ್ಲಿ ಟಿ.ಎಸ್. ರಮೇಶ್, ಚಿದಂಬರ ಕೋಟೆ ಮತ್ತು ರಕ್ಷಾ ರಮೇಶ್ ಅವರು ವಸ್ತುವಿನ ಓಟಕ್ಕೆ ತಕ್ಕಂತೆ ಹಾಡಿ, ನಾಟಕದ ಗಾಂಭೀರ್ಯವನ್ನು ಹೆಚ್ಚಿಸುವಲ್ಲಿ ಸಫಲರಾಗಿದ್ದಾರೆ. ಇಡೀ ನಾಟಕಕ್ಕೆ ಹಿನ್ನೆಲೆಯಾಗಿ ನಿಲ್ಲಬೇಕಾಗಿದ್ದ ಸಂಗೀತದ ಧ್ವನಿಯೊಂದು ಏಕೋ ಕೊನೆವರೆಗೂ ಕೇಳಿಸಲೇ ಇಲ್ಲ. ಆಗಾಗ ಉಪಯೋಗಿಸಿದ್ದ ತಬಲಾ ವಾದನ ನಾಟಕದ ವಸ್ತುವಿನ ಗಹನತೆಗೆ ಸಾಕಾಗುತ್ತಿರಲಿಲ್ಲ. ಒಂದು ಹೊಸ ಅನುಭವ ನೀಡಿದ ಕೆಂಪುಕೋಟೆಗೆ ಅಭಿನಂದನೆಗಳು

**ಡಾ. ಪುರುಷೋತ್ತಮ ಬಿಳಿಮಲೆ**



# ಉತ್ತರ ಕರ್ನಾಟಕದ ಶಕ್ತಿ ಕೇಂದ್ರ ಸುವರ್ಣ ಸೌಧ

ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದ ನಂತರ ನಿರ್ಮಾಣವಾದ ಮೊದಲ ವಿಧಾನ ಸೌಧ (ಸುವರ್ಣ ಸೌಧ) ಬೆಳಗಾವಿಯಲ್ಲಿ ಅಕ್ಟೋಬರ್ 11 ರಂದು ದೇಶದ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರಿಂದ ಅನಾವರಣಗೊಂಡಿತು. ಬೆಳಗಾವಿ ಕರ್ನಾಟಕ ಏಕೀಕರಣಕ್ಕಾಗಿ ತೊಡೆತಟ್ಟಿದ ಗಂಡುಮೆಟ್ಟಿದ ನಾಡು! ಬೆಂಗಳೂರಿನಲ್ಲಿ ಈ ಮೊದಲು ದೇಶದ ಗಮನ ಸೆಳೆಯುವಂತಹ ವಿಧಾನ ಸೌಧ ಕಟ್ಟಡ ನಿರ್ಮಾಣವಾಗಿದ್ದರೂ ಅದು ಮೈಸೂರು ರಾಜ್ಯ ಅಸ್ತಿತ್ವದಲ್ಲಿದ್ದಾಗ ಎಂಬುದು ಗಮನಾರ್ಹ ಸಂಗತಿ. ಅಂದರೆ ಭಾಷಾವಾರು ಪ್ರಾಂತ ರಚನೆಯಾಗಿ 1973ರಲ್ಲಿ ಕರ್ನಾಟಕ ರಾಜ್ಯ ಘೋಷಣೆಯಾಗುವ ಮೊದಲು. ಹೀಗಾಗಿ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದ ಅನಂತರದಲ್ಲಿ ವಿಧಾನ ಮಂಡಳ ಅಧಿವೇಶನ ನಡೆಸಲು ನಿರ್ಮಾಣವಾದ ಪ್ರಪ್ರಥಮ ಸೌಧ ಎಂಬ ಹೆಗ್ಗಳಿಕೆಗೆ ಸುವರ್ಣ ಸೌಧ ಪಾತ್ರವಾಗಿದೆ....! ಈಗ ಇದು ಏಕೀಕೃತ ಕರ್ನಾಟಕವಾಗಲು ಪ್ರಮುಖ ಪಾತ್ರವಹಿಸಿದ ಮುಂಬಯಿ ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕದ ಆಶೋತ್ತರಗಳ ಸೌಧವಾಗಿ ರೂಪುಗೊಳ್ಳಬೇಕಿದೆ.

ಈಗಿನ ಕರ್ನಾಟಕ ರಾಜ್ಯ ಎಂಬುದು ಮುಂಬಯಿ, ಹೈದರಾಬಾದ್, ಮದ್ರಾಸ್ ಹಾಗೂ ಮೈಸೂರು ಪ್ರಾಂತಗಳಲ್ಲಿ ಹರಿದು ಹಂಚಿ ಹೋಗಿತ್ತು. ಕನ್ನಡಿಗರ ಹೋರಾಟದ ಅನಂತರ ಭಾಷಾವಾರು ಪ್ರಾಂತ ರಚನೆಯಾಗಿ 1956ರಲ್ಲಿ ಈ ಭಾಗಗಳೆಲ್ಲ ಒಟ್ಟಾಗಿ ಸೇರಿ ಮೈಸೂರು ರಾಜ್ಯವಾಯಿತು. ಬೆಂಗಳೂರಿನಲ್ಲಿ 1952ರಲ್ಲಿ ಆರಂಭವಾಗಿ 1956ರಲ್ಲಿ ಲೋಕಾರ್ಪಣೆಗೊಂಡ ವಿಧಾನ ಸೌಧ ಮೈಸೂರು ರಾಜ್ಯ ಅಸ್ತಿತ್ವದಲ್ಲಿದ್ದಾಗ ನಿರ್ಮಾಣವಾದದ್ದು. ಆಗ ಕರ್ನಾಟಕ ರಾಜ್ಯ  ಇನ್ನೂ ಅಸ್ತಿತ್ವಕ್ಕೆ ಬಂದಿರಲಿಲ್ಲ. ಕರ್ನಾಟಕ ರಾಜ್ಯ ಎಂದು ನಾಮಕಾರಣವಾಗಿದ್ದು 1973ರ ನವೆಂಬರ್ 1ರಂದು. ಅನಂತರದಲ್ಲಿ ಬೆಂಗಳೂರಿನಲ್ಲಿ ಆಡಳಿತವನ್ನು ಇನ್ನಷ್ಟು ಚುರುಕುಗೊಳಿಸುವುದಕ್ಕಾಗಿ ವಿಧಾನ ಸೌಧಕ್ಕೆ ಸರಿಸಮ ಎಂಬಂತೆ ವಿಕಾಸ ಸೌಧ ನಿರ್ಮಾಣವಾದರೂ ಇಲ್ಲಿ ವಿಧಾನ ಮಂಡಳಗಳ ಅಧಿವೇಶನ ನಡೆಯುವುದಿಲ್ಲ. ಇದು ಕೇವಲ ಸಚಿವಾಲಯಗಳು ಮತ್ತು ಸರಕಾರಿ ಕಚೇರಿಗಳಿಗೆಂದೇ ನಿರ್ಮಾಣಗೊಂಡಿದೆ. ಹೀಗಾಗಿ ಏಕೀಕೃತ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದ ಅನಂತರ ರಾಜ್ಯದಲ್ಲಿ ವಿಧಾನ ಮಂಡಳದ ಅಧಿವೇಶನ ನಡೆಯಲು ನಿರ್ಮಾಣವಾದ ಮೊದಲ ಸೌಧ ಎಂಬ ಹೆಗ್ಗಳಿಕೆ ಸುವರ್ಣ ಸೌಧಕ್ಕೆ ಪ್ರಾಪ್ತವಾಗಿದೆ.

ಬೆಳಗಾವಿಯಲ್ಲಿ ಸುವರ್ಣ ಸೌಧ ನಿರ್ಮಾಣವಾಗಿ ಲೋಕಾರ್ಪಣೆ ಆಗುತ್ತಿರುವುದು ಕನ್ನಡಕ್ಕಾಗಿ ತೊಡೆತಟ್ಟಿದ ಚಳವಳಿ ನಾಡಿಗೆ ಕೊನೆಗೂ ಗೌರವ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಇದಕ್ಕಾಗಿ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದ ಅನಂತರ 55 ವರ್ಷಗಳು ಸಂದಬೇಕಾಯಿತು. ಉತ್ತರ ಕರ್ನಾಕವನ್ನು (ಮುಂಬಯಿ ಹಾಗೂ ಹೈದರಾಬಾದ್ ಕರ್ನಾಟಕ ಸೇರಿ) ಚಳವಳಿಗಳ ನಾಡು ಎಂದೇ ಕರೆಯಲಾಗುತ್ತದೆ. ದೇಶದ ಸ್ವಾತಂತ್ರ್ಯ ಚಳವಳಿಯಿಂದ ಮೊದಲ್ಗೊಂಡು ಕನ್ನಡಕ್ಕಾಗಿ ನಡೆದ ಎಲ್ಲ ಹೋರಾಟಗಳಿಗೂ ಈ ನೆಲ ಮಂಚೂಣಿಯಲ್ಲಿದೆ. ಕನ್ನಡ ನಾಡಿಗೆ ಸಂಬಂಧಪಟ್ಟ ಬಹುತೇಕ ಹೋರಾಟಗಳು ಈ ನೆಲದಲ್ಲಿಯೇ ಜನ್ಮ ತಾಳಿವೆ. ಕರ್ನಾಟಕ ಏಕೀಕರಣ ಚಳವಳಿ, ಹೈದರಾಬಾದ್ ವಿಮೋಚನಾ ಹೋರಾಟ, ಗೋವಾ ವಿಮೋಚನಾ ಹೋರಾಟ, ಗೋಕಾಕ ಚಳವಳಿ ಹೀಗೆ ಉತ್ತರ ಕರ್ನಾಟಕವೇ ಭಾಷಾ ಚಳವಳಿಗೆ ಜನ್ಮಭೂಮಿ. ಇದಲ್ಲದೆ ನರಗುಂದ– ನವಲಗುಂದ ರೈತ ಬಂಡಾಯ ಕೂಡ ದೇಶದ ಗಮನವನ್ನೇ ಸೆಳೆದ ರೈತ ಚಳವಳಿ.

1956ರಲ್ಲಿ ಭಾಷಾವಾರು ಪ್ರಾಂತ ರಚನೆಗೆ ಮೊದಲು ಈ ಜಿಲ್ಲೆಗಳು ಆಡಳಿತಾತ್ಮಕವಾಗಿ ಮುಂಬಯಿ ಹಾಗೂ ಹೈದರಾಬಾದ್ ಅನ್ನು ಅವಲಂಬಿಸಬೇಕಿತ್ತು. ಈ ಜಿಲ್ಲೆಗಳಿಗೆ ಹೊಂದಿಕೊಂಡಿರುವ ಬಳ್ಳಾರಿ ಜಿಲ್ಲೆ ಮದ್ರಾಸ್ ಪ್ರಾಂತ್ಯಕ್ಕೆ ಸೇರಿತ್ತು. ಹೀಗಾಗಿ ಒಟ್ಟಾರೆ ಸಮಗ್ರವಾದ ಕನ್ನಡದ ರಾಜ್ಯ ಅಸ್ತಿತ್ವದಲ್ಲಿ ಇರಲೇ ಇಲ್ಲ. ಧಾರವಾಡದಲ್ಲಿ ಆರಂಭವಾದ ಕರ್ನಾಟಕ ಏಕೀಕರಣ ಚಳವಳಿ ಹಾಗೂ ಹೈದರಾಬಾದ್ ಕರ್ನಾಟಕದಲ್ಲಿ ನಡೆದ ಹೈದರಾಬಾದ್ ವಿಮೋಚನಾ ಚಳವಳಿಗಳು ಮುಂದೆ 1956 ನವೆಂಬರ್ 1ರಂದು ಏಕೀಕೃತ ಕನ್ನಡ ರಾಜ್ಯ ಮೈಸೂರು ರಾಜ್ಯ ಉದಯವಾಗಲು ಕಾರಣವಾಯಿತು. ಆದರೆ ಇದು ಸಮಗ್ರ ಕರ್ನಾಟಕವನ್ನು ಪ್ರತಿನಿಧಿಸುವ ಹೆಸರಾಗಿರಲಿಲ್ಲ. ಹೀಗಾಗಿ 1973 ನವೆಂಬರ್ 1ರಂದು ಇದನ್ನು ಕರ್ನಾಟಕ ಎಂದು ನಾಮಕರಣ ಮಾಡಲಾಯಿತು. ಆದರೆ ಇಷ್ಟೆಲ್ಲ ಆದರೂ ಈ ಮೊದಲು ಬೇರೆ ರಾಜ್ಯಗಳಿಗೆ ಸೇರಲ್ಪಟ್ಟು ಮೊದಲೇ ಹಿಂದುಳಿದಿದ್ದ ಉತ್ತರ ಕರ್ನಾಟಕದ ಭಾಗಗಳಲ್ಲಿ ಅಭಿವೃದ್ಧಿ ಎಂಬುದು ನಿರೀಕ್ಷಿತ ಮಟ್ಟದಲ್ಲಿ ಆಗಲಿಲ್ಲ. ಹೀಗಾಗಿ ಪ್ರಾದೇಶಿಕ ಅಸಮತೋಲನದ ಕೂಗು ಎದ್ದಿತು. ಮುಂದೆ ವಿವಿಧ ಹಂತಗಳಲ್ಲಿ ಹೋರಾಟಗಳ ಮೂಲಕ ಪ್ರತಿಧ್ವನಿಗೊಂಡಿತು. ನವಲಗುಂದ–ನರಗುಂದ ರೈತ ಬಂಡಾಯ ಹಾಗೂ ಗೋಕಾಕ ವರದಿ ಅನುಷ್ಠಾನಕ್ಕೆ ನಡೆದ ಗೋಕಾಕ ಚಳವಳಿಯಿಂದ ಅಂದಿನ ಸರಕಾರಗಳೇ ಪಲ್ಲಟಗೊಂಡವು ಎಂಬುದು ಈಗ ಇತಿಹಾಸ. ಇಂಥ ಗಟ್ಟಿ ಹೋರಾಟದ ನೆಲ ಇದು. ಇವೆಲ್ಲವೂ ಕನ್ನಡತನಕ್ಕಾಗಿ, ಕನ್ನಡದ ನೆಲಕ್ಕಾಗಿ ನಡೆದ ಹೋರಾಟಗಳು ಎಂಬುದನ್ನು ಯಾರೂ ಮರೆಯುವಂತಿಲ್ಲ. ಇದಾದ ಅನಂತರವೇ ಸಮಗ್ರ ಕರ್ನಾಟಕವನ್ನು ದೃಷ್ಟಿಯಲ್ಲಿಟ್ಟುಕೊಂಡು ಸರೋಜಿನಿ ಮಹಿಷಿ ವರದಿ ಹಾಗೂ ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಡಾ। ಡಿ.ಎಂ. ನಂಜುಡಪ್ಪ ವರದಿ ಸಲ್ಲಿಕೆಯಾಗಿದ್ದು. ಈ ಚಳವಳಿ ಸರಕಾರಗಳಿಗೆ ಇಂತಹ ಅನಿವಾರ್ಯವನ್ನು ಸೃಷ್ಟಿಸಿದವು. ಬೆಳಗಾವಿ ಹಾಗೂ ಮತ್ತಿತರೆಡೆ ಆಗಾಗ ಉದ್ಭವಿಸಿದ ಗಡಿವಿವಾದದ ನಡುವೆಯೂ ಕನ್ನಡಕ್ಕೆ ಧಕ್ಕೆಯಾದಾಗಲೆಲ್ಲ ತೊಡೆತಟ್ಟಿ ಈ ನೆಲದವರು ಹೋರಾಟ ಮಾಡಿದ್ದಾರೆ. ಆಳುವ ಸರಕಾರಗಳು ಪರಕೀಯ ಭಾಷೆಯ ರಾಜ್ಯದ ಅಧೀನಕ್ಕೆ ಒಳಪಟ್ಟು ಜರ್ಜರಿತವಾಗಿದ್ದ ಕನ್ನಡದ ಈ ಭಾಗವನ್ನು ತಮ್ಮವರೇ ನಿರ್ಲಕ್ಷ್ಯ ಮಾಡಿದಾಗ, ಈ ಭಾಗದ ಜನಪ್ರತಿನಿಧಿಗಳು ಅಭಿವೃದ್ಧಿ ಇಚ್ಛಾಶಕ್ತಿ ತೋರದಿದ್ದಾಗ ಇಲ್ಲಿನವರು ತಮ್ಮವರ ಸರಕಾರಗಳ ವಿರುದ್ಧವೇ ತೊಡೆತಟ್ಟಬೇಕಾಯಿತು. ಈ ಹೋರಾಟಗಳ ಒಟ್ಟಾರೆ



ಫಲಶ್ರುತಿಯೇ ಇಂದಿನ ಸುವರ್ಣ ಸೌಧ ನಿರ್ಮಾಣಕ್ಕೆ ವೇದಿಕೆ ಒದಗಿಸಿತು. ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿಯೇ ನಿರ್ಮಾಣವಾದ ಸುವರ್ಣ ಸೌಧ ಕಳೆದ 55 ವರ್ಷಗಳಿಂದ ಕೇಳಿಬರುತ್ತಿರುವ ಉತ್ತರ ಕರ್ನಾಟಕದ ಕೂಗಿಗೆ ಸ್ಪಂದಿಸುವ ಶಕ್ತಿ ಕೇಂದ್ರವಾಗಬೇಕಿದೆ. ಈ ಭಾಗದವರ ನಿರೀಕ್ಷೆಗಳು ಬೆಟ್ಟದಷ್ಟಿವೆ. ಆದರೆ ಆಳುವ ಸರಕಾರಗಳು ಈ ಭಾಗದ ಜನಸಮುದಾಯದ ನಿರೀಕ್ಷೆ ತಕ್ಕಂತೆ ರಾಜಕೀಯ ಇಚ್ಛಾಶಕ್ತಿ ತೋರಿ ಪ್ರಾದೇಶಿಕ ಅಸಮತೋಲನ ನಿವಾರಣೆ ಮಾಡುವ ಶಕ್ತಿ ಕೇಂದ್ರವಾಗಿ ಮಾರ್ಪಡಿಸುವ ದಾಷ್ಟ್ಯವನ್ನು ತೋರಬೇಕಾಗಿದೆ. ಕನ್ನಡಕ್ಕಾಗಿ ಹೋರಾಟದ, ಏಕೀಕೃತ ಕರ್ನಾಟಕ ಅಸ್ತಿತ್ವಕ್ಕೆ ಬರಲು ಕಾರಣವಾದ, ಆಡಳಿತ ಹಾಗೂ ಶಿಕ್ಷಣದಲ್ಲಿ ಕನ್ನಡದ ಕಡ್ಡಾಯ-ಕ್ಕೆ ಹೋರಾಟ ಮಾಡಿದ ಇಲ್ಲಿನ ಜನರ ನಿರೀಕ್ಷೆ ಇದು. ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡಲು ಅಗತ್ಯ ಸಂವಿಧಾನದ 371ನೇ ಕಲಂಗೆ ತಿದ್ದುಪಡಿ ತರಲು ಕೇಂದ್ರ ಸರಕಾರದ ಸಚಿವ ಸಂಪುಟ ಸಭೆ ಅನುಮೋದನೆ ನೀಡಿ ಸಂಸತ್ತಿನಲ್ಲಿ ಮಂಡನೆಗೆ ಸಿದ್ಧವಾಗಿದೆ. ಈಗ ಈ ಭಾಗದ ಆಶಾಕಿರಣವಾಗಿ ಸುವರ್ಣ ಸೌಧ ಅಧಿವೇಶನಕ್ಕೆ ಸಿದ್ಧಗೊಂಡಿದೆ. ಒಟ್ಟಿನಲ್ಲಿ ಇವೆರಡೂ ಉತ್ತರ ಕರ್ನಾಟಕದ ಒಟ್ಟಾರೆ ಅಭಿವೃದ್ಧಿಯ ಮಹತ್ವದ ಮೈಲುಗಲ್ಲು. ಆದರೆ ಉದ್ಘಾಟನೆ ಅನಂತರ ಏಕೀಕೃತ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಚಳವಳಿ ರೂಪಿಸಿದ ಈ ನೆಲದ ಅಭಿವೃದ್ಧಿ ನಿಟ್ಟಿನಲ್ಲಿ ಸುವರ್ಣಸೌಧ ಶಕ್ತಿ ಕೇಂದ್ರವಾಗಬೇಕಿದೆ.

ಬೆಳಗಾವಿಯಲ್ಲಿ ಕಳೆದ 6–7 ವರ್ಷಗಳಲ್ಲಿ ನಡೆದಷ್ಟು ಅಭಿವೃದ್ಧಿ ಕಾರ್ಯ ಕಳೆದ ಅರ್ಧ ಶತಕದಲ್ಲೂ ನಡೆದಿಲ್ಲ. ಕನ್ನಡಿಗರ ಹೋರಾಟಕ್ಕೆ ರಾಜ್ಯ ಸರಕಾರ ಸ್ಪಂದಿಸುತ್ತಿದೆ. ನಾಲ್ಕು ದಶಕಗಳ ಹೋರಾಟ ನೆನಪಿಸಿಕೊಂಡರೆ ಮರಾಠಿಗಳ ಪ್ರಾಬಲ್ಯ ಹೊಂದಿದ್ದ ಬೆಳಗಾವಿಯಲ್ಲಿ ಸುವರ್ಣ ಸೌಧ ನಿರ್ಮಾಣಗೊಂಡಿದೆ ಎಂಬುದನ್ನು ನಂಬಲಾಗುವುದಿಲ್ಲ. ಸಹಸ್ರಾರು ಕನ್ನಡಿಗರ ಶ್ರಮ ,ಹೋರಾಟದ ಫಲವಾಗಿ ಸುವರ್ಣ ಸೌಧ ತಲೆ ಎತ್ತುವಂತಾಗಿದೆ.


ಬೆಳಗಾವಿ ಸಮೀಪದ ಹಲಗಾ- ಬಸ್ತವಾಡ ಪ್ರದೇಶದ ಗುಡ್ಡದ ಮೇಲೆ 127 ಎಕರೆ ಜಾಗದಲ್ಲಿ 60,398 ಚ.ಮೀ ವಿಸ್ತೀರ್ಣದಲ್ಲಿ ಕಟ್ಟಲಾಗಿರುವ ಸುವರ್ಣಸೌಧದಲ್ಲಿ ಸಂಸತ್ ಭವನದಲ್ಲಿರುವಂತೆ ಸೆಂಟ್ರಲ್ ಹಾಲ್ ಹಾಗೂ ಸಭಾಂಗಣಗಳನ್ನು ನಿರ್ಮಿಸಿರುವುದು ವಿಶೇಷ. ಸರಕಾರ ಕೇವಲ 3–4 ವರ್ಷಗಳಲ್ಲಿ 391 ಕೋಟಿ ರೂ. ವೆಚ್ಚದಲ್ಲಿ ಭವ್ಯ ಕಟ್ಟಡ ನಿರ್ಮಿಸಿದ್ದು ಹೆಮ್ಮೆಯ ಸಾಧನೆ. ಸುವರ್ಣ ಸೌಧದಲ್ಲಿ ವರ್ಷದ 365 ದಿನಗಳಲ್ಲಿಯೂ ಆಡಳಿತ ಕಾರ್ಯಚಟುವಟಿಕೆಗಳು ನಡೆಯಬೇಕು. ಇಲ್ಲಿಗೆ ಕೆಲವು ಇಲಾಖೆಗಳನ್ನು ಸ್ಥಳಾಂತರಿಸಿದರೆ ಅನುಕೂಲವಾಗುತ್ತದೆ. ಮುಖ್ಯಮಂತ್ರಿ ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಲಿದ್ದಾರೆ, ಈ ಭಾಗದ ಜನತೆಯ ಕೂಗು ಜನನಾಯಕರನ್ನು ತಲುಪಲಿ, ಸ್ನೇಹ ಸೌಹಾರ್ದತೆಗಳು ಈ ನೆಲದಲ್ಲಿ ಸದಾ ನೆಲೆಸಲಿ ಎಂದು ಹಾರೈಸೋಣ.

**ಕೃಪೆ : ಉದಯವಾಣಿ**

## ಅಭಿಮತ ಬಿಡುಗಡೆ



ದೆಹಲಿ ಕರ್ನಾಟಕ ಸಂಘದ ಮುಖವಾಣಿ 'ಅಭಿಮತ' ಪತ್ರಿಕೆಯ 23 ನೇ ಸಂಚಿಕೆಯನ್ನು ಕನ್ನಡ ಭುವನೇಶ್ವರಿಗೆ ಎಂಟನೆ ಜ್ಞಾನಪೀಠ ಪ್ರಶಸ್ತಿಯ ಗರಿ ಮುಡಿಸಿದ ಡಾ. ಚಂದ್ರಶೇಖರ್ ಕಂಬಾರರು ಬಿಡುಗಡೆಗೊಳಿಸಿದರು. 1990 ನೇ ಇಸ್ವಿ ಅಕ್ಟೋಬರ್‌ನಲ್ಲಿ ಜನ್ಮತಾಳಿದ 'ಅಭಿಮತ' ಈಗ ಇಪ್ಪತ್ತೂರರ ವಸಂತಕ್ಕೆ ಕಾಲಿಟ್ಟ ಪ್ರಬುದ್ಧೆ. ಸಿ.ವಿ. ಗೋಪಿನಾಥ್, ಡಾ. ವೆಂಕಟಾಚಲ ಹೆಗಡೆ, ಚೆನ್ನು ಎಸ್. ಮಠದ, ಡಾ. ಟಿ.ಎಸ್. ಸತ್ಯನಾಥ್, ದಿ. ಸುಭಾ ಸಿನ್ನೂರ ದಾಸ್, ಡಿ.ಸಿ.ಎಸ್. ರಾವ್, ರಂಗಸ್ವಾಮಿ ಇನ್ನೂ ಅನೇಕರ ಶ್ರಮದಿಂದ ಹುಟ್ಟಿ ಬೆಳೆದ 'ಅಭಿಮತ' ಈಗ ನಾಡಿನ ಮೂಲೆಮೂಲೆಗಳಲ್ಲಿ ನೆಲೆಸಿದ ಕನ್ನಡಿಗರಿಗೆ ರಾಜಧಾನಿ ಕನ್ನಡಿಗರ ಆಗುಹೋಗುಗಳ ಪರಿಚಯ ನೀಡುತ್ತ ರಾಜಧಾನಿಯಲ್ಲಿ ಕನ್ನಡ ಸಂಸ್ಕೃತಿಯ ಬಾವುಟವನ್ನು ಎತ್ತರಕ್ಕೆ ಏರಿಸಿದೆಯೆಂದರೆ ತಪ್ಪಾಗಲಾರದು.



## ಸವಿನಯ ಬೀಳ್ಕೊಡುಗೆ



ಜನಕಪುರಿ ಕನ್ನಡ ಕೂಟದ ಹಿರಿಯ ಸದಸ್ಯ ಹಾಗೂ ದೆಹಲಿ ಕನ್ನಡಿಗರಿಗೆಲ್ಲ ಚಿರಪರಿಚಿತ ದಂಪತಿಗಳಾದ ಶ್ರೀ ಮೋಹನ್ ಶೆಟ್ಟಿ ಹಾಗು ಶ್ರೀಮತಿ ವಂದನಾ ಶೆಟ್ಟಿಯವರು ಬೆಂಗಳೂರಿಗೆ ನೂತನ ಕಾರ್ಯ ಜವಾಬ್ದಾರಿಯೊಂದಿಗೆ ತೆರಳಿದ್ದಾರೆ. ಸದಾ ಹಸನ್ಮುಖಿಯಾದ ಈ ದಂಪತಿಗಳಿಗೆ ಕೂಟದ ಸದಸ್ಯರು ಹಾಗೂ ದೆಹಲಿಯ ಎಲ್ಲ ಕನ್ನಡಿಗರ ಪರವಾಗಿ ಶುಭ ಕೋರುತ್ತ ದೇವರು ಅವರಿಗೆ ಆಯು, ಆರೋಗ್ಯ, ಐಶ್ವರ್ಯ ಕೊಟ್ಟು ಕಾಪಾಡಲಿ ಎಂದು ಹಾರೈಸುತ್ತೇವೆ.

**ವೆಂಕಟೇಶ್ ಎಂ.ವಿ.**

# ತುಳು ಸಾಹಿತ್ಯದ ದೊಡ್ಡಣ್ಣ ಕೆಮ್ತೂರು ದೊಡ್ಡಣ್ಣ ಶೆಟ್ಟರ ಕುರಿತು ವಿಶೇಷ ಉಪನ್ಯಾಸ



ಸ್ವಾತಂತ್ರ್ಯ ಪೂರ್ವ ಕಾಲಘಟ್ಟದಲ್ಲಿ ಕನ್ನಡ ನವೋದಯ ಚಳುವಳಿಯ ಜೊತೆಗೆ ಕರ್ನಾಟಕ ಏಕೀಕರಣಕ್ಕಾಗಿ ಹೋರಾಟವೂ ಜೊತೆಜೊತೆಯಾಗಿ ನಡೆಯಿತು. ಅದೇ ರೀತಿ ಕರಾವಳಿ ಕರ್ನಾಟಕದಲ್ಲಿ ತುಳು ಭಾಷಾ ಸಾಹಿತ್ಯದ ಏಳಿಗೆಯ ಬಗೆಗೆ ಕೂಡಾ ಅನೇಕ ಬಗೆಯ ಚಳುವಳಿಗಳು ನಡೆದುವು. ವಿವಿಧ ಬಗೆಯ ಸಂಘಟನೆಗಳು ಮತ್ತು ವ್ಯಕ್ತಿಗಳು ತುಳುವಿನ ಅಭಿವೃದ್ಧಿಗೆ ಬಹಳವಾಗಿ ದುಡಿದರು. ಹಾಗೆ ದುಡಿದ ಮಹನೀಯರಲ್ಲಿ ಕೆಮ್ತೂರು ದೊಡ್ಡಣ್ಣ ಶೆಟ್ಟರೂ ಒಬ್ಬರು. ತುಳುವರು ಅವರನ್ನು ಪ್ರೀತಿಯಿಂದ ತುಳು ಸಾಹಿತ್ಯದ ದೊಡ್ಡಣ್ಣ ಎಂದು ಕರೆಯುತ್ತಾರೆ. ತುಳು ಸಾಹಿತ್ಯಕ್ಕೆ ಅವರು ನೀಡಿದ ಕೊಡುಗೆಯನ್ನು ಈಚೆಗೆ ದೆಹಲಿಯಲ್ಲಿ ನೆನಪಿಸಿಕೊಳ್ಳಲಾಯಿತು.

ಉಡುಪಿಯ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಉಪನ್ಯಾಸಕರಾಗಿರುವ ಡಾ. ಎಕ್ಕಾರು ಗಣನಾಥ ಸೆಟ್ಟಿ ಅವರು ದಿನಾಂಕ 21.10 2012 ರಂದು ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಕೆಮ್ತೂರು ದೊಡ್ಡಣ್ಣ ಶೆಟ್ಟರ (1925–1985) ಕುರಿತು ವಿಶೇಷ ಉಪನ್ಯಾಸ ನೀಡಿದರು. ಅವರು ತಮ್ಮ ಉಪನ್ಯಾಸದಲ್ಲಿ 'ಅಧ್ಯಾಪಕ ವೃತ್ತಿ ಬಿಟ್ಟು, ಪಟೇಲರಾದ ಅವರು, ಆ ಅಧಿಕಾರದಲ್ಲಿ ಸುಖವಾಗಿ ಇದ್ದಿರಬಹುದಿತ್ತು. ಆದರೆ ತುಳು ಭಾಷೆಯ ಕಟ್ಟಾ ಅಭಿಮಾನಿಯಾಗಿದ್ದ ಕೆಮ್ತೂರರು ಹಾಗೆ ಮಾಡದೆ, ತುಳು ನಾಟಕಗಳನ್ನು ಬರೆಯತ್ತಾ, ತುಳು ನಾಟಕಗಳಲ್ಲಿ ಅಭಿನಯಿಸುತ್ತಾ, ನಾಟಕಗಳನ್ನು ನಿರ್ದೇಶನ ಮಾಡುತ್ತಾ, ತುಳು ಸಿನೇಮಾ ಮಾಡಲು ಹೊರಟು ಕೈಸುಟ್ಟುಕೊಳ್ಳುತ್ತಾ, ಮಕ್ಕಳಿಗಾಗಿ ಹಾಡುಗಳನ್ನು ಬರೆಯುತ್ತಾ, ಕೊನೆಗೆ ಎಲ್ಲವನ್ನೂ ಕಳಕೊಂಡು ತುಂಬಾ ಕಷ್ಟದಿಂದ ಜೀವಿಸಿದರು. 1955ರಷ್ಟು ಹಿಂದೆಯೇ ತುಳು ರಂಗಭೂಮಿಗೆ ನಟಿಯರನ್ನು ತಂದ ಶ್ರೇಯಸ್ಸು ಅವರದು. ಅವರು ಬರೆದ ಅನೇಕ ತುಳು ನಾಟಕಗಳು ಪ್ರಕಟವಾಗದೇ ಉಳಿದಿವೆ, ಆದರೆ ಅವರ ಹಸ್ತಪ್ರತಿಗಳನ್ನು ಆಧರಿಸಿ ಸಾವಿರಾರು ನಾಟಕಗಳು ಪ್ರದರ್ಶನಗೊಂಡಿವೆ' ಎಂದು ಡಾ. ಎಕ್ಕಾರ್ ಹೇಳಿದರು. ಅವರು ಮುಂದುವರಿದು 'ಕೆಮ್ತೂರು ಅವರು ಬರೆದ ದೇವರೆ ಗತಿ, ಮುತ್ತುನ ಮದ್ಮೆ, ಮಾಮಿಗಾವಂದಿ ಮರ್ಮಯೆ, ಬದಿದಾಂತಿ ಮದ್ಮೆ ಮೊದಲಾದ ನಾಟಕಗಳೂ, ಕುಶಲ ಅಭಿನಯ ಗೀತಾವಳಿ, ಕಸ್ತೂರಿ ಭಜನೆ ಹಾಡುಗಳು, ಜಾನಪದ ನೃತ್ಯ ಗೀತೆ ಮೊದಲಾದ ಕನ್ನಡ ಪ್ರಕಟನೆಗಳು, ಬೊಂಬಾಯಿ ಸಂಗತಿ, ತುಳುನಾಡ ಮಲ್ಲಿಗೆ, ರಾಮಾಯಣ ಪಾಡ್ದನೊ, ಬಾರಿ ಕಮ್ಮೆನೊ, ಮೊದಲಾದ ತುಳು ಕೃತಿಗಳು ಹಾಗೂ ಅಂಗದ ರಾಜಿ ಪ್ರಸಂಗ ಹಾಗೂ ಕೋಟಿ–ಚೆನ್ನಯ ಪ್ರತಾಪ ಯಕ್ಷಗಾನ ಪ್ರಸಂಗಗಳು ಅವರಿಗೆ ಹೆಸರು ತಂದು ಕೊಟ್ಟ ಪುಸ್ತಕಗಳಾಗಿವೆ' ಎಂದು ಹೇಳಿದರು.

ಕಾರ್ಯಕ್ರಮವನ್ನು ದೆಹಲಿಯ ಬಂಟ್ಸ್ ಕಲ್ಚರಲ್ ಅಸೋಸಿಯೇಷನ್ ಅವರು ತುಳುನಾಡು ಅಭಿವೃದ್ಧಿ ವೇದಿಕೆ ಮತ್ತು ಸೌತ್ ಕೆನರಾ ಕ್ಲಬ್ ಅವರ ಸಹಯೋಗದೊಂದಿಗೆ ಆಯೋಜಿಸಿತ್ತು. ಹಿರಿಯರಾದ ಶ್ರೀ ರಾಮಮೋಹನ ರಾವ್ ಅವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಕಾರ್ಯಕ್ರಮ ನಿರ್ವಹಿಸಿದರು.

**ಡಾ. ಪುರುಷೋತ್ತಮ ಬಿಳಿಮಲೆ**

# ಗೋಕರ್ಣ ಮಂಡಲದಿಂದ ಶಾರದಾ ಪೂಜೆಯ ಆಚರಣೆ

ಪ್ರತಿ ವರ್ಷದಂತೆ ಈ ಸಲವೂ ಸಹ ಗೋಕರ್ಣ ಮಂಡಲವು ವಿಜಯ ದಶಮಿಯ ದಿನದಂದು ಶಾರದಾ ಪೂಜೆಯನ್ನು ಆಚರಿಸಿತು. ದಿನಾಂಕ 24 ಅಕ್ಟೋಬರ್ 2012, ಬುಧವಾರ ದೆಹಲಿ ಕನ್ನಡ ಶಾಲೆಯಲ್ಲಿ ನಡೆದ ಈ ಪೂಜೆಯನ್ನು ಶ್ರೀ ವೇದಮೂರ್ತಿ ರಮೇಶ ವರ್ಧನರವರು ಶಾಸ್ತ್ರೋಕ್ತವಾಗಿ ನಡೆಸಿಕೊಟ್ಟರು. ಗೋಕರ್ಣ ಮಂಡಲದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಅಲ್ಲದೇ, ಕೆಲವು ಸಕ್ರಿಯ ಯುವ ಸದಸ್ಯರ ಆಗಮನ ಎಲ್ಲರಿಗೂ ಮುದ ತಂದಿತು. ನಂತರ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಹೊಸ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಕಾರ್ಯಕಾರಿ ಸಮಿತಿ ಇಂತಿದೆ:

**ಅಧ್ಯಕ್ಷರು :** ಡಾ. ನಾರಾಯಣ ಭಟ್ಟ, **ಉಪಾಧ್ಯಕ್ಷರು :** ಶ್ರೀ ಕಾಮೇಶ್ವರ ಭಟ್ಟ, **ಕಾರ್ಯದರ್ಶಿ :** ಶ್ರೀ ಮುರಳಿ ಕೃಷ್ಣ, **ಸಹ ಕಾರ್ಯದರ್ಶಿಗಳು :** ಶ್ರೀ ಸುಬ್ರಹ್ಮಣ್ಯ ಭಟ್ಟ ಹಾಗೂ ಶ್ರೀ ದೀಪಕ್ ಶರ್ಮ, **ಖಜಾಂಚಿ :** ಶ್ರೀಮತಿ ಶ್ಯಾಮಲಾ ಅಡ್ಕೋಳಿ

**ಸದಸ್ಯರು :** ಶ್ರೀಮತಿ ಸ್ವರ್ಣಲತಾ ಮೃತ್ಯುಂಜಯ, ಶ್ರೀ ಕೃಷ್ಣ ಹೆಗಡೆ, ಶ್ರೀ ಶ್ಯಾಮ (ಶ್ರೀಕಾಂತ) ಭಟ್ಟ, ಶ್ರೀ ಪ್ರತೀಕ್ ಹೆಗಡೆ, ಶ್ರೀ ಗೌತಮ ಹೆಗಡೆ.

**ಡಾ. ಶಿವರಾಮ ಶಾಸ್ತ್ರಿ**



**ದೆಹಲಿ ಕರ್ನಾಟಕ ಸಂಘವು ರಾಜ್ಯೋತ್ಸವ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ, ವಿಜೃಂಭಣೆಯಿಂದ ನವೆಂಬರ್ 24 ಮತ್ತು 25ರಂದು ಆಚರಿಸಲಿದೆ. ಕಳೆದ ವರ್ಷದಂತೆ ಈ ಬಾರಿಯೂ ಸ್ಥಳೀಯ ಕಲಾವಿದರಿಗೆ ತರಬೇತಿ ನೀಡಿ, ತರಬೇತಿ ಪಡೆದ ಶಿಬಿರಾರ್ಥಿಗಳಿಂದ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ತರಬೇತುದಾರರು ಕರ್ನಾಟಕದಿಂದ ಆಗಮಿಸಲಿದ್ದಾರೆ. ಇಚ್ಛೆಯುಳ್ಳ ಸ್ಥಳೀಯ ಕಲಾವಿದರಿಗೆ ನವೆಂಬರ್ 16 ರಿಂದ ತರಬೇತಿ ಪ್ರಾರಂಭವಾಗುವುದು. ನವೆಂಬರ್ 15ರ ಒಳಗಾಗಿ ಆಸಕ್ತಿಯುಳ್ಳವರು ತಮ್ಮ ಹೆಸರನ್ನು ಸಂಘದ ಕಛೇರಿಯಲ್ಲಿ ನೋಂದಾಯಿಸಬೇಕಾಗಿ ವಿನಂತಿ.**

**ಸಂಪರ್ಕಿಸಿ : 011-26109615 / 65643615**

# ಸಂಘದಲ್ಲೊಂದು ಸಂಗೀತ ಕಚೇರಿ




ಪ್ರಧಾನ ಮಂತ್ರಿಗಳ ಕಾರ್ಯಾಲಯದಲ್ಲಿ 22 ವರ್ಷಗಳವರೆಗೆ ಅಧಿಕಾರಿಯಾಗಿ, ಮಾಧ್ಯಮ ಸಲಹೆಗಾರರಾಗಿ ಗಣನೀಯ ಸೇವೆ ಸಲ್ಲಿಸಿದ್ದ ಎಚ್.ವೈ. ಶಾರದಾ ಪ್ರಸಾದ್ ಅವರ ತಂದೆ ಬಹುದೊಡ್ಡ ಸಂಗೀತ ವಿದ್ವಾಂಸರಾಗಿದ್ದರು. ದಿವಂಗತ ಎಚ್. ಯೋಗನರಸಿಂಹಂ ಅವರ ಸ್ಮರಣಾರ್ಥವಾಗಿ ದೆಹಲಿ ಕರ್ನಾಟಕ ಸಂಘ ಹಾಗೂ ದೇವಗೀತಂ ಚಾರಿಟೇಬಲ್ ಟ್ರಸ್ಟ್, ಮೈಸೂರು, ಇವರು ಜಂಟಿ-ಯಾಗಿ ಆಯೋಜಿಸಿದ ಸಂಗೀತ ಕಛೇರಿ ಕಾರ್ಯಕ್ರಮ ಸಂಘದ ಸಭಾಂಗಣದಲ್ಲಿ ಅಕ್ಟೋಬರ್ 27ರ ಶನಿವಾರ ನೆರವೇರಿತು. ದಿ. ಯೋಗನರಸಿಂಹಂ (1897–1971) ಅವರು ಅಪೂರ್ವ ವಾಗ್ಮಯಕಾರರಾಗಿದ್ದರು. ಮೈಸೂರು ಕೆ. ವಾಸುದೇವಾಚಾರ್ಯರ ಶಿಷ್ಯರಾಗಿದ್ದ ಅವರು ಸಂಸ್ಕೃತ, ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಸ್ವತಂತ್ರ ರಚನೆಗಳನ್ನು ರಚಿಸಿದ್ದಾರೆ. ಇವರ ಸಂಗೀತ ರಚನೆಗಳಲ್ಲಿ ಗೀತ ಮತ್ತು ಸಂಗೀತಗಳೆರಡೂ ಹದವಾಗಿ ಮೇಳೈಸಿವೆ. ದಿ. ಯೋಗನರಸಿಂಹಂ ಅವರ ಕೃತಿಗಳನ್ನು ಅವರ ಪುತ್ರಿ ನೀರಜಾ ಅಚ್ಚುತರಾವ್ ಮತ್ತು ಮೊಮ್ಮಗಳು ಡಾ. ಎಂ.ಎ. ಜ್ಯೋತಿ ಹಾಡಿನ ವಿವರಣೆಯೊಂದಿಗೆ ಸುಶ್ರಾವ್ಯವಾಗಿ ಹಾಡಿದರು. ಕಾಳಿದಾಸನ ಕುಮಾರ ಸಂಭವದ ಶ್ಲೋಕ, ತ್ಯಾಗರಾಜರ ಕೃತಿಗಳೊಡನೆ ಯೋಗನರಸಿಂಹಂ ಅವರ ಕೃತಿಗಳನ್ನು ಅವರದೇ ರಾಗ ಸಂಯೋಜನೆಯಲ್ಲಿ ಸ್ಪಂದನ ಸ್ಪರ್ಶಿಯಾಗಿ ಹಾಡಿ ಸಂಗೀತಾಸಕ್ತರನ್ನು ರಂಜಿಸಿದರು. ಎಚ್. ವೈ. ಶಾರದಾ ಪ್ರಸಾದ್ ಅವರ ಸೋದರರಾದ ಎಚ್.ವೈ. ಮೋಹನರಾಂ, ತಂಗಿ ನೀರಜಾ ಅಚ್ಚುತರಾವ್ ಅವರ ಮಗ-ಕೃಷ್ಣ ಅಚ್ಚುತ್ ಹಾಗೂ ಇಡೀ ಕುಟುಂಬಾದಿಯಾಗಿ ಬಂದು ಸಂಗೀತ ಕಛೇರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಸ್ವಾಗತ ಕೋರುತ್ತ, ಎಚ್.ವೈ. ಶಾರದಾ ಪ್ರಸಾದ್ ಕನ್ನಡಿಗರಾಗಿ ಮಾಡಿದ ಸೇವೆ, ಕನ್ನಡಿಗರ ಹೆಮ್ಮೆಯನ್ನು ರಾಷ್ಟ್ರದ ರಾಜಧಾನಿಯಲ್ಲಿ ಅಚ್ಚಳಿಯದಂತೆ ಮೆರೆಸಿದ್ದನ್ನು ಅಪ್ಯಾಯವಾಗಿ ನೆನೆದರು.

ಹಿರಿಯ ಕನ್ನಡಿಗ ಐ. ರಾಮಮೋಹನ ರಾವ್ ಅವರು ವಿದೂಷಿಯರಾದ ನೀರಜಾ ಅಚ್ಚುತ ರಾವ್ ಹಾಗೂ ಜ್ಯೋತಿ ಅವರಿಗೆ ಪುಷ್ಪಗುಚ್ಚ ಹಾಗೂ ಸಂಘದ ಸ್ಮರಣಿಕೆ ನೀಡಿ ಅಭಿನಂದಿಸಿದರು. ಅದ್ಭುತವಾಗಿ ಪಿಟೀಲು ನುಡಿಸಿದ ಪಿಟೀಲು ವಾದಕ ಡೆಲ್ಲಿ ಆರ್. ಶ್ರೀಧರ್ ಹಾಗೂ ಮೃದಂಗವಾದಕ ನಾಚಿಯಾರ್ ಕೋವಿಲ್ ಪಿ. ವೆಟ್ರಿಭೂಪತಿ ಅವರಿಗೂ ಪುಷ್ಪಗುಚ್ಚ ನೀಡಿ ಗೌರವಿಸಲಾಯಿತು. ಹಿರಿಯ ಕನ್ನಡಿಗರಾದ ಮೋಹನರಾಂ ಅವರನ್ನು ಸಂಘದ ಸ್ಮರಣಿಕೆ ಹಾಗೂ ಪುಷ್ಪಗುಚ್ಚ ನೀಡಿ ಗೌರವಿಸಲಾಯಿತು. ಇದಕ್ಕೆ ಶಾರದಾ ಪ್ರಸಾದ್ ಕುಟುಂಬದ ಸದಸ್ಯರೂ ದೆಹಲಿ ಕರ್ನಾಟಕ ಸಂಘ ಇಂಥದೊಂದು ಸಂಗೀತ ಕಛೇರಿಯನ್ನು ನಡೆಸಲು ಅನುವು ಮಾಡಿಕೊಟ್ಟದ್ದಕ್ಕಾಗಿ ತಮ್ಮ ಕೃತಜ್ಞತೆಯನ್ನು ಸಲ್ಲಿಸಿ ಸಂಘದ ಪದಾಧಿಕಾರಿಗಳಿಗೆ ಹೂಗುಚ್ಚ ನೀಡಿದರು.

ಇಂತಹ ಸಂಗೀತವೇ ಮಾರ್ದನಿಸಿದ ಶುಭ ಅವಕಾಶದಲ್ಲಿ ದೆಹಲಿ ಕನ್ನಡಿಗರ ಅಕ್ಕರೆಯ ಕಲಾವಿದ ಟಿ.ಎಸ್. ರಮೇಶ್ ಅವರನ್ನು ಆತ್ಮೀಯವಾಗಿ ಬೀಳ್ಕೊಡಲಾಯಿತು. WHO ದಲ್ಲಿ ಕಾರ್ಯನಿರತರಾಗಿದ್ದ ರಮೇಶ ಈಗ ಮರಳಿ ತಾಯ್ನಾಡಿಗೆ ಮರಳಿದ್ದಾರೆ. ಸದಾ ನಗುಮುಖದ, ಸ್ನೇಹಮಯಿ ರಮೇಶ ಎಲ್ಲರಿಗೂ ಬೇಕಾದವರಾಗಿದ್ದರು. ಸಂಗೀತ, ನಾಟಕ ಹೀಗೆ ಒಂದಲ್ಲಾ ಒಂದು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ



ತೊಡಗಿರುತ್ತಿದ್ದ ರಮೇಶ ಬೆಂಗಳೂರಿಗೆ ಮರಳುತ್ತಿದ್ದುದು ಎಲ್ಲ ಕಲಾ ಬಾಂಧವರಿಗೂ ಬೇಸರದ ಸಂಗತಿ. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಹಾಗೂ ಐ. ರಾಮಮೋಹನ ರಾವ್ ಅವರು ಶಾಲು ಹೊದೆಸಿ, ಗಂಧದ ಹಾರ, ಸಂಘದ ಸ್ಮರಣಿಕೆ ನೀಡಿ ಟಿ.ಎಸ್. ರಮೇಶ್ ಅವರ ಮುಂದಿನ ಜೀವನ ಸುಖಮಯವಾಗಿರಲಿ ಅವರ ಕಲಾಪ್ರೇಮ ನಿರಂತರವಾಗಿರಲಿ ಎಂದು ಹಾರೈಸಿದರು.

**ರೇಣುಕಾ ನಿಡಗುಂದಿ**

# 'ಕವಿ ನಮನ' ಒಂದು ಅಪೂರ್ವ ಸಂಜೆ

ದೆಹಲಿ ಮಿತ್ರ ಮತ್ತು ರಾಜೇಂದ್ರ ನಗರ ಕನ್ನಡ ಬಳಗ ಜಂ-ಟಿಯಾಗಿ ಅಕ್ಟೋಬರ್ 7ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಪ್ರತಿಭಾನ್ವಿತ ಕಲಾವಿದೆ ಮಾನಸೀ ಪ್ರಸಾದ್ ಅವರಿಂದ ಕನ್ನಡದ ಪ್ರಸಿದ್ಧ ಕವಿಗಳ ಆಯ್ದ ಕವನಗಳ 'ಕವಿ ನಮನ' ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ದೆಹಲಿ ಮಿತ್ರದ ವಸಂತ ಶೆಟ್ಟಿ ಬೆಳ್ಳಾರೆ ಅವರು ಸ್ವಾಗತಿಸಿದರು. ರಾಜೇಂದ್ರ ನಗರ ಕನ್ನಡ ಬಳಗದ ಅಧ್ಯಕ್ಷರಾದ ಶ್ರೀ ಸತ್ಯನಾರಾಯಣ ಶೆಟ್ರು ಹಾಗೂ ಕಾರ್ಯದರ್ಶಿ ಬಿ.ರವೀಂದ್ರನಾಥ್ ಕಲಾವಿದರನ್ನು ಅಭಿನಂದಿಸಿದರು.



# ಮೈಸೂರು ದಸರ-ದೆಹಲಿಯಲ್ಲೂ ಸುಂದರ



400 ವರ್ಷಗಳ ಸುದೀರ್ಘ ಇತಿಹಾಸವುಳ್ಳ ಮೈಸೂರ ದಸರ ವಿಶ್ವವಿಖ್ಯಾತ. ಮೈಸೂರು ಅರಸರ ಆಳ್ವಿಕೆಯ ಪ್ರತೀಕವಾದ ಈ ಹಬ್ಬ ಇದೀಗ ನಾಡಹಬ್ಬವಾಗಿ ಆಚರಿಸಲ್ಪಡುತ್ತಿದೆ. ದಸರೆಯ ಅಂಗವಾಗಿ ಮಣ್ಣಿನ ಬೊಂಬೆಗಳನ್ನು ಇಟ್ಟು ಪೂಜಿಸುವುದು ಒಂದು ಪರಿಪಾಠ. ಈ ಪರಂಪರೆ ಕ್ರಮೇಣ ಕ್ಷೀಣಿಸುತ್ತಾ ಬಂದಿದ್ದರೂ ಈಗಲೂ ಮೈಸೂರು, ಬೆಂಗಳೂರು ಮೊದಲಾದ ನಗರಗಳಲ್ಲಿ ಬೊಂಬೆ ಪೂಜೆಯನ್ನು ಕಾಣಬಹುದು. ಇಂದಿನ ಪೀಳಿಗೆಯವರೆಗೆ ನಮ್ಮ ಸಂಸ್ಕೃತಿಯ ಪರಿಚಯ ನೀಡಲು ಈ ಆಚರಣೆಗಳು ಅತ್ಯವಶ್ಯಕ.

3 ದಶಕಗಳಿಗೂ ಮಿಗಿಲಾಗಿ ನಾಡಿನಿಂದ ದೂರವಿದ್ದರೂ ನಮ್ಮ ಪರಂಪರೆಯನ್ನು ದೆಹಲಿಯಲ್ಲಿ ಇಂದಿಗೂ ಆಚರಿಸಿಕೊಂಡು ಬರುತ್ತಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನ ಸಕ್ರಿಯ ಸದಸ್ಯೆ ರಂಗಮಣಿ ರಾವ್ ಅವರು ಕಳೆದ ಹತ್ತಾರು ವರ್ಷಗಳಿಂದಲು ಈ ಬೊಂಬೆ ಪೂಜೆಯನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಪ್ರತಿವರ್ಷ ವೈವಿಧ್ಯಮಯ ಥೀಮ್‌ಗಳನ್ನೊಳಗೊಂಡ ಬೊಂಬೆ ಪ್ರದರ್ಶನವನ್ನು ಅತ್ಯಂತ ಅಚ್ಚುಕಟ್ಟಾಗಿ ಆಚರಿಸುವ ರಂಗಮಣಿಯವರ ಈ ಬಾರಿಯ ಥೀಮ್-ಭಾರತೀಯ ಹಬ್ಬ ಆಚರಣೆಗಳು. ವಿವಿಧತೆಯಲ್ಲಿ ಏಕತೆಯನ್ನು ನಿರೂಪಿಸುವ ನಮ್ಮ ಭಾರತದ ಸರ್ವಧರ್ಮ ಸಮನ್ವಯತೆ ಬೊಂಬೆ ಪೂಜೆಯ ವಿಶೇಷತೆ.

ವಿಶಾಲವಾದ ಹಾಲ್‌ನಲ್ಲಿ ಸಾಂಪ್ರದಾಯಿಕವಾಗಿ ಹಂತ ಹಂತಗಳ ಮೇಲೆ ರಾಮ, ಲಕ್ಷ್ಮಣ, ಸೀತೆ, ಹನುಮ, ಚಂದನದ ಬೊಂಬೆ, ಮೊದಲಾದ ಮಣ್ಣಿನ ಬೊಂಬೆಗಳನ್ನು ಅತ್ಯಂತ ಶಿಸ್ತುಬದ್ಧವಾಗಿ ಜೋಡಿಸಲಾಗಿತ್ತು. ಇದಲ್ಲದೇ ಲೋಡಿ, ಸಂಕ್ರಾಂತಿ, ಮಹಾಶಿವರಾತ್ರಿ, ಓಣಂ, ವರಮಹಾಲಕ್ಷ್ಮಿ ವ್ರತ, ಜನ್ಮಾಷ್ಟಮಿ, ದಸರ, ದೀಪಾವಳಿ, ರಾಮನವಮಿ, ಗಣೇಶ ಚತುರ್ಥಿ, ತೀಜ್, ಹೋಳಿ ಹಬ್ಬಗಳ ಆಚರಣೆಯನ್ನು ಬಿಂಬಿಸುವ ಬೊಂಬೆಗಳು ಮನಸೆಳೆಯುತ್ತಿದ್ದವು. ಇದರೊಡನೆ ಗುರುನಾನಕ್ ಜಯಂತಿ, ರಂಜಾನ್ ಹಾಗೂ ಕ್ರಿಸ್‌ಮಸ್ ಆಚರಣೆ ನಿಜಕ್ಕೂ ವಿಶೇಷ ಮೆರಗು ತಂದಿತ್ತು. ಈ ಬಾರಿಯ ಬೊಂಬೆ ಪ್ರದರ್ಶನ ರಂಗಮಣಿ ಅವರ ಕಲಾತ್ಮಕತೆಗೆ ಸಾಕ್ಷಿಯಾಗಿತ್ತು. ಹತ್ತು ದಿನಗಳ ಆಚರಣೆಯ ಜೊತೆಗೆ ತಮ್ಮೆಲ್ಲಾ ಸ್ನೇಹಿತೆಯರನ್ನು ಅರಿಸಿನ-ಕುಂಕುಮಕ್ಕೆ ಕರೆದು ಊಟೋಪಚಾರಗಳಿಂದ ಸತ್ಕರಿಸಿದ ರಂಗಮಣಿ ಅವರ ಉತ್ಸಾಹ ಪ್ರಶಂಸನೀಯ. ಪತ್ನಿಗೆ ಸದಾ ಬೆಂಬಲ, ಪ್ರೋತ್ಸಾಹ ನೀಡಿ ಸಹಕರಿಸಿದ ಪತಿ ರಾವ್ ಅವರು ಅಭಿನಂದನಾರ್ಹರು.

ಉಷಾ ಭರತಾದ್ರಿ


**Saujanya Printing Press**

A HOUSE OF QUALITY PRINTING

D-47, Okhla Industrial Area, Phase-I,
New Delhi - 110 020
Phone : 40520770, 26815778
Mobile : 9811104398, 9811604398
e-mail : saujanyapp2010@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್


ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

ಅಭಿನಂದನೆ

# ವಿಶ್ವಬ್ಯಾಂಕ್‌ಗೆ ಎಲ್.ಕೆ. ಅತೀಕ್ ನೇಮಕ



ವಿಶ್ವಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕರ ಹಿರಿಯ ಸಲಹೆಗಾರರಾಗಿ ರಾಜ್ಯದ ಹಿರಿಯ ಐಎಎಸ್ ಅಧಿಕಾರಿ ಎಲ್.ಕೆ.ಅತೀಕ್ ಅವರನ್ನು ಕೇಂದ್ರ ಸರ್ಕಾರ ನೇಮಕ ಮಾಡಿದೆ.

ಅತೀಕ್ ಅವರು ಐದು ವರ್ಷದಿಂದ ದೆಹಲಿಯಲ್ಲಿ ಪ್ರಧಾನಿ ಕಚೇರಿಯ ಜಂಟಿ ಕಾರ್ಯದರ್ಶಿಯಾಗಿದ್ದಾರೆ. ಮುಂದಿನ ಮೂರು ವರ್ಷಗಳ ಅವಧಿಗೆ ವಿಶ್ವಬ್ಯಾಂಕಿಗೆ ನಿಯೋಜನೆಗೊಂಡಿದ್ದಾರೆ.

ವಿಶ್ವಬ್ಯಾಂಕಿನಲ್ಲಿ ವಿವಿಧ ದೇಶಗಳನ್ನು ಪ್ರತಿನಿಧಿಸುವ 35 ಕಾರ್ಯನಿರ್ವಾಹಕ ನಿರ್ದೇಶಕರಿದ್ದಾರೆ. ಇವರು ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರು. ವಿವಿಧ ಯೋಜನೆಗಳಿಗೆ ಹಣಕಾಸಿನ ನೆರವು ಒದಗಿಸುವುದು ಸೇರಿದಂತೆ ಇತರ ಅನೇಕ ಅಂತರರಾಷ್ಟ್ರೀಯ ಹಣಕಾಸು ವಿಷಯಗಳಿಗೆ ಸಂಬಂಧಿಸಿದ ವಿಚಾರಗಳಲ್ಲಿ ಆಡಳಿತ ಮಂಡಳಿ ತೆಗೆದುಕೊಳ್ಳುವ ತೀರ್ಮಾನವೇ ಅಂತಿಮ.

ವಿಶ್ವದ ಹಲವು ದೇಶಗಳನ್ನು ಸೇರಿಸಿ ಒಂದೊಂದು ಗುಂಪು ರಚಿಸಲಾಗಿದೆ. ಭಾರತ, ಭೂತಾನ್, ಶ್ರೀಲಂಕಾ ಮತ್ತು ಬಾಂಗ್ಲಾದೇಶಗಳು ಒಂದು ಗುಂಪಿನಲ್ಲಿವೆ. ಬಿಹಾರ ಮೂಲದ ನಿವೃತ್ತ ಐಎಎಸ್ ಅಧಿಕಾರಿ ಎಂ.ಎನ್. ಪ್ರಸಾದ್ ಅವರು ವಿಶ್ವಬ್ಯಾಂಕಿನಲ್ಲಿ ಈ ಗುಂಪಿಗೆ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ ರೀತಿಯ ಪ್ರತಿಯೊಬ್ಬ ಕಾರ್ಯನಿರ್ವಾಹಕ ನಿರ್ದೇಶಕರಿಗೂ ಇಬ್ಬರು ಹಿರಿಯ ಸಲಹೆಗಾರರು ಮತ್ತು ಇಬ್ಬರು ಸಲಹೆಗಾರರು ಇರುತ್ತಾರೆ. ಈ ತಂಡಕ್ಕೆ ಹಿರಿಯ ಸಲಹೆಗಾರರಾಗಿ ಅತೀಕ್ ನೇಮಕಗೊಂಡಿದ್ದಾರೆ. ಮಹತ್ವದ ಈ ಹುದ್ದೆಗೆ ಆಯ್ಕೆಯಾದ ರಾಜ್ಯದ ಐಎಎಸ್ ಅಧಿಕಾರಿಗಳಲ್ಲಿ ಇವರು ಎರಡನೆಯವರು. ಈ ಹಿಂದೆ ಇದೇ ಹುದ್ದೆಗೆ ಕೆ.ಪಿ.ಕೃಷ್ಣನ್ ನೇಮಕಗೊಂಡಿದ್ದರು.

ದೇಶದ ವಿವಿಧ ಯೋಜನೆಗಳಿಗೆ ವಿಶ್ವಬ್ಯಾಂಕ್ ಅನುದಾನ ನೀಡುತ್ತಿದೆ. ಅದಕ್ಕಾಗಿ ಭಾರತ ಸರ್ಕಾರ ಮತ್ತು ವಿಶ್ವಬ್ಯಾಂಕ್ ನಡುವೆ ಸಮನ್ವಯ ಸಾಧಿಸುವುದು, ಹೆಚ್ಚು ಹೆಚ್ಚು ಹಣಕಾಸಿನ ನೆರವು ಪಡೆಯುವುದಕ್ಕೆ ಅಗತ್ಯ ಇರುವ ಸಮಾಲೋಚನೆಗಳನ್ನು ವಿಶ್ವಬ್ಯಾಂಕ್ ಜತೆ ನಡೆಸುವುದು ಅತೀಕ್ ಅವರ ಬಹುಮುಖ್ಯ ಕೆಲಸ. ವಿಶ್ವಬ್ಯಾಂಕ್‌ನ ಆಡಳಿತ ಮಂಡಳಿಯ ಸಭೆಗಳಲ್ಲಿ ಭಾಗವಹಿಸುವ ಅವಕಾಶ ಕೂಡ ಇದೆ. ತಮ್ಮ ಗುಂಪಿನ ರಾಷ್ಟ್ರಗಳ ಹಿತಾಸಕ್ತಿ ರಕ್ಷಣೆಯ ಜವಾಬ್ದಾರಿ ಕೂಡ ಇವರ ಮೇಲಿದೆ ಎನ್ನಲಾಗಿದೆ.

**ಸರಳ ಸಜ್ಜನಿಕೆಯ ಅತೀಕ್ ಅವರು ಈಗಾಗಲೇ ಹಿರಿಯ ಐ.ಎ.ಎಸ್. ಅಧಿಕಾರಿಯಾಗಿ ದಕ್ಷ ಸೇವೆ ಸಲ್ಲಿಸಿದ್ದಾರೆ. ಈಗ ವಿಶ್ವಬ್ಯಾಂಕ್‌ನ ಕಾರ್ಯ ನಿರ್ವಹಣೆಯಲ್ಲಿ ಅವರಿಗೆ ಯಶಸ್ಸು ಸಿಗಲಿ ಎಂದು ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ದೆಹಲಿ ಕನ್ನಡಿಗರ ಪರವಾಗಿ ಶುಭ ಕೋರುತ್ತೇವೆ.**

# ಮರಳಿ ಗೂಡಿಗೆ ಟಿ.ಎಸ್. ರಮೇಶ್

ತೆಮೆಮನೆ ಸುಬ್ಬಣ್ಣ ರಮೇಶ್, ದೆಹಲಿಯನ್ನು ಎರಡನೇ ಬಾರಿ ಬಿಟ್ಟು ಬೆಂಗಳೂರಿಗೆ ಹೋಗುತ್ತಿರುವ ವಿಷಯ ನನ್ನಂಥ ಅನೇಕರಿಗೆ ಜೀರ್ಣವಾಗುತ್ತಿಲ್ಲ. ಅವರ ಸದಾ ನಗುಮುಖ, ಏನಾದರೂ ಸೃಜನಶೀಲ ಚಟುವಟಿಕೆಗಳನ್ನು ಮಾಡಬೇಕೆಂಬ ಉತ್ಸಾಹ, ವೈಯಕ್ತಿಕ ಬದುಕನ್ನು ತನ್ನ ಮನೆಯಲ್ಲೇ ಬಿಟ್ಟು ಹೊರಬಂದು ತನ್ನದೇ ಆದ ಸಂಗೀತ ಲೋಕದಲ್ಲಿ ವಿಹರಿಸುವ ಬಯಕೆ ಇವೆಲ್ಲ ನೆನಪಿನಲ್ಲಿ ಮತ್ತೆ ಮತ್ತೆ ಮರುಕಳಿಸುತ್ತಿವೆ. ಕರ್ನಾಟಕ ಸಂಘದ ಸಮುಚ್ಚಯದೊಳಗೆ ಗೆಳೆಯ ರಮೇಶ ಕಾಲಿಟ್ಟರೆ ಒಂದಂತೂ ಖಾತ್ರಿ ಯಾವುದೋ ಸಾಂಸ್ಕೃತಿಕ ಚಟುವಟಿಕೆ ನಡೆಯುತ್ತಿದೆ ಎಂಬುದು. ಕಲ್ಲಲ್ಲಿ ಹೆಸರು ಕೊರೆಸಿಕೊಂಡವರಿಗಿಂತ ಅದೆಷ್ಟೋ ಪಟ್ಟು ಹೆಚ್ಚು ಸಾಂಸ್ಕೃತಿಕವಾಗಿ ಕೆಲಸ ಮಾಡಿದ ರಮೇಶ್ ಎಂದಿಗೂ ಯಾವುದೇ ಬಣ, ಜಾತಿಯ ಗೋಜಿಗೆ ಹೋದವರಲ್ಲ. ಒಂದು ರೀತಿಯಲ್ಲಿ ಅಜಾತ ಶತ್ರು ಎನಿಸಿಕೊಂಡಿದ್ದ ರಮೇಶ್ ಎಲ್ಲರಿಗೂ ಸಲ್ಲುವವರಾಗಿದ್ದರು. ನಾನು ಮತ್ತು ರಮೇಶ್ ಮೊದಲು ರೇಡಿಯೋ, ಟಿ.ವಿ. ಕಾರ್ಯಕ್ರಮಗಳ ಮೂಲಕ ಪರಿಚಯವಾದವರು ನಂತರ 'ದಿನಕರ' ದ ನಾಟಕಗಳ ಮೂಲಕ ಇನ್ನಷ್ಟು ಹತ್ತಿರವಾದೆವು. ನನ್ನ ವಾರಿಗೆಯವರಾದ ರಮೇಶ್ ನನ್ನ ಹತ್ತಿರ ತಮ್ಮ ಬಾಲ್ಯದ ಅನೇಕ ಸಿಹಿಕಹಿ ನೆನಪುಗಳನ್ನು ಹಂಚಿಕೊಂಡಿದ್ದಾರೆ. ಶರಾವತಿ ಹಿನ್ನೀರಿನಲ್ಲಿ ತಮ್ಮ ತೋಟ, ಮನೆಗಳನ್ನು ಕಳೆದುಕೊಂಡ ಅನುಭವಗಳನ್ನು ನನ್ನ ಹತ್ತಿರ ಹೇಳಿಕೊಂಡಾಗ ನನಗೆ ತುಂಬಾ ದುಃಖವಾಗಿತ್ತು. ಇಂಥ ಅದೆಷ್ಟೋ ದುಃಖಗಳನ್ನು ನುಂಗಿ ನಮ್ಮನ್ನೆಲ್ಲ ತಮ್ಮ ಕೀ ಬೋರ್ಡ್ ಗಾರುಡಿಯಿಂದ ರಮಿಸುತ್ತಿದ್ದ ರಮೇಶ್ ತಮ್ಮ ಸರಳತೆಯಿಂದ ಸಂಘದ ಪ್ರತಿಯೊಬ್ಬ ಸದಸ್ಯ ಸದಸ್ಯೆಯರ ಹೃದಯ ಗೆದ್ದಿದ್ದರು. ಸಂಘಕ್ಕೆ ಅತಿರಥ ಮಹಾರಥ ಕಲಾವಿದರು ಬಂದಾಗ ಅವರ ಸಂಗೀತಕ್ಕೆ ಸಾಥ್ ಕೊಟ್ಟವರು ನಮ್ಮ ಹೆಮ್ಮೆಯ ರಮೇಶ್. ಹೀಗಾಗಿ ನಮ್ಮ ಎನ್.ಆರ್. ಶ್ರೀನಾಥ ರಮೇಶ್‌ಗೆ ದೆಹಲಿಯ ಹಂಸಲೇಖ ಎಂದು ಕರೆಯುತ್ತಿದ್ದರು. ನಿಜವಾಗಿಯೂ ಆ ಹೊಗಳಿಕೆ ಉತ್ಪ್ರೇಕ್ಷೆ ಅಲ್ಲವೇ ಅಲ್ಲ ಎಂಬುದು ನನ್ನ ಅಭಿಪ್ರಾಯ. ನಮ್ಮ ಟಿ. ಎಸ್. ರಮೇಶ್ ವಯಕ್ತಿಕ ಕಾರಣಕ್ಕಾಗಿ ಬೆಂಗಳೂರಿಗೆ ಹೋಗುತ್ತಿರುವುದು ನಮ್ಮ ಹೃದಯವನ್ನು ಹಾಗೂ ಕರ್ನಾಟಕ ಸಂಘದ ಸಾಂಸ್ಕೃತಿಕ ವಾತಾವರಣವನ್ನು ನಿರ್ವಾತವನ್ನಾಗಿ ಮಾಡಿದೆ. ಈ ನಿರ್ವಾತವನ್ನು ಭರಿಸುವುದಕ್ಕೆ ಬಹಳ ಸಮಯ ಹಿಡಿಯಬಹುದು...ಗೊತ್ತಿಲ್ಲ.

ಇಪ್ಪತ್ತೊಂಬತ್ತು ಅಕ್ಟೋಬರ್‌ನಂದು ಕರ್ನಾಟಕ ಎಕ್ಸ್‌ಪ್ರೆಸ್‌ನಲ್ಲಿ ಕುಳಿತು ನನಗೆ ಕರೆ ಮಾಡಿ ಮತ್ತೆ ದೆಹಲಿಗೆ ಬಂದಾಗ ಭೇಟಿಯಾಗೋಣ, ನೀವೂ ಬೆಂಗಳೂರಿಗೆ ಬಂದಾಗ ನಮ್ಮ ಮನೆಗೆ ಬರಬೇಕು ಎಂದು ಹೇಳಿದಾಗ ನನಗೆ ಭೋಜರಾಜ ಮತ್ತು ಕಾಳಿದಾಸರ ಅನ್ಯೋನ್ಯತೆಯ ನೆನಪಾಗಿ ಕಣ್ತುಂಬಿ ಬಂತು. ರಮೇಶ್ ಅಂಥ ಸರಳ ಗೆಳೆಯರು ಸಿಗುವುದು ವಿರಳ.

ಬಿಲ್‌ಗೇಟ್ಸ್ ಫೌಂಡೇಶನ್‌ನ ಸಂಸ್ಥೆಯಲ್ಲಿ ಮುಖ್ಯ ನಿರ್ವಾಹಕ ಅಧಿಕಾರಿಯಾಗಿ ಬೆಂಗಳೂರಿಗೆ ಹೋಗಿರುವ ನಮ್ಮ ರಮೇಶ್ ಹಾಗೂ ಅವರ ಪತ್ನಿ ಜಾಹ್ನವಿ ಮತ್ತು ಸದಾ ಅಪ್ಪನ ನೆರಳಾಗಿರುತ್ತಿದ್ದ ಮಗಳು ಸಿರಿಗೆ ಸಂಘದ ಶುಭಹಾರೈಕೆಗಳು. ತೆಮೆಮನೆ ರಮೇಶ್ ನಿಮ್ಮ ಜೀವನ ತೆಮೆ (ಬಿದಿರು) ಯಂತೆ ವಿಸ್ತಾರವಾಗಲಿ. ನಿಮ್ಮನ್ನು ದೆಹಲಿ ಸದಾ ಸ್ವಾಗತಿಸುತ್ತದೆ.

**ಸಂತೋಷ ಉಪಾಧ್ಯಾಯ**

## ಟಿ.ಎಸ್. ರಮೇಶ್‌ಗೆ ಸನ್ಮಾನ, ಬೀಳ್ಕೊಡುಗೆ



ಗಣೇಶ ಮಿತ್ರ ಮಂಡಳಿ ವತಿಯಿಂದ ದೆಹಲಿ ಕನ್ನಡಿಗ ರಮೇಶ್ ಅವರಿಗೆ ಆತ್ಮೀಯವಾಗಿ ಬೀಳ್ಕೊಡಲಾಯಿತು. ದಿನಾಂಕ 28.10.2012ರ ಸಂಜೆ ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ದೆಹಲಿ ಹಿರಿಯ ಕನ್ನಡಿಗ ಬಿ.ಎಸ್. ಮೇಟಿಯವರು ಮಾತನಾಡಿ ರಮೇಶ್ ಅವರ ಒಡನಾಟದ ಬಗ್ಗೆ ಮೆಲುಕು ಹಾಕಿದರು. ಮಿತ್ರರಾದ ಸುಧೀರ್ ಫಡ್ನೀಸ್ ಮತ್ತು ಶಿವಾನಂದ ಇಂಗಳೇಶ್ವರ ಅವರು ಮಾತನಾಡಿ ನಮ್ಮಗಳ ಅತ್ಯಂತ ಆತ್ಮೀಯ ಮಿತ್ರನನ್ನು ತಾಯ್ನಾಡಿಗೆ ಕಳುಹಿಸಲು ಬಹಳ ದುಃಖವಾಗುತ್ತಿದೆ ಎಂದು ಅಳಲನ್ನು ತೋರಿಸಿಕೊಂಡರು. ಗಣೇಶ ಮಿತ್ರ ಮಂಡಳಿಯ ಅಧ್ಯಕ್ಷರಾದ ಯು.ಎ. ಶರೀಫ್ ನಗುಮುಖದ ರಮೇಶರನ್ನು ಅಭಿನಂದಿಸಿ ಮಾತನಾಡಿದರು.

ಸಮಾರಂಭದಲ್ಲಿ ಗಣೇಶ ಮಿತ್ರ ಮಂಡಳಿಯ ಕಾರ್ಯದರ್ಶಿ ಶಶಿಕಾಂತ್ ಪಾಟೀಲ್, ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಜಂಟಿ ಕಾರ್ಯದರ್ಶಿ ರೇಣುಕಾ ನಿಡಗುಂದಿ, ಸದಸ್ಯರುಗಳಾದ ಆಂಜನೀ ಗೌಡ, ಟಿ.ಎಂ. ಮೈಲಾರಪ್ಪ, ಸಿ.ಆರ್. ಶ್ರೀನಿವಾಸ್, ಬಿ. ನಾರಾಯಣ ಮತ್ತು ಕೆ. ರಾಧಾಕೃಷ್ಣ, ಕೆ.ಎಸ್.ಜಿ. ಶೆಟ್ಟಿ ಹಾಗೂ ಇತರ ಕನ್ನಡ ಭಾಂದವರು ಇದೇ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**Delhi Karnataka Sangha's Abhimatha Monthly,**
**November -2012, Price Rs.1/- RNI Regn. No. 53405/91, DL-SW-15/4016/10-11-12**
**Printout Date : November 8th / 9th, Postal Date :10th / 11th, Total Pages-24**



Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press, C-95, Okhla Industrial Area, Phase-I, New Delhi-110020, Tel: 26815778, 40520770